ಆಗಸ್ಟ್ 2023

₹ 15/-

# ಯುಗರಶ್ಮಿ

ತ್ರೈಮಾಸಿಕ



- ಸಾಮಾಜಿಕ ಶಾಂತಿ
- ದೇಶವನ್ನಾಳುವವರಿಗೆ ಪೈಗಂಬರರ(ಸ) ಉತ್ತಮ ಮಾದರಿ
- ಸೃಷ್ಟಿಕರ್ತನ ಅಸ್ತಿತ್ವದ ಬಗ್ಗೆ ಜ್ಞಾನ
- ನೀನು ಮಾಡು – ಮಾಡಬೇಡ

> “ಭೂಮಿಯಲ್ಲಿ ಕಲಹವನ್ನುಂಟುಮಾಡಬೇಡಿರಿ’ ಎಂದು ಅವರೊಡನೆ ಹೇಳುವಾಗ, 'ನಾವು ಶಾಂತಿಗಾಗಿ ಶ್ರಮಿಸುವವರು’ ಎಂದು ಅವರು ಮರುನುಡಿಯುತ್ತಾರೆ. ಎಚ್ಚರಿಕೆಯಿಂದಿರಿ! ಖಂಡಿತವಾಗಿಯೂ ಅವರೇ ಕಲಹವನ್ನು ಸೃಷ್ಟಿಸುವವರಾಗಿದ್ದಾರೆ. ಆದರೆ ಅವರು ಅದನ್ನು ಗ್ರಹಿಸುವುದಿಲ್ಲ.”
> (ಪವಿತ್ರ ಖುರ್‌ಆನ್ 2: 12, 13)

## ವಿಷಯ ಸೂಚಿಕೆ

ಯುಗರಶ್ಮಿ


| ವಿಷಯ | ಪುಟ |
|---|---|
| * ಶಕ್ತಿ ಪ್ರಯೋಗ ಇಸ್ಲಾಮಿಗೆ ಅನ್ಯ | 1 |
| * ಮುಹಮ್ಮದ್ ಪೈಗಂಬರರ[ಸ] ನುಡಿಮುತ್ತುಗಳು | 2 |
| * ಸಾಮಾಜಿಕ ಶಾಂತಿ | 3 |
| * ದೇಶವನ್ನಾಳುವವರಿಗೆ ಹ| ಮುಹಮ್ಮದ್ ಪೈಗಂಬರರ(ಸ) ಉತ್ತಮ ಮಾದರಿ | 11 |
| * ಸೃಷ್ಟಿಕರ್ತನಾದ ಅಲ್ಲಾಹನ ಅಸ್ತಿತ್ವದ ಬಗ್ಗೆ ಜ್ಞಾನ ಗಳಿಸಲಿರುವ ಮಾರ್ಗಗಳು | 18 |
| * ಜಾಗತಿಕ ಅಹ್ಮದಿಯಾ ಜಮಾಅತಿನ ಪಂಚಮ ಖಲೀಫ ಹ| ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಬಹುಮಾನ್ಯ ಪೋಪ್ ಫ್ರಾನ್ಸಿಸ್‌ರಿಗೆ ಬರೆದ ಪತ್ರ | 23 |
| * ನೀನು ಮಾಡು – ಮಾಡಬೇಡ | 25 |
| * ಪ್ರತಿಭೆಗಳು | 26 |
| * ವಾರ್ತೆಗಳು<br>• ಅಹ್ಮದಿಯಾ ವಿಚಾರ ಸಂಕಿರಣ ಸರ್ವಧರ್ಮ ಸಮ್ಮೇಳನ<br>• ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜಿಲ್ಲಾ ಇಜ್ತಿಮಾ • ಮಜ್ಲಿಸ್ ಅನ್ಸಾರುಲ್ಲಾಹ್ ಇಜ್ತಿಮಾ | 27 |
| * ನಿಧನ ವಾರ್ತೆಗಳು | 31 |
| * ಓದಿದ್ದು :<br>• ಚಿನ್ನದ ಶಾಯಿಯ ಕುರಾನ್ • 70 ಕೋಟಿ ಭಾರತೀಯರ ಒಟ್ಟು ಸಂಪತ್ತು • ಹತ್ತು ಮಿಲಿಯನ್ ವರ್ಷಗಳ ದಿನಾಂಕಗಳು ಕಂಠಪಾಠ • ಜನಸಂಖ್ಯೆ ಏರಿಸಲು ಹರಸಾಹಸ • ಆರ್‌ಎಸ್‌ಎಸ್ – ನೇತಾಜಿ ಸಿದ್ಧಾಂತ ಭಿನ್ನ • ಚೀನದಲ್ಲಿ ಮಾನವ ಸಂಪನ್ಮೂಲದ ಕೊರತೆ • ಅಸಾರಾಂ ಬಾಪುಜಿಗೆ ಜೀವಾವಧಿ ಶಿಕ್ಷೆ • ಬಾಲಕನಿಂದ ಅತ್ಯಾಚಾರ, ಕೊಲೆ • 200 ವರ್ಷಗಳ ಬಳಿಕ ದೇಗುಲಕ್ಕೆ ಪ್ರವೇಶ • 500 ಹುಡುಗಿಯರು ಒಬ್ಬ ಹುಡುಗ • 88.23 ಕೋಟಿ ರೂ.ಗೆ ಕಾರು ಹರಾಜು • 16 ಲಕ್ಷಕ್ಕೂ ಅಧಿಕ ಭಾರತೀಯರಿಂದ ಪೌರತ್ವ ತ್ಯಾಗ • 11 ಕೋ. ರೂ. ನೆರವು ನೀಡಿದ ಅನಾಮಿಕ • ಕೋಟಿ ಗಳಿಸುತ್ತಿದ್ದ ಬಾಲಕಿ ನಿವೃತ್ತಿ • 5 ಬಾರಿ ನಮಾಜ್‌ಗೆ ಕೋರ್ಟ್ ಸೂಚನೆ • ಬ್ರಿಟನ್‌ನ ಅತೀ ದೊಡ್ಡ ಮಸೀದಿ • ಅಮೆರಿಕದಲ್ಲಿ ಗರ್ಭಪಾತ ಮಾತ್ರೆ ನಿಷೇಧ • ಸಲಿಂಗರತಿ ಕಿರುಕುಳ • ಗರ್ಭಿಣಿಗೆ ಮರಣ ದಂಡನೆ • ಗುಜರಾತ್, ಎಲ್ಲ ಆರೋಪಿಗಳ ಖುಲಾಸೆ • ಮತ್ತೊಂದು ಭೂಮಿಯ ಸುಳಿವು • ಕೋಮು ಗಲಭೆ ಪ್ರಚೋದನೆ • ದೇವಾಲಯ ಪ್ರವೇಶ ನಿಷೇಧ • ಆದಿವಾಸಿ ಮಹಿಳೆಯರ ಅತ್ಯಾಚಾರ • ಬಿಷಪ್ ಬಂಧನ • ಇಷ್ಟ ದೇವತೆಯ ಮೆಚ್ಚಿಸಲು ತಲೆ ಕತ್ತರಿಸಿಕೊಂಡ ದಂಪತಿ • ಅತ್ಯಾಚಾರಿಗಳ ಬಿಡುಗಡೆ ಸರಿಯಲ್ಲ • ದಂಗೆ ಕೇಸಲ್ಲಿ 67 ಮಂದಿ ಖುಲಾಸೆ • ಒಬ್ಬ ವ್ಯಕ್ತಿಗೆ 40 ಪತ್ನಿಯರು! • ಇನ್ನು ವೀರ್ಯದಾನ ಬೇಡ • ಅತ್ಯಪೂರ್ವ ಶಸ್ತ್ರ ಚಿಕಿತ್ಸೆ • ಸಂಸ್ಕೃತ ಪರೀಕ್ಷೆ: ಪ್ರಥಮ ಸ್ಥಾನಿ ಮುಹಮ್ಮದ್ ಇರ್ಫಾನ್ • ದಲಿತರಿಬ್ಬರ ಹತ್ಯೆ • ಸೌಲಭ್ಯಕ್ಕಾಗಿ ಮಕ್ಕಳನ್ನು ಪಡೆಯಿರಿ • ವಕೀಲನಿಗೆ ವಿಚ್ಛೇದನ • ಕೆಲವು ಲಕ್ಷ ವರ್ಷಗಳಲ್ಲಿ ಭೂಮಿ ರಚನೆ! • 315 ಕೋಟಿ ದೇಣಿಗೆ • ಗರ್ಭಧಾರಣೆ ಪತ್ತೆ ! • ಮಠದಲ್ಲಿ ಅತ್ಯಾಚಾರ • ಮತ್ತೊಂದು ಗ್ರಹ ಪತ್ತೆ • ಲೈಂಗಿಕ ದೌರ್ಜನ್ಯ • ಆದಿವಾಸಿ ಯುವಕನ ಪಾದ ತೊಳೆದ ಸಿ.ಎಂ. • ಪಾಕ್ ಗುಪ್ತಚಾರಿಣಿ ಅಶ್ಲೀಲ ಸಂದೇಶಕ್ಕೆ ಆಕರ್ಷಿತರಾಗಿದ್ದ ವಿಜ್ಞಾನಿ • ಅಂಗಾಲು ನೆಕ್ಕುವಂತೆ ಬಲವಂತ • ಪಾಕ್ ನಿರ್ಣಯಕ್ಕೆ ಭಾರತ ಬೆಂಬಲ ! | 32 |
| * ಸಂಪಾದಕರಿಗೆ ಪತ್ರ | 44 |
| * ಪತ್ರಿಕಾ ಪ್ರಕಟಣೆಗಳು : • ಮುಸ್ಲಿಮರ ಭಿನ್ನಾಭಿಪ್ರಾಯ ಮತ್ತು ಅನೈತಿಕತೆ | 45 |
| • ಪ್ರತಿಯೊಬ್ಬ ವ್ಯಕ್ತಿಯ ಆಯ್ಕೆಯ ಹಕ್ಕು | 46 |
| * ಅಹ್ಮದಿಯಾ ಜಮಾಅತಿನ ಪ್ರಗತಿ | 48 |


ಮುಖಪುಟ ಚಿತ್ರ : ಮಸ್ಜಿದ್ ಬೈತುಲ್ ಮಹ್‌ದಿ, ದುರ್‌ಹಮ್, ಒಂಟಾರಿಯೋ, ಕೆನಡ.
(ಈ ನಿವೇಶನ 25 ಎಕ್ರೆ ವಿಸ್ತೀರ್ಣವಿದೆ)


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575001.
ಸಂಪರ್ಕಿಸಿರಿ : 9900410789

بِسۡمِ اللّٰہِ الرَّحۡمٰنِ الرَّحِیۡمِ
نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

# ಯುಗರಶ್ಮಿ

ಆಗಸ್ಟ್ 2023

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 39 | ಝುಹೂರ್ : 1403 ಹಿಜರೀ ಶಮ್ಸೀ | ಸಂಚಿಕೆ : 4 |
|---|---|---|---|

## ಶಕ್ತಿ ಪ್ರಯೋಗ ಇಸ್ಲಾಮಿಗೆ ಅನ್ಯ

ಈ ಲೋಕದಲ್ಲಿ ಜೀವಿಸಿದ್ದ ಒಬ್ಬನೇ ಒಬ್ಬ ಮುಸ್ಲಿಂ ಕೂಡ ಇಸ್ಲಾಮಿನ ಪ್ರಚಾರಕ್ಕಾಗಿ ಶಕ್ತಿ ಪ್ರಯೋಗಿಸಬೇಕೆಂದು ವಿಶ್ವಾಸವಿಟ್ಟಿಲ್ಲ. ತದ್ವಿರುದ್ಧವಾಗಿ, ಇಸ್ಲಾಂ ಅದರ ಸ್ವತಃಸಿದ್ಧವಾದ ಮಹತ್ವದ ಬಲದಿಂದಾಗಿ ಎಲ್ಲ ಕಾಲದಲ್ಲೂ ವಿಜಯ ಗಳಿಸಿದ್ದು. ಮುಸ್ಲಿಮರೆಂದು ಅಭಿಮಾನಗೊಂಡೇ ಇಸ್ಲಾಮನ್ನು ಖಡ್ಗ ಬಲದಿಂದ ಪ್ರಚಾರಪಡಿಸಬೇಕೆಂದು ಹೇಳುವವರು ಇಸ್ಲಾಮಿನ ಮಹತ್ವದ ಕುರಿತು ಅರಿವಿಲ್ಲದವರಾಗಿದ್ದಾರೆ.

(ತಿರಿಯಾಖುಲ್ ಖುಲೂಬ್ – ಪುಟ:39)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಲಜ್ಜೆ ಉತ್ತಮ ಸ್ವಭಾವವಾಗಿದೆ.
- ಯುದ್ಧವು ಒಂದು ತಂತ್ರವಾಗಿದೆ.
- ಮುಸ್ಲಿಂ ಬೈಯ್ಯುವುದು ಪಾಪವಾಗಿದೆ.
- ಸ್ವರ್ಗವು ಮಾತೆಯರ ಪಾದದಡಿಯಲ್ಲಿದೆ.
- ಪರಸ್ಪರ ಸಲಾಂ ಹೇಳುವುದನ್ನು ವ್ಯಾಪಿಸಿರಿ.
- ಸಲಹೆ ಕೇಳಲ್ಪಡುವವನು ವಿಶ್ವಸ್ತನಾಗಿರಬೇಕು.
- ಆಪತ್ತುಗಳು ಮಾತನ್ನು ಆಶ್ರಯಿಸಿಕೊಂಡಿರುತ್ತವೆ.
- ದಾರಿದ್ರ್ಯವು ಅವಿಶ್ವಾಸವಾಗಿ ಪರಿಣಮಿಸಬಹುದು.
- ಜನರು ಬಾಚಣಿಗೆಯ ಹಲ್ಲುಗಳಂತೆ (ಒಂದು ಗೂಡಿರಬೇಕು).
- ತಮ್ಮ ಆವಶ್ಯಕತೆಗಳಿಗೋಸ್ಕರ ರಹಸ್ಯವಾಗಿ ಸಹಾಯ ಕೇಳಿರಿ.
- ಸಂಬಂಧವನ್ನು ಮುರಿಯುವವನು ಸ್ವರ್ಗವನ್ನು ಪ್ರವೇಶಿಸಲಾರ.
- ಈ ಲೋಕ ವಿಶ್ವಾಸಿಗಳಿಗೆ ಕಾರಾಗೃಹವೂ ಅವಿಶ್ವಾಸಿಗಳಿಗೆ ಸ್ವರ್ಗವೂ ಆಗಿದೆ.
- ಒಂದು ತುಂಡು ಖರ್ಜೂರ ದಾನ ಮಾಡಿಯಾದರೂ ಅಗ್ನಿಯಿಂದ ರಕ್ಷಿಸಿಕೊಳ್ಳಿರಿ.
- ಕೊಟ್ಟ ಪಾರಿತೋಷಕವನ್ನು ಮರಳಿ ಪಡೆಯುವವನು ವಾಂತಿ ಮಾಡಿದ್ದನ್ನು ತಿನ್ನುವವನಂತೆ.
- ಕಡಿಮೆ ಮತ್ತು ಮಿತದಲ್ಲಿರುವ ಸಂಪತ್ತು ಧಾರಾಳವಾದ ಮತ್ತು ಅಲಕ್ಷ್ಯನನ್ನಾಗಿ ಮಾಡುವ ಸಂಪತ್ತಿಗಿಂತ ಉತ್ತಮವಾಗಿದೆ.

("ಹದೀಸ್ ಸಮಾಹಾರಂ" ಪುಸ್ತಕದಿಂದ ಆಯ್ದುದು)

**SWORDS CAN WIN TERRITORIES**
**BUT NOT HEARTS.**
**FORCES CAN BEND HEADS**
**BUT NOT MINDS.**

**- Hazrat Mirza Tahir Ahmad, Khalifathul Masih IV**

ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು
ಆದರೆ ಹೃದಯಗಳನ್ನಲ್ಲ.
ಬಲದಿಂದ ಶಿರಗಳನ್ನು ಬಾಗಿಸಬಹುದು
ಆದರೆ ಮನಸ್ಸುಗಳನ್ನಲ್ಲ.

– ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಚತುರ್ಥ ಖಲೀಫ

# ಸಾಮಾಜಿಕ ಶಾಂತಿ

◆ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

## ಕೆಡುಕಿನ ನಿವಾರಣೆ – ಸಾಮೂಹಿಕ ಜವಾಬ್ದಾರಿ

ಜನರಿಗೆ ಅರಿವು ನೀಡುವ ಜವಾಬ್ದಾರಿ ಸರಕಾರಕ್ಕೆ ವಹಿಸಿಕೊಡದೆ ಅದನ್ನು ಜನರು ಸಾಮೂಹಿಕವಾಗಿ ನಿರ್ವಹಿಸಬೇಕೆಂದೂ ಒಳಿತನ್ನು ಮಾಡಲು ಮತ್ತು ಕೆಡುಕಿನಿಂದ ತಮ್ಮನ್ನು ತಡೆದಿಟ್ಟುಕೊಳ್ಳಲು ಜನರಿಗೆ ಉಪದೇಶಿಸಬೇಕೆಂದೂ ಇಸ್ಲಾಮ್ ಆಜ್ಞಾಪಿಸುತ್ತದೆ.

ಅಭಿವೃದ್ಧಿ ಹೊಂದಿದ ಸಮಾಜಗಳಲ್ಲಿ ಮನೆಗಳಿಂದ ಮತ್ತು ಮಾರ್ಗಗಳಿಂದ ಮಾಲಿನ್ಯವನ್ನು ಸಂಗ್ರಹಿಸಲು ಪೌರ ಕೆಲಸಗಾರರನ್ನು ನೇಮಿಸುತ್ತಾರೆ. ಬಡದೇಶಗಳಲ್ಲಿ ಮನೆವಾರ್ತೆ ಕೆಲಸ ಮಾಡುವ ಹೆಂಗಸರು ಮಾಲಿನ್ಯಗಳನ್ನು ಮನೆಯ ಹೊರಗೆ ಮಾರ್ಗಗಳಿಗೆಸೆಯುತ್ತಾರೆ. ಮಾರ್ಗಗಳು ಮಾಲಿನ್ಯದಿಂದ ತುಂಬಿಸಲ್ಪಟ್ಟು ಜನರು ನಡೆಯಲು ಕಷ್ಟವಾಗುತ್ತದೆ. ಮನೆಯಲ್ಲಿರುವವರು ಮನೆಯನ್ನು ಶುಚಿಯಾಗಿ ಇಡುವುದು ಮನೆಯಲ್ಲಿರುವವರ ಜವಾಬ್ದಾರಿಯಾಗಿದೆ. ಆದರೆ ಮಾರ್ಗಗಳನ್ನು ಶುಚಿಯಾಗಿಡಲು ಯಾವುದಾದರೂ ವ್ಯವಸ್ಥೆ ಮಾಡಬೇಕಾಗಿದೆ.

ಜನರು ಸೇರುವ ಅಥವಾ ಬಳಸುವ ಪ್ರದೇಶಗಳನ್ನು ಸ್ವಚ್ಛವಾಗಿಡಬೇಕು ಎಂಬ ಮುಖ್ಯ ವಿಷಯವನ್ನು ಪಶ್ಚಿಮದ ಜನರು ಮನವರಿಕೆ ಮಾಡಿಕೊಂಡಿದ್ದರೂ ದುರಂತಕರವಾದುದೇನೆಂದರೆ ಸಮಾಜದಿಂದ ಅಪರಾಧವೆಂಬ ಮಾಲಿನ್ಯವನ್ನು – ಅದು ದಿನಂಪ್ರತಿ ಮನೆಗಳಿಂದ ಮಾರ್ಗಗಳಿಗೂ ಸಾರ್ವಜನಿಕ ಸ್ಥಳಗಳಿಗೂ ಸುರಿಯಲ್ಪಡುತ್ತವೆ – ನಿವಾರಿಸಿ ಸಮಾಜವನ್ನು ಶುದ್ಧೀಕರಿಸಬೇಕೆಂಬುದನ್ನು ಇನ್ನೂ ಮನವರಿಕೆ ಮಾಡಿಕೊಳ್ಳಬೇಕಷ್ಟೆ.

ಇಸ್ಲಾಮ್ ಈ ಪ್ರಶ್ನೆಯನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿದೆ. ಮೊದಲ ಜವಾಬ್ದಾರಿ ಮನೆಯ ಹಿರಿಯರದ್ದಾಗಿದೆ. ಅವರು ಮನೆಯವರಲ್ಲಿ ಕೆಡುಕು ತಲೆದೋರದಂತೆ ತಡೆಯಬೇಕು. ಎರಡನೆಯದಾಗಿ, ಇಸ್ಲಾಮ್ ಸಮಾಜದ ಮೇಲೆ ಜವಾಬ್ದಾರಿ ಹೊರಿಸುತ್ತದೆ. ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಕೆಡುಕಿನ ವಿರುದ್ಧ ಹೋರಾಡಲು ಅದು ಸಮಾಜದ ಮೇಲೆ ಜವಾಬ್ದಾರಿಯನ್ನು ಹೊರಿಸುತ್ತದೆ. ಅದು ಸರಕಾರದ ನಿಯಮಗಳ ಖಡ್ಗ ಬಳಸಿಯಲ್ಲ; ನಿರಂತರ ಉಪದೇಶ ಮತ್ತು ಜಾಣ್ಮೆಭರಿತ ಸಲಹೆಗಳ ಮೂಲಕ. ಉಪದೇಶ ಮತ್ತು ಸಹನೆಯಿಂದ ಪ್ರೇರೇಪಿಸುವ ಮೂಲಕ ಸಮಾಜವನ್ನು ಕೆಡುಕಿನಿಂದ ತಡೆಯಬೇಕೆಂದು ಪವಿತ್ರ ಖುರ್‌ಆನ್ ಹೇಳುತ್ತದೆ:

**"ಒಳಿತಿನ ಕಡೆಗೆ ಕರೆಯುವ, ಒಳಿತನ್ನು ಉಪದೇಶಿಸಿ ಕೆಡುಕನ್ನು ವಿರೋಧಿಸುವ ಒಂದು ಪಂಗಡ ನಿಮ್ಮಲ್ಲಿ ಇರಬೇಕಾಗಿದೆ. ಅವರೇ ವಿಜಯಶಾಲಿಗಳಾಗುವರು."** (ಪವಿತ್ರ ಖುರ್‌ಆನ್ 3: 105)

ಈ ವಚನದಲ್ಲಿ ಮುಫ್ಲಿಹೂನ್ (ವಿಜಯಶಾಲಿಗಳಾಗುವರು) ಎಂದು ಹೇಳಿದುದರ ಇನ್ನೊಂದು ಅರ್ಥ ಅವರೇ ಬದುಕಿ ಬಾಳಲು ಅರ್ಹತೆ ಹೊಂದುವರು ಎಂದು ಸಹ ಹೇಳಬಹುದಾಗಿದೆ.

ಸಾರ್ವಜನಿಕರ ಆರೋಗ್ಯ ಪರಿಪಾಲನೆ ಮತ್ತು ಅವರ ಸ್ವಾಸ್ಥ್ಯವನ್ನು ಕಾಪಾಡುವ ಜವಾಬ್ದಾರಿ ಪೂರ್ಣವಾಗಿ ಸರಕಾರೇತರ ಸಂಸ್ಥೆಗಳದ್ದೆಂದೂ ಸರಕಾರ ಅದರ ಬಗ್ಗೆ ಯಾವ ಪಾತ್ರವನ್ನೂ ವಹಿಸಲಿಕ್ಕಿಲ್ಲವೆಂದೂ ನಿಷ್ಕರ್ಷಿಸಬಾರದು. ಕಾನೂನು ಕಾಯಿದೆಗಳನ್ನು ರಚಿಸಿ ಅವುಗಳನ್ನು ಜಾರಿಗೊಳಿಸುವುದು ಸರಕಾರದ ವಿಶೇಷಾಧಿಕಾರಕ್ಕೆ ಸೇರಿದುದಾಗಿದೆ. ನಾನು ಒತ್ತಿ ಹೇಳಲು ಬಯಸುವುದೇನೆಂದರೆ, ಅಪರಾಧವನ್ನು ತಗ್ಗಿಸಲು, ನಿರುತ್ಸಾಹ ಪಡಿಸಲು ಮತ್ತು ಕನಿಷ್ಠಗೊಳಿಸಲು ಸರಕಾರದ ಖಾತೆಗಳು ಮಾತ್ರ ಸಾಕಾಗಲಾರವು ಎಂದು ಇಸ್ಲಾಮ್ ಪ್ರತಿಪಾದಿಸುತ್ತಿದೆ. ಮನೆಗಳಲ್ಲಿ ಮತ್ತು ಸಮಾಜದಲ್ಲಿ ಅಪರಾಧಿ ಮನೋಭಾವ ಬೆಳವಣಿಗೆ ಹೊಂದಲು ಅನುಮತಿಸಿದರೆ ಸರಕಾರ ಮಾಡಬಹುದಾದುದು ಅದರ ಲಕ್ಷಣಗಳನ್ನು ಆಗಾಗ ಅಳಿಸಿಬಿಡುವುದಾಗಿದೆ. ಅಪರಾಧದ ಬೇರು ಬಹಳ ಆಳವಾಗಿದ್ದು ಸರಕಾರದ ನಿಯಮಗಳ ದೀರ್ಘ ಹಸ್ತ ಅದನ್ನು ತಲಪಲಾರದು. ಆದುದರಿಂದ ಕುಟುಂಬಗಳ, ಧಾರ್ಮಿಕ ನಾಯಕರ ಮತ್ತು ಜನನಾಯಕರ ಪ್ರಥಮ ಕೆಲಸ ಸಮಾಜದಿಂದ ಕೆಡುಕುಗಳನ್ನು ಬೇರು ಸಹಿತ ಕಿತ್ತೆಸೆಯುವುದಾಗಿದೆ.

ಪವಿತ್ರ ಪ್ರವಾದಿ(ಸ) ಮೇಲೆ ಉಲ್ಲೇಖಿಸಿದ ಖುರ್‌ಆನಿನ ವಚನ ಮತ್ತು ಇತರ ವಚನಗಳನ್ನು ವೀಕ್ಷಿಸಿ ಹೀಗೆ ಹೇಳಿದರು: ನಿಮಗಿಂತ ಮೊದಲು ಅನೇಕ ಜನಸಮೂಹ ನಾಶವಾದುದು ಅವರು ಅಧಿಕಾರಿಗಳಿಗೆ ಅವಿಧೇಯರಾದುದರಿಂದಲೂ ಅತಿರೇಕವಾಗಿ ವರ್ತಿಸಿದುದರಿಂದಲೂ ಆಗಿದೆ. ಅವರು ಪರಸ್ಪರ ಒಬ್ಬರಿನ್ನೊಬ್ಬರನ್ನು ಅನ್ಯಾಯದಿಂದ ತಡೆಯಲಿಲ್ಲ. ಪವಿತ್ರ ಪ್ರವಾದಿ(ಸ) ಹೀಗೆ ಮುಂದುವರಿದರು: ಅಲ್ಲಾಹನ ಪ್ರಮಾಣ! ನೀವು ಒಳಿತನ್ನು ಉಪದೇಶಿಸಬೇಕು. ಕೆಡುಕಿನಿಂದ ತಡೆಯಬೇಕು. ತಪ್ಪು ಕೆಲಸ ಮಾಡುವವನ ಕೈಗಳನ್ನು ಹಿಡಿದು ಅವನು ನ್ಯಾಯದಿಂದ ವರ್ತಿಸಲು ಪ್ರೇರೇಪಿಸಿರಿ. ಅವನನ್ನು ನೇರಮಾರ್ಗದಲ್ಲಿ ಸ್ಥಾಪಿಸಿರಿ. ಹೀಗೆ ಮಾಡದಿದ್ದರೆ ನಿಮ್ಮ ಪೈಕಿ ಕೆಲವರ ಹೃದಯಗಳನ್ನು ಅನ್ಯರ ಹೃದಯಗಳ ಹಾಗೆ ಅಲ್ಲಾಹನು ಮಾಡುವನು ಮತ್ತು ಅನ್ಯರನ್ನು ಶಪಿಸಿದ ಹಾಗೆ ನಿಮ್ಮನ್ನು ಸಹ ಶಪಿಸುವನು. (ಸುನನ್ ಅಬೂ ದಾವೂದ್).

ಪವಿತ್ರ ಪ್ರವಾದಿ(ಸ) ಪ್ರಕಾರ ಒಂದು ಜನತೆಯ ಅವನತಿಯ ಸ್ಪಷ್ಟವಾದ ಚಿಹ್ನೆ ಅಶ್ಲೀಲತೆಯ ಬಹಿರಂಗ ಪ್ರದರ್ಶನವನ್ನು ಮತ್ತು ದುರ್ನಡತೆಯನ್ನು ಖಂಡಿಸಲು ಧೈರ್ಯ ತೋರಿಸದಿರುವುದಾಗಿದೆ. ಅಂತಹ ಸಮಾಜವನ್ನು ಒಂದು ನೌಕೆಯ ಪ್ರಯಾಣಿಕರು ವರ್ತಿಸಿದ ಬಗ್ಗೆ ಹೋಲಿಸಿ ಅವರು ಹೀಗೆ ಹೇಳಿದರು: (ನುಅ್‌ಮಾನ್ ಬಿನ್ ಬಶೀರ್ ವರದಿ) – ಪವಿತ್ರ ಪ್ರವಾದಿ(ಸ) ಹೀಗೆ ಹೇಳಿದರು: ಅಲ್ಲಾಹನು ನಿಶ್ಚಯಿಸಿದ ಹದ್ದುಬಸ್ತುಗಳನ್ನು ಪಾಲನೆ ಮಾಡುವವರು ಮತ್ತು ಅವುಗಳ ಬಗ್ಗೆ ನಿರ್ಲಕ್ಷ್ಯರಾಗಿರುವವರ ಉದಾಹರಣೆ ಹೀಗಿದೆ –

ಒಂದು ನೌಕೆಯ ಪ್ರಯಾಣಿಕರು ಚೀಟಿ ಎತ್ತಿ ನೌಕೆಯ ಮೇಲಿನ ಅಂತಸ್ತಿನಲ್ಲಿ ಯಾರು ಇರಬೇಕು, ಕೆಳಗಿನ ಅಂತಸ್ತಿನಲ್ಲಿ ಯಾರು ಇರಬೇಕೆಂದು ನಿರ್ಧರಿಸಿದರು. ಕೆಳಗಿನ ಅಂತಸ್ತಿನವರು ನೀರು ತೆಗೆದುಕೊಳ್ಳಲು ಮೇಲಿನ ಅಂತಸ್ತಿನವರಿರುವ ಸ್ಥಳವನ್ನು ದಾಟಿ ಹೋಗಬೇಕಾಗುತ್ತಿತ್ತು. ಆಗ ಕೆಳಗಿನ ಅಂತಸ್ತಿನ ಜನರು ಮೇಲಿನ ಅಂತಸ್ತಿನ ಜನರೊಂದಿಗೆ ಹೇಳಿದರು: ನಾವು ಕೆಳ ಅಂತಸ್ತಿನಲ್ಲಿ ನೌಕೆಗೆ ಒಂದು ತೂತನ್ನು ಕೊರೆದರೆ ನಮಗೆ ನೀರು ದೊರಕುವುದು; ನಿಮ್ಮನ್ನು ಕಷ್ಟಪಡಿಸುವ ಆವಶ್ಯಕತೆ ತಲೆದೋರಲಾರದು. ಇಂತಹ ಸಂದರ್ಭದಲ್ಲಿ ನೌಕೆಯ ಮೇಲಿನ ಅಂತಸ್ತಿನಲ್ಲಿರುವವರು ಕೆಳಗಿನ ಅಂತಸ್ತಿನವರಿಗೆ ಅವರ ಅಭಿಪ್ರಾಯ ಪ್ರಕಾರ ವರ್ತಿಸಲು ಬಿಟ್ಟರೆ ಅವರೆಲ್ಲರೂ ನೀರಿನಲ್ಲಿ ಮುಳುಗಿ ಸಾಯುವರು. ಮೇಲಿನ ಅಂತಸ್ತಿನ ಜನರು ಕೆಳಗಿನ ಅಂತಸ್ತಿನವರನ್ನು ತಡೆದರೆ ಅವರೆಲ್ಲರೂ ರಕ್ಷಿಸಲ್ಪಡುವರು. (ಬುಖಾರಿ)

ಈ ನೀತಿ ಕಥೆಯು ಇಂದಿನ ಕಾಲದ ಲೋಕದ ಸಮಾಜಗಳಿಗೆ ಅನ್ವಯಿಸುತ್ತದೆ ಎಂದು ನಾನು ಭಾವಿಸುತ್ತೇನೆ.

## ಮಾಡಬಹುದಾದ ಕೆಲಸಗಳು, ಮಾಡಬಾರದ ಕೆಲಸಗಳು

ಸಾಮಾಜಿಕ ಹೊಣೆಗಾರಿಕೆ ಮತ್ತು ಶಾಂತಿ ಸ್ಥಾಪನೆಗೆ ಪ್ರಯತ್ನಗಳ ಬಗ್ಗೆ ಇನ್ನಿತರ ಕೆಲವು ಪವಿತ್ರ ಖುರ್‌ಆನ್ ವಚನಗಳು ಹೀಗಿವೆ:

**"ಪರಮ ದಯಾವಂತನ (ಅಲ್ಲಾಹನ) ಭಕ್ತದಾಸರು ಭೂಮಿಯಲ್ಲಿ ನಮ್ರತೆಯಿಂದ ನಡೆಯುವವರಾಗಿದ್ದಾರೆ. ಅಜ್ಞಾನಿಗಳಾದ ಜನರು ಅವರನ್ನು ಮಾತಿಗೆಳೆದರೆ ಅವರು 'ಸಲಾಮ್' (ಶಾಂತಿ) ಎಂದು ಹೇಳುತ್ತಾರೆ."** (25: 64)

**"ಯಾರಿಂದಾದರೂ ನೀವು ಶುಭ ಹಾರೈಸಲ್ಪಟ್ಟರೆ, ಅದಕ್ಕಿಂತ ಉತ್ತಮವಾದ ರೀತಿಯಲ್ಲಿ ನೀವು ಶುಭ ಹಾರೈಸಿರಿ. ಅಥವಾ (ಕಡಿಮೆ ಪಕ್ಷ) ಅದಕ್ಕೆ ಸಮಾನವಾದ ರೀತಿಯಲ್ಲಾದರೂ. ನಿಸ್ಸಂದೇಹವಾಗಿ ಅಲ್ಲಾಹನು ಎಲ್ಲ ವಿಚಾರಗಳ ಬಗ್ಗೆ ಲೆಕ್ಕ ತೆಗೆಯುವವನಾಗಿದ್ದಾನೆ."**

(4: 87)

**"ನೀನು ಅಹಂಭಾವದಿಂದ ಜನರ ಮುಂದೆ ಕೆನ್ನೆಗಳನ್ನು ಉಬ್ಬಿಸಬೇಡ. ಬಿಗುಮಾನದಲ್ಲಿ ನೀನು ಭೂಮಿಯ ಮೇಲೆ ನಡೆಯಬೇಡ. ಖಂಡಿತವಾಗಿಯೂ ಅಲ್ಲಾಹನು ದುರಹಂಕಾರಿಯನ್ನೂ ಡಂಭಾಚಾರಿಯನ್ನೂ ಪ್ರೀತಿಸುವುದಿಲ್ಲ. ನೀನು ಸಾಧಾರಣ ಗತಿಯಲ್ಲಿ ನಡೆ. ನಿನ್ನ ಸ್ವರವನ್ನು ತಗ್ಗಿಸು. ಶಬ್ದಗಳಲ್ಲಿ ಅತಿ ಅಸಹ್ಯವಾದುದು ಕತ್ತೆಯ ಕೂಗು ಆಗಿದೆ."** (31: 19, 20)

ಇಸ್ಲಾಮ್ ಮುಸ್ಲಿಮರಲ್ಲಿ ಎಂತಹ ಸದ್ಗುಣಗಳನ್ನು ಬೆಳೆಸಲು ಪ್ರಯತ್ನಿಸುತ್ತಿದೆ ಎಂದರೆ ಅದು ಬೇಜವಾಬ್ದಾರಿ ಸ್ವಭಾವವನ್ನೂ ಅಪರಾಧವನ್ನೂ ಬೆಳವಣಿಗೆ ಹೊಂದುವುದರಿಂದ ತಡೆಯುತ್ತದೆ. ಇಸ್ಲಾಮ್ ಎಂತಹ ಆರೋಗ್ಯಕರ ನೆಲವನ್ನು ಸೃಷ್ಟಿಸುತ್ತಿದೆ ಎಂದರೆ ಅದರಲ್ಲಿ ಪರಾವಲಂಬಿ ಜೀವಿಗಳೂ ಕಳೆಗಳೂ ಬೆಳೆಯಲಾರವು.

ಪವಿತ್ರ ಖುರ್‌ಆನ್‌ನಲ್ಲಿ ಮಾಡಬಹುದಾದ ಕೆಲಸಗಳ ಬಗ್ಗೆ ಆಜ್ಞೆಗಳೂ ಮಾಡಬಾರದ ಕೆಲಸಗಳ ಬಗ್ಗೆ ಆಜ್ಞೆಗಳೂ ನೂರಾರು ಸಂಖ್ಯೆಗಳಲ್ಲಿವೆ. ಉಪದೇಶಗಳ ಮುಖ್ಯ ಸಾರವು ಸಾಮಾನ್ಯವಾಗಿ ಎಲ್ಲ ಧರ್ಮಗಳಲ್ಲೂ ಸಮಾನವಾಗಿವೆ. ಧರ್ಮಗಳ ವಿಶ್ವಾಸಗಳಿಗೆ ಸಂಬಂಧಿಸಿ ವ್ಯತ್ಯಾಸಗಳ ಬಗ್ಗೆ ಹೆಚ್ಚು ಚರ್ಚಿಸದೆ ನಾನು ಪವಿತ್ರ ಖುರ್‌ಆನಿನ ಕೆಲವು ಆಜ್ಞೆಗಳನ್ನು ಅಧ್ಯಾಯ ಮತ್ತು ವಚನ ಸಂಖ್ಯೆ ನೀಡಿ ನಿಮ್ಮ ಮುಂದಿಡುತ್ತೇನೆ.

## ಮಾಡಬೇಕಾದ ಕೆಲಸಗಳು

### ಚಾರಿತ್ರ್ಯ ಸಂರಕ್ಷಣೆ

**"ನೀವು ವ್ಯಭಿಚಾರ ಸಮೀಪಕ್ಕೆ ಹೋಗಬೇಡಿರಿ. ನಿಶ್ಚಯವಾಗಿಯೂ ಅದು ಅಶ್ಲೀಲಕರವೂ ದುಷ್ಟಮಾರ್ಗವೂ ಆಗಿದೆ."**

(ಪವಿತ್ರ ಖುರ್‌ಆನ್ 17: 33)

**"ಅವರು ತಮ್ಮ ಗುಪ್ತಾಂಗಗಳನ್ನು ಕಾಪಾಡುತ್ತಾರೆ. ತಮ್ಮ ಪತ್ನಿಯರೊಂದಿಗೆ ಅಥವಾ ತಮ್ಮ ಬಲಗೈಯ ಅಧೀನಕ್ಕೊಳಗಾದವರೊಡನೆ ಹೊರತು. ಹಾಗೆ ಅವರು ಆಕ್ಷೇಪಕ್ಕೆ ಗುರಿಯಾಗುವುದಿಲ್ಲ. ಆದರೆ ಅದನ್ನು ಮೀರಿ ಯಾರಾದರೂ ಇಚ್ಛಿಸಿದರೆ ಅವರು ಆಜ್ಞೋಲ್ಲಂಘಕರಾಗುತ್ತಾರೆ."** (23: 6–8)

**"ಸತ್ಯ ವಿಶ್ವಾಸಿಗಳೊಡನೆ ಹೇಳು – ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ ಮತ್ತು ತಮ್ಮ ಗುಪ್ತಾಂಗಗಳನ್ನು ಕಾಪಾಡಿಕೊಳ್ಳಲಿ. ಅದು ಅವರಿಗೆ ಪರಿಶುದ್ಧವಾದ ಮಾರ್ಗವಾಗಿದೆ. ಅವರ ಕೃತ್ಯಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ,"** (24: 31)

**"ಮದುವೆಯಾಗಲು ಅನುಕೂಲವಿಲ್ಲದವರು ಅಲ್ಲಾಹನು ತನ್ನ ಅನುಗ್ರಹದಿಂದ ಅವರನ್ನು ಸಂಪನ್ನಗೊಳಿಸುವ ತನಕ ತಮ್ಮ ಚಾರಿತ್ರ್ಯವನ್ನು ಕಾಪಾಡಿಕೊಳ್ಳಲಿ.......... ನಿಮ್ಮ ಗುಲಾಮ ಸ್ತ್ರೀಯರನ್ನು ಅವರು ಚಾರಿತ್ರ್ಯವನ್ನು ಕಾಪಾಡಲು ಬಯಸಿದರೆ, ನೀವು ಐಹಿಕ ಜೀವನದ ಅಭಿಲಾಷೆಯಿಂದ (ಅವರ ಮದುವೆಯನ್ನು ತಡೆದು) ಅವರನ್ನು ವ್ಯಭಿಚಾರಕ್ಕೆ ಬಲವಂತಪಡಿಸಬೇಡಿರಿ. ಯಾರಾದರೂ ಅವರನ್ನು (ಆ ಗುಲಾಮ ಸ್ತ್ರೀಯರನ್ನು ವ್ಯಭಿಚಾರಕ್ಕೆ) ಬಲವಂತ ಮಾಡಿದರೆ, ಅವರು ಬಲವಂತಕ್ಕೊಳಗಾದ ಕಾರಣ ಅಲ್ಲಾಹನು ನಿಶ್ಚಯವಾಗಿಯೂ (ಅವರಿಗೆ) ಕ್ಷಮೆ ನೀಡುವವನೂ ಕರುಣೆದೋರುವವನೂ ಆಗಿದ್ದಾನೆ."** (24: 34)

**"ವಿವಾಹವನ್ನು ಬಯಸದ ವೃದ್ಧೆಯರು ಸೌಂದರ್ಯವನ್ನು ತೋರ್ಪಡಿಸದ ರೀತಿಯಲ್ಲಿ ತಮ್ಮ ಘೋಷಾ ವಸ್ತ್ರವನ್ನು ತೆಗೆದಿರಿಸಿದರೆ ತಪ್ಪಿಲ್ಲ. ಆದರೆ ಮುಂಜಾಗ್ರತೆ ವಹಿಸುವುದು ಅವರಿಗೆ ಉತ್ತಮ. ಅಲ್ಲಾಹನು ಎಲ್ಲ ಆಲಿಸುವವನೂ ಸರ್ವಜ್ಞನೂ ಆಗಿದ್ದಾನೆ."** (24: 61)

**"ಅವರು (ಸತ್ಯವಿಶ್ವಾಸಿಗಳು) ವ್ಯಭಿಚಾರ ಮಾಡಲಾರರು. ಹಾಗೆ ಮಾಡುವವನು ಪಾಪದ ಶಿಕ್ಷೆಯನ್ನು ಪಡೆಯುವನು."** (25: 69)

**"ನಿಶ್ಚಯವಾಗಿಯೂ (ಅಲ್ಲಾಹನಿಗೆ) ಶರಣಾಗುವ ಪುರುಷರೂ ಶರಣಾಗುವ ಸ್ತ್ರೀಯರೂ ಸತ್ಯವಿಶ್ವಾಸಿಗಳೂ ಸತ್ಯವಿಶ್ವಾಸಿನಿಯರೂ (ಅಲ್ಲಾಹನಿಗೆ) ವಿಧೇಯರಾಗುವ ಪುರುಷರೂ ವಿಧೇಯರಾಗುವ ಸ್ತ್ರೀಯರೂ ಸತ್ಯವಂತರೂ ಸತ್ಯವತಿಯರೂ ತಾಳ್ಮೆ ವಹಿಸುವ ಪುರುಷರೂ ತಾಳ್ಮೆ ವಹಿಸುವ ಸ್ತ್ರೀಯರೂ ವಿನಯವಂತರಾದ ಪುರುಷರೂ ವಿನಯವಂತರಾದ ಸ್ತ್ರೀಯರೂ ದಾನಧರ್ಮ ಮಾಡುವ ಪುರುಷರೂ ದಾನಧರ್ಮ ಮಾಡುವ ಸ್ತ್ರೀಯರೂ ವ್ರತಾನುಷ್ಠಾನ ಮಾಡುವ**

ಪುರುಷರೂ ವ್ರತಾನುಷ್ಠಾನ ಮಾಡುವ ಸ್ತ್ರೀಯರೂ ತಮ್ಮ ಚಾರಿತ್ರ್ಯವನ್ನು ರಕ್ಷಿಸುವ ಪುರುಷರೂ ಚಾರಿತ್ರ್ಯವನ್ನು ರಕ್ಷಿಸುವ ಸ್ತ್ರೀಯರೂ ಅಲ್ಲಾಹನನ್ನು ಅಧಿಕವಾಗಿ ಸ್ಮರಿಸುವ ಪುರುಷರೂ ಅಧಿಕವಾಗಿ ಸ್ಮರಿಸುವ ಸ್ತ್ರೀಯರೂ – ಇವರೆಲ್ಲರಿಗೂ ಅಲ್ಲಾಹನು ಕ್ಷಮಾದಾನವನ್ನೂ ಮಹತ್ತಾದ ಪ್ರತಿಫಲವನ್ನೂ ಸಿದ್ಧಪಡಿಸಿಟ್ಟಿದ್ದಾನೆ." (33: 36)

"ಅವರು ತಮ್ಮ ಗುಪ್ತಾಂಗಗಳನ್ನು ಕಾಪಾಡುವವರಾಗಿದ್ದಾರೆ. (ಸ್ವತಂತ್ರ ಸ್ತ್ರೀಯರಾದ) ಪತ್ನಿಯರೊಡನೆ ಅಥವಾ ತಮ್ಮ ಬಲಗೈಯ ಅಧೀನಕ್ಕೊಳಗಾದವರೊಡನೆ (ಎಂದರೆ ಗುಲಾಮ ಸ್ತ್ರೀಯರಾದ ಪತ್ನಿಯರೊಡನೆ) ಹೊರತು (ಅವರು ಲೈಂಗಿಕ ಸಂಪರ್ಕ ಹೊಂದಲಾರರು). ಅಂಥವರು ದೋಷಾರೋಪಣೆಗೆ ಗುರಿಯಾಗುವುದಿಲ್ಲ – ಆದರೆ ಅದನ್ನು ಮೀರಿ ಹೋಗಲು ಬಯಸುವವರು ಅತಿಕ್ರಮಿಗಳಾಗಿದ್ದಾರೆ." (70: 30–32)

## ಸ್ವಚ್ಛತೆಯ ಬಗ್ಗೆ ಲಕ್ಷ್ಯ ನೀಡಬೇಕು

"ಆರ್ತವದ ಕುರಿತು ಸಹ ಅವರು ನಿನ್ನೊಡನೆ ಕೇಳುತ್ತಾರೆ: (ಹೇ ಪ್ರವಾದಿ) ಹೇಳು; ಅದೊಂದು ಅಸ್ವಸ್ಥತೆಯ ಸ್ಥಿತಿಯಾಗಿದೆ. ಆದ್ದರಿಂದ ಋತುಸ್ರಾವ ಕಾಲದಲ್ಲಿ ನೀವು ಸ್ತ್ರೀಯರಿಂದ ದೂರವಿರಿ. ಅವರು ಶುದ್ಧಿಯಾಗುವ ವರೆಗೆ ನೀವು ಅವರನ್ನು (ಸಂಸರ್ಗಕ್ಕಾಗಿ) ಸಮೀಪಿಸಬಾರದು. ಅವರು (ಸ್ನಾನ ಮಾಡಿ) ಶುದ್ಧಿಯಾದ ಬಳಿಕ, ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸಿದಂತೆ ಅವರನ್ನು ಸಮೀಪಿಸಿರಿ. ಖಂಡಿತವಾಗಿಯೂ ಅಲ್ಲಾಹನು ಪಶ್ಚಾತ್ತಾಪಪಡುವವರನ್ನು ಪ್ರೀತಿಸುತ್ತಾನೆ. (ಬಾಹ್ಯವಾಗಿಯೂ ಆಂತರಿಕವಾಗಿಯೂ) ಪರಿಶುದ್ಧರಾಗಿರುವವರನ್ನು ಅವನು ಇಷ್ಟಪಡುತ್ತಾನೆ." (ಪವಿತ್ರ ಖುರ್‌ಆನ್ 2: 223)

"ನೀವು ಲೈಂಗಿಕ ಸಂಪರ್ಕದಿಂದ ಅಥವಾ ವೀರ್ಯ ಸ್ಖಲನದಿಂದ ಅಶುದ್ಧರಾಗಿದ್ದರೆ – ನೀವು ಪ್ರಯಾಣದಲ್ಲಿರುವಾಗ ಹೊರತು – ಸ್ನಾನ ಮಾಡುವ ವರೆಗೆ ನಮಾಝ್ ಮಾಡಬೇಡಿರಿ." (4: 44)

"ಎಲೈ ಸತ್ಯವಿಶ್ವಾಸಿಗಳೇ, ನೀವು ನಮಾಝಿಗೆ ಸಿದ್ಧರಾದರೆ, ನಿಮ್ಮ ಮುಖವನ್ನು ಮತ್ತು ಮೊಣಕೈ ಗಂಟಿನ ವರೆಗೆ ಕೈಗಳನ್ನು ತೊಳೆಯಿರಿ. (ಒದ್ದೆ ಕೈಗಳಿಂದ) ನಿಮ್ಮ ತಲೆಗಳನ್ನು ಸವರಿರಿ. ಪಾದಗಂಟುಗಳ ತನಕ ಕಾಲುಗಳನ್ನೂ ತೊಳೆಯಿರಿ. ನೀವು ಲೈಂಗಿಕ ಸಂಪರ್ಕದಿಂದ ಅಥವಾ ವೀರ್ಯ ಸ್ಖಲನದಿಂದ ಅಶುದ್ಧರಾಗಿದ್ದರೆ (ಸ್ನಾನಮಾಡಿ) ಶುದ್ಧಿಯಾಗಿರಿ."

(5: 7)

"ಅವರು ತಮ್ಮ ಮಾಲಿನ್ಯಗಳನ್ನು ನೀಗಿಸಲಿ." (22: 30)

"ನಿನ್ನ ವಸ್ತ್ರಗಳನ್ನು (ನಿನ್ನ ಸುತ್ತು ಮುತ್ತಲಿರುವವರನ್ನು) ಪರಿಶುದ್ಧಗೊಳಿಸು. ಮಾಲಿನ್ಯದಿಂದ ದೂರವಿರು." (74: 5,6)

## ಕೋಪವನ್ನು ನಿಯಂತ್ರಿಸಬೇಕು

"ಅವರು (ಸತ್ಯವಿಶ್ವಾಸಿಗಳು) ಕೋಪವನ್ನು ನಿಯಂತ್ರಿಸುವವರು."
(ಪವಿತ್ರ ಖುರ್‌ಆನ್ 3: 35)

## ಪರಸ್ಪರ ಸಹಕರಿಸಿರಿ

"ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. (ಆದರೆ) ಪಾಪಕರ್ಮ ಮತ್ತು ಅನ್ಯಾಯ ವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು."
(ಪವಿತ್ರ ಖುರ್‌ಆನ್ 5: 3)

## ಧೈರ್ಯ ಹೊಂದಿರಿ

"ಅವರು (ಸತ್ಯವಿಶ್ವಾಸಿಗಳು) ಯುದ್ಧ ಕಾಲದಲ್ಲಿ ಸ್ಥೈರ್ಯ ತೋರಿಸುವವರಾಗಿದ್ದಾರೆ." (ಪವಿತ್ರ ಖುರ್‌ಆನ್ 2: 178)

"ತಮಗೆ ಘಾಸಿಯಾದ ನಂತರ (ಕೂಡ) ಅಲ್ಲಾಹನ ಮತ್ತು ಸಂದೇಶವಾಹಕನ ಕಡೆಗೆ ಓಗೊಟ್ಟವರ ಪೈಕಿ ಸತ್ಕರ್ಮ ಮಾಡಿದವರಿಗೂ ದೇವ ಭಕ್ತರಿಗೂ ಮಹತ್ತಾದ ಪ್ರತಿಫಲವಿದೆ." (3: 173)

" 'ನಿಜವಾಗಿಯೂ (ಶತ್ರು) ಜನರು ನಿಮಗೆದುರಾಗಿ ಸಂಘಟಿತರಾಗಿದ್ದಾರೆ. ಆದ್ದರಿಂದ ನೀವು ಅವರ ಭಯವಿರಿಸಿಕೊಳ್ಳಿರಿ' ಎಂದು ಜನರು ಅವರೊಡನೆ ಹೇಳಿದರು. ಆದರೆ ಅದು ಅವರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿತು. 'ನಮಗೆ ಅಲ್ಲಾಹನು ಸಾಕು; ಅವನು ಅತಿ ಶ್ರೇಷ್ಠನಾದ ರಕ್ಷಕನು' ಎಂದು ಅವರು ಹೇಳಿದರು." (3: 174)

"ಅವರೀರ್ವರೂ ಗುಹೆಯಲ್ಲಿದ್ದಾಗ 'ನೀನು ವ್ಯಥೆಪಡಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ' ಎಂದು ಅವರು ತನ್ನ ಸಂಗಡಿಗನೊಡನೆ ಹೇಳಿದ್ದಾಗ – ಆ ಸಂದರ್ಭದಲ್ಲಿ ಅಲ್ಲಾಹನು ತನ್ನ ಕಡೆಯಿಂದಿರುವ ಸಾಂತ್ವನವನ್ನು ಅವರಿಗೆ ಇಳಿಸಿಕೊಟ್ಟನು."
(9: 40)

"ಅವರು (ಜಾದೂಗಾರರು) ಹೇಳಿದರು: ನಮ್ಮ ಗೋಚರಕ್ಕೆ ಬಂದ ದೃಷ್ಟಾಂತಗಳಿಗಿಂತ ಮತ್ತು ನಮ್ಮನ್ನು ಸೃಷ್ಟಿಸಿದ ದೇವನಿಗಿಂತ ನಾವೆಂದಿಗೂ (ಹೇ ಫಿರ್‌ಔನ್) ನಿನಗೆ ಆದ್ಯತೆ ನೀಡಲಾರೆವು. ಆದ್ದರಿಂದ ನಿನಗೆ ವಿಧಿಸಲು ಸಾಧ್ಯವಿರುವುದನ್ನು ನೀನು ವಿಧಿಸು. ಖಂಡಿತವಾಗಿಯೂ ಈ ಇಹಲೋಕ ಜೀವನಕ್ಕೆ ಸಂಬಂಧಿಸಿ ಮಾತ್ರ ನೀನು ವಿಧಿಸಬಲ್ಲೆ.

"ನಿಜವಾಗಿಯೂ ನಮ್ಮ ಪ್ರಭುವನ್ನು ನಾವು ನಂಬಿದ್ದೇವೆ – ನಮ್ಮ ಪಾಪಗಳನ್ನು ಮತ್ತು ನೀನು ನಮ್ಮಿಂದ ಬಲವಂತವಾಗಿ ಮಾಡಿಸಿದ ಜಾದೂ ಕೃತ್ಯಗಳನ್ನು ಅವನು ನಮಗೆ ಕ್ಷಮಿಸಲಿಕ್ಕೋಸ್ಕರ. ಅಲ್ಲಾಹನು ಅತ್ಯುತ್ತಮನೂ ಅನಶ್ವರನೂ ಆಗಿದ್ದಾನೆ." (20: 73, 74)

"ಅವರು ಅಲ್ಲಾಹನ ಸಂದೇಶಗಳನ್ನು ತಲಪಿಸುವವರೂ ಅವನಿಗೆ ಭಯಪಡುವವರೂ ಅಲ್ಲಾಹನ ಹೊರತು ಬೇರೆ ಯಾರಿಗೂ ಭಯಪಡದವರೂ ಆಗಿದ್ದರು. ಲೆಕ್ಕ ತೆಗೆಯುವವನಾಗಿ ಅಲ್ಲಾಹನು ಸಾಕು." (33: 40)

" 'ಅಲ್ಲಾಹನು ನಮ್ಮ ಪ್ರಭು' ಎಂದು ಹೇಳಿ ಸ್ಥಿರಚಿತ್ತರಾಗಿರುವವರಿಗೆ ಖಚಿತವಾಗಿಯೂ ಏನೂ ಭಯವಿಲ್ಲ. ಅವರು ವ್ಯಥೆಗೀಡಾಗುವುದಿಲ್ಲ."

(46: 14)

## ಸತ್ಕಾರ್ಯಗಳನ್ನು ಮಾಡಿರಿ

"ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿರಿ. ನಿಮ್ಮ ಸ್ವಂತ ಕೈಗಳಿಂದಲೇ ನೀವು ವಿನಾಶಕ್ಕೆ ಸಿಲುಕಿಕೊಳ್ಳಬೇಡಿರಿ. ನೀವು ಸತ್ಕಾರ್ಯಗಳನ್ನು ಮಾಡಿರಿ. ಖಂಡಿತವಾಗಿಯೂ ಅಲ್ಲಾಹನು ಸತ್ಕಾರ್ಯ ಮಾಡುವವರನ್ನು ಇಷ್ಟಪಡುತ್ತಾನೆ."
(ಪವಿತ್ರ ಖುರ್‌ಆನ್ 2: 196)

"ಅವರು (ಸತ್ಯವಿಶ್ವಾಸಿಗಳು) ಏಳಿಗೆಯ ಕಾಲದಲ್ಲೂ ಕಷ್ಟ ಕಾಲದಲ್ಲೂ ದೇವ ಮಾರ್ಗದಲ್ಲಿ ಧನವನ್ನು ಖರ್ಚು ಮಾಡುವವರೂ ಕೋಪವನ್ನು ನಿಯಂತ್ರಿಸುವವರೂ ಜನರಿಗೆ ಕ್ಷಮೆ ನೀಡುವವರೂ ಆಗಿದ್ದಾರೆ. ಸಜ್ಜನರನ್ನು ಅಲ್ಲಾಹನು ಇಷ್ಟಪಡುತ್ತಾನೆ." (3: 135)

"ವಿಶ್ವಾಸ ಹೊಂದಿ ಸತ್ಕರ್ಮಗಳನ್ನು ಮಾಡುವವರು – ಅವರು ಭಯಭಕ್ತಿಯುಳ್ಳ ವಿಶ್ವಾಸಿಗಳಾಗಿ ಸತ್ಕಾರ್ಯ ಮಾಡುವವರಾದರೆ, ಭಯಭಕ್ತಿ ಮತ್ತು ನಂಬಿಕೆಯಲ್ಲಿ ಮುನ್ನೇರುವವರಾದರೆ, ಭಯಭಕ್ತಿ ಮತ್ತು ಸತ್ಕೃತ್ಯಗಳಲ್ಲಿ ಇನ್ನೂ ಪುರೋಗಮಿಸಿದರೆ, ಅವರು ತಿನ್ನುವುದರಲ್ಲೇನೂ ಅವರಿಗೆ ಪಾಪವಿರಲಾರದು. ಸತ್ಕರ್ಮಿಗಳನ್ನು ಅಲ್ಲಾಹನು ಪ್ರೀತಿಸುತ್ತಾನೆ." (5: 94)

"ಭೂಮಿಯಲ್ಲಿ ಶಾಂತಿ ನೆಲೆಸಿದ ಬಳಿಕ ಶಾಂತಿ ಭಂಗ ಮಾಡಬೇಡಿರಿ. ಭಯಭೀತಿಯಿಂದಲೂ ಭರವಸೆಯಿಂದಲೂ ಅವನನ್ನು (ಅಲ್ಲಾಹನನ್ನು) ಕರೆದು ಪ್ರಾರ್ಥಿಸಿರಿ. ಖಂಡಿತವಾಗಿಯೂ ಅಲ್ಲಾಹನ ಕರುಣೆ ಸತ್ಕರ್ಮಿಗಳಿಗೆ ಸಮೀಪದಲ್ಲಿದೆ." (7: 57)

## ಒಳಿತನ್ನು ಉಪದೇಶಿಸಿ ಕೆಡುಕನ್ನು ತಡೆಯಿರಿ

"ನೀವು ಮನುಷ್ಯ ವರ್ಗದ ಒಳಿತಿಗಾಗಿ ಸೃಷ್ಟಿಸಲ್ಪಟ್ಟ ಅತಿ ಉತ್ತಮ ಸಮುದಾಯವಾಗಿದ್ದೀರಿ. ನೀವು ಒಳಿತನ್ನು ಉಪದೇಶಿಸುತ್ತೀರಿ; ಕೆಡುಕನ್ನು ತಡೆಯುತ್ತೀರಿ ಮತ್ತು ಅಲ್ಲಾಹನನ್ನು ನಂಬುತ್ತೀರಿ."

(ಪವಿತ್ರ ಖುರ್‌ಆನ್ 3: 111)

## ಸತ್ಕರ್ಮಗಳಲ್ಲಿ ಮೇಲುಗೈಯಾಗಲು ಸ್ಪರ್ಧಿಸಿರಿ

"ಪ್ರತಿಯೊಬ್ಬನಿಗೂ ಒಂದೊಂದು ಗುರಿ ಇರುತ್ತದೆ. ಅದು ಅವನ ಮೇಲೆ ಪ್ರಭಾವ ಬೀರುತ್ತದೆ. ನೀವು ಸತ್ಕರ್ಮಗಳಲ್ಲಿ ಮೇಲುಗೈಯಾಗಲು ಸ್ಪರ್ಧಿಸಿರಿ." (ಪವಿತ್ರ ಖುರ್‌ಆನ್ 2: 149)

## ಅಮಾನತನ್ನು ಕಾಪಾಡಿರಿ

"ನಿಮ್ಮ ಪೈಕಿ ಯಾರಾದರೂ ಬೇರೆ ಯಾರಿಗಾದರೂ ಏನನ್ನಾದರೂ ನಂಬಿ ಒಪ್ಪಿಸಿದರೆ, ಯಾರಿಗೆ ಒಪ್ಪಿಸಲಾಗಿದೆಯೋ ಆತನು ಆ ಅಮಾನತ್ತನ್ನು (ಸಕಾಲದಲ್ಲಿ) ಮರಳಿಸಬೇಕಾಗಿದೆ. ಆತನು ತನ್ನ ಪ್ರಭುವಾದ ಅಲ್ಲಾಹನ ಭಯವಿರಿಸಿಕೊಳ್ಳಲಿ."

(ಪವಿತ್ರ ಖುರ್‌ಆನ್ 2: 284)

''ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದು ಖಂಡಿತವಾಗಿಯೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ." (4: 59)

"ಅವರು (ಸತ್ಯ ವಿಶ್ವಾಸಿಗಳು) ತಮ್ಮ ಅಮಾನತ್ತು ಮತ್ತು ಒಡಂಬಡಿಕೆಗಳ ಬಗ್ಗೆ ಲಕ್ಷ್ಯವುಳ್ಳವರು." (23: 9)

"ಅವರು (ಸತ್ಯವಿಶ್ವಾಸಿಗಳು) ತಮ್ಮ ಅಮಾನತ್ತು ಮತ್ತು ಒಡಂಬಡಿಕೆಗಳ ಬಗ್ಗೆ ಜಾಗರೂಕತೆ ವಹಿಸುವವರು." (70: 33)

## ಅನ್ನದಾನ ಮಾಡಿರಿ

"ಅವರು (ಸತ್ಯವಿಶ್ವಾಸಿಗಳು) ಅವನ (ಅಲ್ಲಾಹನ) ಸಂತೃಪ್ತಿಗೋಸ್ಕರ ಬಡವರಿಗೂ ಅನಾಥರಿಗೂ ಕೈದಿಗಳಿಗೂ ಅನ್ನದಾನ ಮಾಡುತ್ತಾರೆ."

(ಪವಿತ್ರ ಖುರ್‌ಆನ್ 76: 9)

"ಅಥವಾ ಹಸಿವೆಯ ದಿನಗಳಲ್ಲಿ ಅನ್ನ ನೀಡುವುದು – ನಿಕಟ ಸಂಬಂಧಿಯಾದ ಅನಾಥನಿಗೆ – ಅಥವಾ ಅತಿ ನಿಕೃಷ್ಟ ಸ್ಥಿತಿಯಲ್ಲಿರುವ ಬಡವನಿಗೆ." (90: 15–17)

## ಕ್ಷಮೆ ನೀಡಿರಿ

"ಅವರು (ಸತ್ಯವಿಶ್ವಾಸಿಗಳು) ಏಳಿಗೆಯ ಕಾಲದಲ್ಲೂ ಕಷ್ಟಕಾಲದಲ್ಲೂ ದೇವ ಮಾರ್ಗದಲ್ಲಿ ಧನವನ್ನು ಖರ್ಚು ಮಾಡುವವರೂ ಕೋಪವನ್ನು ನಿಯಂತ್ರಿಸುವವರೂ ಜನರಿಗೆ ಕ್ಷಮೆ ನೀಡುವವರೂ ಆಗಿದ್ದಾರೆ. ಸಜ್ಜನರನ್ನು ಅಲ್ಲಾಹನು ಇಷ್ಟಪಡುತ್ತಾನೆ."

(ಪವಿತ್ರ ಖುರ್‌ಆನ್ 3: 135)

"(ಹೇ ಪೈಗಂಬರ್) ನೀನು ಅವರಿಗೆ ಕ್ಷಮೆ ನೀಡು. ಅವರ ಪಾಪ ವಿಮುಕ್ತಿಗಾಗಿ ನೀನು ಪ್ರಾರ್ಥಿಸು." (3: 160)

"ನೀವು ಒಂದು ಒಳಿತನ್ನು ಬಹಿರಂಗ ಪಡಿಸಿದರೆ ಅಥವಾ ಮುಚ್ಚಿಟ್ಟರೆ ಅಥವಾ ಒಂದು ತಪ್ಪನ್ನು ನೀವು ಕ್ಷಮಿಸಿದರೆ (ತಿಳಿದುಕೊಳ್ಳಿರಿ) ನಿಸ್ಸಂದೇಹವಾಗಿಯೂ ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಸರ್ವಶಕ್ತನೂ ಆಗಿದ್ದಾನೆ." (4: 150)

## ಸತ್ಯವಾದ ಸಾಕ್ಷ್ಯ ನೀಡಿರಿ

"ಎಲ್ಲೈ ಸತ್ಯವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯ ನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯ ವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ." (ಪವಿತ್ರ ಖುರ್‌ಆನ್ 4: 136)

"ಎಲ್ಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯ ವಹಿಸುವವರಾಗಿದ್ದುಕೊಂಡು ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ." (5: 9)

"ಅವರು (ಸತ್ಯವಿಶ್ವಾಸಿಗಳು) ಸುಳ್ಳು ಸಾಕ್ಷಿ ಹೇಳುವವರಲ್ಲ. ನಿಷ್ಪ್ರಯೋಜಕ ವಿಚಾರಗಳ ಬಗ್ಗೆ ಅವರು ಗಮನಕೊಡದೆ ಗಾಂಭೀರ್ಯದಿಂದ ವರ್ತಿಸುವವರಾಗಿದ್ದಾರೆ." (25: 73)

## ಅಧೀನದಲ್ಲಿರುವವರೊಂದಿಗೆ ಉತ್ತಮ ವರ್ತನೆ

"ನೀವು ಒಳಿತನ್ನು ಮಾಡಿರಿ......... ನಿಮ್ಮ ಅಧೀನದಲ್ಲಿರುವವರಿಗೂ."

(ಪವಿತ್ರ ಖುರ್‌ಆನ್ 4: 37)

## ನಿಮ್ಮ ನೆರೆಹೊರೆಯವರೊಂದಿಗೆ ಉತ್ತಮ ವರ್ತನೆ

"ನೀವು ಒಳಿತನ್ನು ಮಾಡಿರಿ. ನಿಕಟ ಸಂಬಂಧಿಯಾದ ನೆರೆಹೊರೆಯವನಿಗೂ ಅನ್ಯ ನೆರೆ ಹೊರೆಯವನಿಗೂ."

(ಪವಿತ್ರ ಖುರ್‌ಆನ್ 4: 37)

## ಸಂಬಂಧಿಕರೊಂದಿಗೆ ಉತ್ತಮ ವರ್ತನೆ

"ಮಾತಾಪಿತರಿಗೆ ನೀವು ಒಳಿತನ್ನು ಮಾಡಿರಿ."

(ಪವಿತ್ರ ಖುರ್‌ಆನ್ 4: 37)

"ಅವನ (ಅಲ್ಲಾಹನ) ಮೇಲಿನ ಪ್ರೀತಿಯಿಂದ ತನ್ನ ಧನವನ್ನು

ನಿಕಟ ಸಂಬಂಧಿಕರಿಗೆ........ ಅವರು (ಸತ್ಯವಿಶ್ವಾಸಿಗಳು) ವ್ಯವಯಿಸುತ್ತಾರೆ."

(ಪವಿತ್ರ ಖುರ್‌ಆನ್ 2: 178)

"ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ." (16: 91)

"ನಿಕಟ ಬಂಧುಗಳಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಅವರವರ ಹಕ್ಕುಗಳನ್ನು ನೀಡಿರಿ." (30: 39)

## ಕೃತಜ್ಞತೆ ತೋರಿಸಿರಿ

"ನನಗೆ ಕೃತಜ್ಞತೆಯನ್ನು ತೋರಿಸಿರಿ. ಕೃತಘ್ನರಾಗಬೇಡಿರಿ."

(ಪವಿತ್ರ ಖುರ್‌ಆನ್ 2: 153)

"ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿರಿ – ಅವನನ್ನೇ ನೀವು ಆರಾಧಿಸುವವರಾಗಿದ್ದರೆ." (2: 173)

"ದಿಟವಾಗಿಯೂ ಅಲ್ಲಾಹನು ಮನುಷ್ಯರ ಮೇಲೆ ಬಹಳ ಔದಾರ್ಯ ತೋರಿಸುವವನಾಗಿದ್ದಾನೆ. ಆದರೆ ಜನರಲ್ಲಿ ಹೆಚ್ಚಿನವರು ಕೃತಜ್ಞತೆ ತೋರಿಸುವುದಿಲ್ಲ." (2: 244)

"ಕೃತಜ್ಞತೆ ಸೂಚಿಸುವವರಿಗೆ ಅಲ್ಲಾಹನು ಖಂಡಿತವಾಗಿಯೂ ಪ್ರತಿಫಲ ನೀಡುತ್ತಾನೆ." (3: 145)

"ನೀವು ಕೃತಜ್ಞತೆಯುಳ್ಳವರಾದರೆ ನಾನು ಖಂಡಿತವಾಗಿಯೂ ನಿಮಗೆ ಅನುಗ್ರಹಗಳನ್ನು ವೃದ್ಧಿಗೊಳಿಸುವೆನು. ನೀವು ಕೃತಘ್ನರಾದರೆ ನನ್ನ ಶಿಕ್ಷೆ ಕಠೋರವಾಗಿರಬಹುದು." (14: 8)

"ನೀವು ಕೃತಘ್ನರಾಗುವಿರಾದರೆ (ತಿಳಿದುಕೊಳ್ಳಿರಿ) ಅಲ್ಲಾಹನು ನಿಮ್ಮ ಆಶ್ರಯದಲ್ಲಿಲ್ಲದ ಸ್ವಯಂಪೂರ್ಣನಾಗಿದ್ದಾನೆ. ಅವನು ತನ್ನ ದಾಸರ ಕೃತಘ್ನತೆಯನ್ನು ಇಷ್ಟಪಡುವುದಿಲ್ಲ. ನೀವು ಕೃತಜ್ಞತೆ ಸೂಚಿಸಿದರೆ ನಿಮಗೆ ಅದನ್ನು ಅವನು ಇಷ್ಟಪಡುತ್ತಾನೆ." (39: 8)

"ನೀನು ಅಲ್ಲಾಹನನ್ನು ಮಾತ್ರ ಆರಾಧಿಸಿ ಕೃತಜ್ಞತೆ ತೋರಿಸುವವರಲ್ಲಿ ಸೇರು." (39: 67)

"ನನ್ನ ಪ್ರಭೂ, ನೀನು ನನಗೆ ಮತ್ತು ನನ್ನ ಮಾತಾಪಿತರಿಗೆ ನೀಡಿದ ಅನುಗ್ರಹಗಳಿಗೆ ಕೃತಜ್ಞತೆ ಸೂಚಿಸಲಿಕ್ಕೂ ನೀನು ಇಷ್ಟಪಡುವ ಸತ್ಕರ್ಮ ಮಾಡಲಿಕ್ಕೂ ನನಗೆ ಶಕ್ತಿಯನ್ನು ದಯಪಾಲಿಸು." (46: 16)

## ವಿನಮ್ರತೆ ಪ್ರಕಟಿಸಿರಿ

"ನೀನು ಅವನನ್ನು (ಅಲ್ಲಾಹನನ್ನು) ವಿನಮ್ರತೆಯಿಂದಲೂ ರಹಸ್ಯವಾಗಿಯೂ ಕರೆದು ಪ್ರಾರ್ಥಿಸುವ ಸಂದರ್ಭ."

(ಪವಿತ್ರ ಖುರ್‌ಆನ್ 6: 64)

"ನೀವು ವಿನಮ್ರವಾಗಿಯೂ ರಹಸ್ಯವಾಗಿಯೂ ನಿಮ್ಮ ಪ್ರಭುವನ್ನು ಕರೆದು ಪ್ರಾರ್ಥಿಸಿರಿ." (7: 56)

"ನೀನು ಭೂಮಿಯಲ್ಲಿ ಅಹಂಭಾವದಿಂದ ನಡೆಯಬೇಡ."

(17: 38)

"ಆ ಪಾರತ್ರಿಕ ಗೃಹ, ಅದನ್ನು ಭೂಮಿಯಲ್ಲಿ ಡಾಂಭಿಕತೆಯಿಂದ ವರ್ತಿಸದವರಿಗೂ ಗಲಭೆ ಗೊಂದಲಗಳನ್ನು ಸೃಷ್ಟಿಸದವರಿಗೂ ನಾವು ನೀಡುವೆವು. ಭಯಭಕ್ತಿಯುಳ್ಳವರಿಗೆ ಅಂತ್ಯ ಫಲ ಆದಾಗಿದೆ."

(28: 84)

"ನೀನು ಅಹಂಭಾವದಿಂದ ಜನರ ಮುಂದೆ ಕೆನ್ನೆಗಳನ್ನು ಉಬ್ಬಿಸಬೇಡ. ಬಿಗುಮಾನದಿಂದ ನೀನು ಭೂಮಿಯ ಮೇಲೆ ನಡೆಯಬೇಡ. ಖಂಡಿತವಾಗಿಯೂ ಅಲ್ಲಾಹನು ದುರಹಂಕಾರಿಯನ್ನೂ ಡಂಭಾಚಾರಿಯನ್ನೂ ಪ್ರೀತಿಸುವುದಿಲ್ಲ." (31: 19)

"ವಿನೀತರಾಗಿರುವವರಿಗೆ ನೀನು ಶುಭವಾರ್ತೆಯನ್ನು ಅರುಹು."

(22: 35)

## ನ್ಯಾಯಪಾಲನೆ ಮಾಡಿರಿ

"ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು." (ಪವಿತ್ರ ಖುರ್‌ಆನ್ 5 :9)

"ಅಳತೆ ಮತ್ತು ತೂಕವನ್ನು ನ್ಯಾಯಬದ್ಧವಾಗಿ ಮಾಡಿರಿ...... ನೀವು ಮಾತನಾಡುವಾಗ (ಆ ಮಾತಿಗೆ ಸಂಬಂಧಿಸಿದವರು) ನಿಮ್ಮ ನಿಕಟ ಬಂಧುಗಳಾದರೆ ಕೂಡ ನ್ಯಾಯವನ್ನು ಪಾಲಿಸಿರಿ." (6: 153)

"ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ." (16: 91)

"ನಿಶ್ಚಯವಾಗಿಯೂ ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ." (49: 10)

## ಜನರ ಮಧ್ಯೆ ಶಾಂತಿ ಸ್ಥಾಪನೆ ಮಾಡಿರಿ

"ಅವರಲ್ಲಿ (ಜನರಲ್ಲಿ) ಹೆಚ್ಚಿನವರ ಸಮಾಲೋಚನೆಗಳಲ್ಲಿ ಯಾವ ಒಳಿತೂ ಇಲ್ಲ – ಧಾನಧರ್ಮ ಮಾಡುವುದರ ಬಗ್ಗೆ ಅಥವಾ ಸತ್ಕಾರ್ಯ ಗೈಯ್ಯುವುದರ ಬಗ್ಗೆ ಅಥವಾ ಜನರೆಡೆಯಲ್ಲಿ ಸಾಮರಸ್ಯ ಏರ್ಪಡಿಸುವ ಬಗ್ಗೆ ಮಾಡುವವರ ಸಮಾಲೋಚನೆಗಳ ಹೊರತು. ಅಲ್ಲಾಹನ ಸಂತೃಪ್ತಿಯನ್ನು ಬಯಸಿ ಯಾವನಾದರೂ ಹಾಗೆ ಮಾಡಿದರೆ ನಾವು ಆತನಿಗೆ ಮಹತ್ತರವಾದ ಪ್ರತಿಫಲವನ್ನು ನೀಡುವೆವು."

(ಪವಿತ್ರ ಖುರ್‌ಆನ್ 4: 115)

"ಸತ್ಯವಿಶ್ವಾಸಿಗಳ ಪೈಕಿ ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ, ನೀವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣ ಮಾಡಿದರೆ, ಅಲ್ಲಾಹನ ಆಜ್ಞೆಯ ಕಡೆಗೆ ಅವರು ಮರಳುವ ತನಕ ಅವರ ವಿರುದ್ಧ ಹೋರಾಡಿರಿ. ಅನಂತರ ಆ ಗುಂಪು ಮರಳಿದರೆ ಅವರ ಮಧ್ಯೆ ನ್ಯಾಯಯುತವಾಗಿ ಸಂಧಾನ ಮಾಡಿಸಿರಿ. ಹಾಗೂ ನ್ಯಾಯೋಚಿತವಾಗಿ ವರ್ತಿಸಿರಿ." (49: 10)

## ಸಹನೆ ದೋರಿರಿ

"ಸಹನೆ ಮತ್ತು ಪ್ರಾರ್ಥನೆ ಮೂಲಕ ನೀವು ಸಹಾಯವನ್ನು

ಯಾಚಿಸಿರಿ.” (ಪವಿತ್ರ ಖುರ್‌ಆನ್ 2 :46)

“ಎಲೈ ಸತ್ಯವಿಶ್ವಾಸಿಗಳೇ, ಸಹನೆ ಮತ್ತು ಪ್ರಾರ್ಥನೆಯಿಂದ ನೀವು (ಅಲ್ಲಾಹನ) ಸಹಾಯವನ್ನು ಯಾಚಿಸಿರಿ. ಖಂಡಿತವಾಗಿಯೂ ಅಲ್ಲಾಹನು ಸಹನಶೀಲರೊಂದಿಗಿದ್ದಾನೆ.” (2: 154)

“(ಹೇ ಪ್ರವಾದಿ) ನೀನು ಸಹನಶೀಲರಿಗೆ ಶುಭವಾರ್ತೆಯನ್ನು ತಿಳಿಸು.” (2: 156)

“ದಾರಿದ್ರ್ಯಾವಸ್ಥೆಯಲ್ಲಿ ಮತ್ತು ಸಂಕಟಾವಸ್ಥೆಯಲ್ಲಿ ಸಹನೆ ತೋರಿಸುವವರೂ ಯುದ್ಧ ಕಾಲದಲ್ಲಿ ಸ್ಥೈರ್ಯ ತೋರಿಸುವವರೂ ನಿಜವಾದ ಪುಣ್ಯವಂತರಾಗಿದ್ದಾರೆ.” (2: 178)

“ಅವರು ತಮ್ಮ ಪ್ರಭುವಿನ ಪ್ರೀತಿಯನ್ನು ಆಶಿಸುತ್ತಾ ಸಹನೆದೋರುತ್ತಾರೆ.” (13: 23)

“ನೀವು ಪ್ರತೀಕಾರ ಮಾಡುವಿರಾದರೆ, ನಿಮ್ಮ ಮೇಲೆ ಉಂಟಾದ ಅಕ್ರಮಕ್ಕೆ ಸಮಾನವಾದಷ್ಟು ಮಾತ್ರ ಪ್ರತೀಕಾರ ಮಾಡಿರಿ. ಆದರೆ ನೀವು ಸಹನೆ ತೋರಿಸುವಿರಾದರೆ, ಸಹನಶೀಲರಿಗೆ ಅದು ಅತ್ಯುತ್ತಮವಾಗಿದೆ.”

(16: 127)

“ಸಹನೆದೋರು. ಅಲ್ಲಾಹನ ಸಹಾಯದಿಂದ ಮಾತ್ರ ನಿನಗೆ ಸಹನೆದೋರಲು ಸಾಧ್ಯವಾಯಿತು.” (16 :128)

“ದಿಟವಾಗಿಯೂ ತಾಳ್ಮೆ ವಹಿಸುವವರಿಗೆ ಅಗಣಿತವಾದ ಪ್ರತಿಫಲ ಲಭ್ಯವಾಗುವುದು.” (39: 11)

“ಯಾರಾದರೂ ತಾಳ್ಮೆ ವಹಿಸಿದರೆ ಮತ್ತು ಕ್ಷಮಿಸಿದರೆ ನಿಸ್ಸಂದೇಹವಾಗಿಯೂ ಅದೊಂದು ದೃಢ ನಿರ್ಧಾರವೇ ಆಗಿದೆ.”

(42: 44)

“ಮನುಷ್ಯನು ನಷ್ಟ ಹೊಂದಿದವನಾಗಿದ್ದಾನೆ – ಸತ್ಯವಿಶ್ವಾಸ ಹೊಂದಿ ಸತ್ಕರ್ಮ ನಿರತರಾಗಿದ್ದು, ಸತ್ಯಕ್ಕೋಸ್ಕರ ಪರಸ್ಪರ ಉಪದೇಶಿಸುವವರೂ ತಾಳ್ಮೆಗೋಸ್ಕರ ಅನ್ಯೋನ್ಯ ಉಪದೇಶಿಸುವವರೂ ಹೊರತು.”

(103: 3, 4)

## ಸ್ಥಿರ ಚಿತ್ತತೆ

“ಯಾರು ‘ಅಲ್ಲಾಹನು ನಮ್ಮ ಪ್ರಭು’ ಎಂದು ಹೇಳುತ್ತಾರೋ ಮತ್ತು ಸ್ಥಿರಚಿತ್ತರಾಗಿರುತ್ತಾರೋ ಅವರ ಬಳಿಗೆ ದೇವದೂತರು ಇಳಿದು ಬಂದು ಹೇಳುವರು: ನೀವು ಭಯಪಡಬೇಡಿರಿ. ವ್ಯಥೆಗೊಳ್ಳುವುದೂ ಬೇಡ. ನಿಮಗೆ ವಾಗ್ದಾನ ಮಾಡಲಾದ ಸ್ವರ್ಗದ ಬಗ್ಗೆ ನೀವು ಸಂತೋಷಪಡಿರಿ. ಇಹಲೋಕದಲ್ಲೂ ಪರಲೋಕದಲ್ಲೂ ನಾವು ನಿಮ್ಮ ಮಿತ್ರರಾಗಿದ್ದೇವೆ. ನಿಮ್ಮ ಮನಸ್ಸು ಬಯಸುವುದೆಲ್ಲ ನಿಮಗೆ ಅಲ್ಲಿ ದೊರಕುವುವು. ನೀವು ಕೇಳುವುದೆಲ್ಲ ನಿಮಗೆ ಅಲ್ಲಿ ಲಭಿಸುವುವು. ಇದು ಕ್ಷಮಾಶೀಲನೂ ಕಾರುಣ್ಯನಿಧಿಯೂ ಆದವನಿಂದ ಒಂದು ಸತ್ಕಾರವಾಗಿದೆ.” (ಪವಿತ್ರ ಖುರ್‌ಆನ್ 41: 31–33)

## ಪರಿಶುದ್ಧತೆ

“ಅಲ್ಲಾಹನು ಪಶ್ಚಾತ್ತಾಪ ಪಡುವವರನ್ನು ಪ್ರೀತಿಸುತ್ತಾನೆ. (ಬಾಹ್ಯವಾಗಿಯೂ ಆಂತರಿಕವಾಗಿಯೂ) ಪರಿಶುದ್ಧರಾಗಿರುವವರನ್ನು ಅವನು ಇಷ್ಟಪಡುತ್ತಾನೆ.” (ಪವಿತ್ರ ಖುರ್‌ಆನ್ 2: 223)

“ಆದರೆ ಅವನು (ಅಲ್ಲಾಹನು) ನಿಮ್ಮನ್ನು ಶುದ್ಧಗೊಳಿಸಲಿಕ್ಕೂ ನಿಮಗೆ ಅವನ ಅನುಗ್ರಹಗಳನ್ನು ಪೂರ್ಣವಾಗಿ ನೀಡಲಿಕ್ಕೂ ಅವನು ಇಚ್ಛಿಸುತ್ತಾನೆ.” (5: 7)

“ಪರಿಶುದ್ಧರನ್ನು ಅಲ್ಲಾಹನು ಪ್ರೀತಿಸುತ್ತಾನೆ.” (9 :108)

“ಅಲ್ಲಾಹನು ತಾನಿಚ್ಛಿಸುವವರನ್ನು ಪರಿಶುದ್ಧರನ್ನಾಗಿ ಮಾಡುತ್ತಾನೆ.”

(24: 22)

“ನಿಮ್ಮಿಂದ ಎಲ್ಲ ಮಾಲಿನ್ಯವನ್ನು ನೀಗಿಸಿ ನಿಮ್ಮನ್ನು ಪರಿಶುದ್ಧಗೊಳಿಸಲು ಅಲ್ಲಾಹನು ಬಯಸುತ್ತಾನೆ.” (33: 34)

“ನಿನ್ನ ವಸ್ತ್ರಗಳನ್ನು ಪರಿಶುದ್ಧಗೊಳಿಸು.” (74: 5)

“ಯಾರು ಪರಿಶುದ್ಧನಾಗುತ್ತಾನೋ ಅವನು ಜಯ ಹೊಂದುವನು.”

(87: 15)

“ಅದನ್ನು (ಆತ್ಮವನ್ನು) ಪರಿಶುದ್ಧವಾಗಿರಿಸಿದವನು ಖಂಡಿತವಾಗಿಯೂ ಜಯಗಳಿಸಿದನು. ಅದನ್ನು ಮಣ್ಣು ಗೂಡಿಸಿದವನು ಖಂಡಿತವಾಗಿಯೂ ಪರಾಜಿತನಾದನು.” (91: 10, 11)

## ಆತ್ಮ ನಿಯಂತ್ರಣ

“ನೀವು ಯಾವುದೇ ನಿಕೃಷ್ಟ ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ.” (ಪವಿತ್ರ ಖುರ್‌ಆನ್ 4: 136)

“ಭಯಭಕ್ತಿಯುಳ್ಳವರನ್ನು ಶೈತಾನನ ಪ್ರಚೋದನೆ ಸ್ಪರ್ಶಿಸಿದರೆ ಅವರು (ಅಲ್ಲಾಹನನ್ನು) ಸ್ಮರಿಸುತ್ತಾರೆ. ಆಗ ಅವರು ಸಂಗತಿಗಳನ್ನು ಸರಿಯಾಗಿ ನೋಡುವಂತಾಗುತ್ತಾರೆ.” (7: 202)

“ನಮ್ಮ ಸ್ಮರಣೆಯಿಂದ ಯಾರ ಹೃದಯ ನಿರ್ಲಕ್ಷ್ಯವಾಗಿರುವುದೋ, ಯಾರು ತನ್ನ ಸ್ವೇಚ್ಛಾಚಾರಕ್ಕೆ ಅಧೀನನಾಗಿರುವನೋ, ಯಾರು ತನ್ನ ವರ್ತನೆಯಲ್ಲಿ ಮಿತಿ ಮೀರಿರುವನೋ ಅಂತಹವನನ್ನು ನೀನು ಅನುಸರಿಸಬಾರದು.” (18: 29)

“ಅಧರ್ಮಿಗಳು ತಿಳುವಳಿಕೆಯಿಲ್ಲದೆ ತಮ್ಮ ಸ್ವೇಚ್ಛೆಗಳನ್ನು ಹಿಂಬಾಲಿಸುತ್ತಾರೆ.” (30: 30)

“ನೀನು ಜನರೆಡೆಯಲ್ಲಿ ನ್ಯಾಯಯುತವಾಗಿ ತೀರ್ಮಾನ ಮಾಡು. ನೀನು ಸ್ವೇಚ್ಛೆಯಿಂದ ವರ್ತಿಸಬಾರದು. ಅದು ನಿನ್ನನ್ನು ಅಲ್ಲಾಹನ ಮಾರ್ಗದಿಂದ ಅಗಲಿಸುವುದು.” (38: 27)

“ಯಾರು ಅಲ್ಲಾಹನ ಮುಂದೆ ನಿಲ್ಲಲು ಭಯಪಡುತ್ತಾನೋ ಮತ್ತು ತನ್ನನ್ನು ಕೆಟ್ಟ ಆಶೆಗಳಿಂದ ತಡೆದುಕೊಳ್ಳುತ್ತಾನೋ ಖಂಡಿತವಾಗಿಯೂ ಸ್ವರ್ಗ ಅವನ ವಾಸ ಸ್ಥಳವಾಗುವುದು.” (79: 41, 42)

## ವಿಧೇಯತೆ

“ನೀನು ಅಲ್ಲಾಹನನ್ನು ಆರಾಧಿಸು – ಸಂಪೂರ್ಣವಾಗಿ ಅವನಿಗೆ ವಿಧೇಯತೆಯನ್ನು ತೋರಿಸುತ್ತಾ. ಆಲಿಸಿರಿ; ಪ್ರಾಮಾಣಿಕವಾದ ವಿಧೇಯತೆ ಅಲ್ಲಾಹನಿಗೆ ಮಾತ್ರ ಸಲ್ಲುತ್ತದೆ.”

(ಪವಿತ್ರ ಖುರ್‌ಆನ್ 39: 3, 4)

"ಅಲ್ಲಾಹನಿಗೆ ಸಂಪೂರ್ಣ ವಿಧೇಯರಾಗಿದ್ದುಕೊಂಡು ಅವನನ್ನು ಆರಾಧಿಸಬೇಕು." (98: 6)

"ಪ್ರಾರ್ಥನೆಯ ಬಗ್ಗೆ ಶ್ರದ್ಧೆ ಇಲ್ಲದೆ ಪ್ರಾರ್ಥಿಸುವವರಿಗೆ ವಿನಾಶ. ಅವರು ತೋರಿಕೆಯ ಕೆಲಸ ಮಾಡುತ್ತಾರೆ." (107: 5–7)

### ಸತ್ಯಸಂಧತೆ

"ನೀವು (ಸತ್ಯವನ್ನು) ಮರೆಮಾಚಿದರೆ ಅಥವಾ (ಅದನ್ನು ಬಹಿರಂಗ ಪಡಿಸದೆ) ನುಣುಚಿಕೊಂಡರೆ (ತಿಳಿದುಕೊಳ್ಳಿರಿ) ನಿಮ್ಮ ವರ್ತನೆಯ ಕುರಿತು ಅಲ್ಲಾಹನು ಚೆನ್ನಾಗಿ ತಿಳಿದವನಾಗಿದ್ದಾನೆ."

(ಪವಿತ್ರ ಖುರ್‌ಆನ್ 4: 136)

"ಅಲ್ಲಾಹನು ಹೇಳುವನು: ಇದು ಸತ್ಯವಂತರಿಗೆ ತಮ್ಮ ಸತ್ಯಸಂಧತೆ ಪ್ರಯೋಜನ ನೀಡುವ ದಿನವಾಗಿದೆ. ಕೆಳಭಾಗದಲ್ಲಿ ಹೊಳೆಗಳು ಹರಿಯುವ ಸ್ವರ್ಗೀಯ ತೋಟಗಳು ಅವರಿಗೆ ಇವೆ. ಅವರು ಅಲ್ಲಿ ಶಾಶ್ವತವಾಗಿ ವಾಸಿಸುವರು. ಅಲ್ಲಾಹನು ಅವರ ಬಗ್ಗೆ ಸಂಪ್ರೀತನಾಗಿರುವನು. ಅವರು ಅಲ್ಲಾಹನ ಬಗ್ಗೆಯೂ ಸಂತುಷ್ಟರಾಗಿರುವರು. ಅದೇ ಮಹತ್ತರ ವಿಜಯವಾಗಿದೆ." (5: 120)

"ಎಲೈ ಸತ್ಯವಿಶ್ವಾಸಿಗಳೇ, ಅಲ್ಲಾಹನಿಗೆ ಭಯಭಕ್ತಿ ತೋರಿಸಿರಿ ಹಾಗೂ ಸತ್ಯಸಂಧರ ಪೈಕಿಯವರಾಗಿರಿ." (9: 119)

"ಹೇಳು: ಸತ್ಯ ಆಗಮಿಸಿತು, ಅಸತ್ಯ ಅಳಿದು ಹೋಯಿತು. ಖಂಡಿತವಾಗಿಯೂ ಅಸತ್ಯ ಅಳಿದೇ ಹೋಗುತ್ತದೆ." (17: 82)

"ಸುಳ್ಳು ಹೇಳುವುದರಿಂದ ನೀವು ದೂರವಿದ್ದುಕೊಳ್ಳಿರಿ."

(22: 31)

"ಅವರು (ಸತ್ಯವಿಶ್ವಾಸಿಗಳು) ಸುಳ್ಳು ಸಾಕ್ಷಿ ಹೇಳುವವರಲ್ಲ. ಅವರು ನಿಷ್ಪ್ರಯೋಜಕ ವಿಚಾರಗಳ ಬಗ್ಗೆ (ಅವರು ಗಮನ ಕೊಡದೆ) ಗಾಂಭೀರ್ಯದಿಂದ ವರ್ತಿಸುತ್ತಾರೆ." (25: 73)

"ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನ ಭಯಭಕ್ತಿ ಇರಿಸಿಕೊಳ್ಳಿರಿ, ನೇರವಾದ ಮಾತನ್ನಾಡಿರಿ." (33: 71)

"ಅಲ್ಲಾಹನ ನಾಮದಲ್ಲಿ ಸುಳ್ಳು ಹೇಳುವ ಮತ್ತು ತನ್ನ ಬಳಿಗೆ ಸತ್ಯ ಬಂದಾಗ ಅದನ್ನು ಸುಳ್ಳಾಗಿಸುವವನಿಗಿಂತ ಅಧರ್ಮಿ ಇನ್ನಾರಿದ್ದಾರೆ?"

(39: 33)

## ಮಾಡಬಾರದ ಕೆಲಸಗಳು

### ವ್ಯಭಿಚಾರ

"ನೀವು ವ್ಯಭಿಚಾರದ ಸಮೀಪಕ್ಕೆ ಹೋಗಬೇಡಿರಿ. ನಿಶ್ಚಯವಾಗಿಯೂ ಅದು ಅಶ್ಲೀಲಕರವೂ ದುಷ್ಟಮಾರ್ಗವೂ ಆಗಿದೆ."

(ಪವಿತ್ರ ಖುರ್‌ಆನ್ 17: 33)

### ಅಹಂಕಾರ

"ಯಾರು ನಿರ್ಲಕ್ಷ್ಯವನ್ನೂ ಅಹಂಕಾರವನ್ನೂ ತೋರಿಸುತ್ತಾರೋ, ಅವರನ್ನು ಅವನು (ಅಲ್ಲಾಹನು) ಯಾತನಾಮಯವಾದ ಶಿಕ್ಷೆಯಿಂದ ದಂಡಿಸುವನು." (ಪವಿತ್ರ ಖುರ್‌ಆನ್ 4: 174)

"ಯಾರು ನಮ್ಮ ದೃಷ್ಟಾಂತಗಳನ್ನು ಸುಳ್ಳಾಗಿಸಿ ಅಹಂಭಾವಿಗಳಾಗಿ ಅದರಿಂದ ಮುಖ ತಿರುಗಿಸುತ್ತಾರೋ ಅವರು ನರಕವಾಸಿಗಳಾಗಿದ್ದಾರೆ."

(7: 37)

"ಖಂಡಿತವಾಗಿಯೂ ಅವನು (ಅಲ್ಲಾಹನು) ಅಹಂಭಾವಿಗಳನ್ನು ಮೆಚ್ಚುವುದಿಲ್ಲ." (16: 24)

"ಅಹಂಕಾರಿಗಳ ವಾಸಸ್ಥಳ ಬಹಳ ನಿಕೃಷ್ಟವಾದುದಾಗಿದೆ."

(16: 30)

"ನೀನು ಭೂಮಿಯಲ್ಲಿ ಅಹಂಭಾವದಿಂದ ನಡೆಯಬೇಡ."

(17: 38)

"ಅಹಂಕಾರಿಯಾದ ಮತ್ತು ಸ್ವೇಚ್ಛಾಚಾರಿಯಾದ ಪ್ರತಿಯೊಬ್ಬನ ಹೃದಯದ ಮೇಲೆ ಅಲ್ಲಾಹನು ಮುದ್ರೆ ಹಾಕುತ್ತಾನೆ." (40: 36)

### ಪರದೂಷಣೆ

"(ಪರಸ್ಪರ) ಬೆನ್ನ ಹಿಂದೆ ದೂಷಿಸಬೇಡಿರಿ. ತನ್ನ ಮೃತ ಸಹೋದರನ ಮಾಂಸವನ್ನು ತಿನ್ನಲು ನಿಮ್ಮಲ್ಲಿ ಯಾರಾದರೂ ಇಷ್ಟಪಡುವನೇ?"

(ಪವಿತ್ರ ಖುರ್‌ಆನ್ 49: 13)

### ಆತ್ಮ ಪ್ರಶಂಸೆ

"ಆತ್ಮ ಪ್ರಶಂಸೆ ಮಾಡುವ ದುರಭಿಮಾನಿಗಳನ್ನು ಅಲ್ಲಾಹನು ಮೆಚ್ಚುವುದಿಲ್ಲ." (ಪವಿತ್ರ ಖುರ್‌ಆನ್ 57: 24)

### ಪರಿಹಾಸ

"ಒಂದು ಜನಾಂಗ ಇನ್ನೊಂದು ಜನಾಂಗವನ್ನು ಪರಿಹಾಸ ಮಾಡದಿರಲಿ." (ಪವಿತ್ರ ಖುರ್‌ಆನ್ 49: 12)

### ಅಪಕೀರ್ತಿ

"ಸತ್ಯವಿಶ್ವಾಸ ಹೊಂದಿದ ಬಳಿಕ ಅಪಕೀರ್ತಿಗೆ ಈಡಾಗುವುದು (ನಿಜವಾಗಿಯೂ) ಕೆಟ್ಟದ್ದಾಗಿದೆ." (ಪವಿತ್ರ ಖುರ್‌ಆನ್ 49: 12)

### ನಿರಾಶೆ

"ಅಲ್ಲಾಹನ ಕೃಪೆಯ ಬಗ್ಗೆ ನೀವು ನಿರಾಶೆಪಡಬೇಡಿರಿ."

(ಪವಿತ್ರ ಖುರ್‌ಆನ್ 39: 54)

### ಮತ್ಸರ

"ಮತ್ಸರಿ ಮತ್ಸರಪಡುವಾಗ ಉಂಟಾಗುವ ಅವನ ಉಪದ್ರವದಿಂದಲೂ (ಅಲ್ಲಾಹನ ಅಭಯ ಯಾಚಿಸುತ್ತೇನೆ)."

(ಪವಿತ್ರ ಖುರ್‌ಆನ್ 113: 6)

### ಮಿತಿಮೀರುವುದು; ದುಂದು ವೆಚ್ಚ

"ನೀವು ತಿನ್ನಿರಿ, ಕುಡಿಯಿರಿ; ಆದರೆ ಮಿತಿಮೀರ ಬೇಡಿರಿ."

(ಪವಿತ್ರ ಖುರ್‌ಆನ್ 7: 32)

"ಯಾವ ದುರ್ವ್ಯಯವನ್ನೂ ಮಾಡಬೇಡಿರಿ. ದುಂದುವೆಚ್ಚ

ಮಾಡುವವರು ಖಂಡಿತವಾಗಿಯೂ ಶೈತಾನನ ಸಹೋದರರಾಗಿದ್ದಾರೆ."

(17: 27, 28)

### ಯಾವುದರ ಬಗ್ಗೆ ತಿಳಿದಿಲ್ಲವೋ ಅದನ್ನು ಹಿಂಬಾಲಿಸುವುದು

"ಯಾವುದರ ಬಗ್ಗೆ ನಿನಗೆ ಸರಿಯಾದ ಜ್ಞಾನವಿಲ್ಲವೋ ಅದನ್ನು ನೀನು ಹಿಂಬಾಲಿಸಬೇಡ. ಖಂಡಿತವಾಗಿಯೂ ಕಿವಿ, ಕಣ್ಣು, ಹೃದಯ ಇವೆಲ್ಲವುಗಳ ವಿಚಾರಣೆ ನಡೆಯುವುದು."

(ಪವಿತ್ರ ಖುರ್‌ಆನ್ 17: 37)

### ಉದ್ದಟತನ, ಧಿಕ್ಕಾರ

"ನಾವು ಮೂಸಾ ಮತ್ತು ಅವರ ಸಹೋದರ ಹಾರೂನ್‌ರನ್ನು ನಮ್ಮ ದೃಷ್ಟಾಂತ ಮತ್ತು ಸ್ಪಷ್ಟವಾದ ಸಾಕ್ಷ್ಯಗಳೊಂದಿಗೆ ಕಳುಹಿಸಿದೆವು – ಫಿರ್‌ಔನ್ ಮತ್ತು ಅವನ ಮುಖಂಡರ ಬಳಿಗೆ. ಆದರೆ ಅವರು ದುರಹಂಕಾರದಿಂದ ವರ್ತಿಸಿದರು. ಅವರು ಬಹಳ ದರ್ಪದ ಜನರಾಗಿದ್ದರು." (ಪವಿತ್ರ ಖುರ್‌ಆನ್ 23: 46, 47)

"ನಿಮ್ಮ ಮನಸ್ಸಿಗೆ ಹಿಡಿಸದ ಸಂದೇಶದೊಂದಿಗೆ ಪ್ರತಿಯೊಬ್ಬ ಪ್ರವಾದಿ ನಿಮ್ಮ ಬಳಿ ಬಂದಾಗಲೂ ನೀವು ಅವರನ್ನು ಧಿಕ್ಕರಿಸಿದಿರಿ." (2: 88)

### ಅಳತೆ ಮತ್ತು ತೂಕದಲ್ಲಿ ಕಡಿಮೆ ಮಾಡುವುದು

"ಅಳತೆಯಲ್ಲಿ ಕಮ್ಮಿ ಮಾಡಿಕೊಡುವವರಿಗೆ ಮಹಾನಾಶ. ಅವರು (ಬೇರೆ) ಜನರಿಂದ ಅಳೆದು ಪಡೆಯುವಾಗ ಪೂರ್ಣವಾಗಿ ಪಡೆಯುತ್ತಾರೆ. ಆದರೆ ಅವರು ಬೇರೆಯವರಿಗೆ ಅಳೆದು ಅಥವಾ ತೂಕಮಾಡಿ ಕೊಡುವಾಗ ಕಡಿಮೆ ಮಾಡುತ್ತಾರೆ."

(ಪವಿತ್ರ ಖುರ್‌ಆನ್ 83: 2–4)

### ಅಡ್ಡ ಹೆಸರಿನಿಂದ ಕರೆಯುವುದು

"ನೀವು ಪರಸ್ಪರ ವಿಕೃತ ನಾಮದಿಂದ ಕರೆಯಬೇಡಿರಿ."

(ಪವಿತ್ರ ಖುರ್‌ಆನ್ 49: 12)

### ಜಿಪುಣತನ

"ಅವರು (ಅವಿಶ್ವಾಸಿಗಳು) ಲೋಭಿಗಳೂ ಜಿಪುಣತೆಯನ್ನು ತೋರಿಸಲು ಜನರಿಗೆ ಹೇಳಿಕೊಡುವವರೂ ಅಲ್ಲಾಹನು ತನ್ನ ಅನುಗ್ರಹದಿಂದ ಅವರಿಗೆ ನೀಡಿರುವುದನ್ನು ಮುಚ್ಚಿಡುವವರೂ ಆಗಿದ್ದಾರೆ." (ಪವಿತ್ರ ಖುರ್‌ಆನ್ 4: 38)

"ಯಾವನಾದರೂ ಜಿಪುಣತೆ ತೋರಿಸಿದರೆ ಆ ಜಿಪುಣತೆಯ ದೋಷಫಲ ಅವನಿಗೆಯೇ." (47: 39)

"ತಮ್ಮ ಮನಸ್ಸಿನ ಜಿಪುಣತೆಯಿಂದ ರಕ್ಷಿಸಲ್ಪಟ್ಟವರೇ ವಿಜಯಶಾಲಿಗಳು." (59: 10)

### ವಂಚನೆ

"ನೀನು ವಂಚಕರ ಪರವಾಗಿ ವಾದಿಸುವವನಾಗಬಾರದು."

(ಪವಿತ್ರ ಖುರ್‌ಆನ್ 4: 106)

"ಆತ್ಮ ವಂಚನೆ ಮಾಡುವವರ ಪರವಾಗಿಯೂ ನೀನು ವಾದಿಸಬಾರದು. ವಿಶ್ವಾಸ ಘಾತುಕನೂ ಮಹಾಪಾಪಿಯೂ ಆದವನನ್ನು ಅಲ್ಲಾಹನು ಮೆಚ್ಚಲಾರ." (4: 108)

"ಎಲೈ ಸತ್ಯವಿಶ್ವಾಸಿಗಳೇ, ನೀವು ಅಲ್ಲಾಹನಿಗೂ ಪ್ರವಾದಿಗೂ ವಿಶ್ವಾಸಘಾತ ಮಾಡಬಾರದು. ನೀವು ತಿಳಿದುಕೊಂಡೂ ನಿಮ್ಮ ವಿಶ್ವಸ್ತ ನಿಧಿಗಳಲ್ಲಿ ವಂಚನೆ ಮಾಡಬೇಡಿರಿ." (8: 28)

"ನಿಶ್ಚಯವಾಗಿಯೂ ಅಲ್ಲಾಹನು ವಿಶ್ವಾಸ ಘಾತಕರನ್ನು ಇಷ್ಟಪಡುವುದಿಲ್ಲ." (8: 59)

### ಸಂಶಯಪಡುವುದು

"ಎಲೈ ವಿಶ್ವಾಸಿಗಳೇ, ಮಿತಿಮೀರಿ ಸಂಶಯಪಡುವುದರಿಂದ ನೀವು ದೂರವಿರಿ. ನಿಶ್ಚಯವಾಗಿಯೂ ಕೆಲವು ಸಂಶಯಗಳು ಪಾಪಕರವಾಗಿವೆ. ನೀವು ಪರಸ್ಪರ ಗೂಢಚಾರಿಕೆ ನಡೆಸಬೇಡಿರಿ."

(ಪವಿತ್ರ ಖುರ್‌ಆನ್ 49: 13)

### ಸುಳ್ಳು ಹೇಳುವುದು

"ನೀವು ಸುಳ್ಳು ಹೇಳುವುದರಿಂದ ದೂರವಿದ್ದುಕೊಳ್ಳಿರಿ."

(ಪವಿತ್ರ ಖುರ್‌ಆನ್ 22: 31)

"ಅವರು (ಸತ್ಯವಿಶ್ವಾಸಿಗಳು) ಸುಳ್ಳು ಸಾಕ್ಷಿ ಹೇಳುವವರಲ್ಲ."

(25: 73)

### ಕಳ್ಳತನ

"ಕಳ್ಳತನ ಮಾಡುವ ಪುರುಷ ಮತ್ತು ಕಳ್ಳತನ ಮಾಡುವ ಸ್ತ್ರೀ – ಅವರ ಕೃತ್ಯಕ್ಕೆ ಪ್ರತೀಕಾರವಾಗಿ ಮತ್ತು ಅಲ್ಲಾಹನ ಕಡೆಯಿಂದ ಶಿಕ್ಷೆಯಾಗಿ ಅವರ ಕೈಗಳನ್ನು ಕಡಿಯಿರಿ." (ಪವಿತ್ರ ಖುರ್‌ಆನ್ 5: 39)

ಜನರಲ್ಲಿ ಒಳಿತನ್ನು ಪ್ರೋತ್ಸಾಹಿಸಲು ಮತ್ತು ಕೆಡುಕಿನಿಂದ ಅವರನ್ನು ತಡೆಯಲು ಕೈ ಜೋಡಿಸಲು ಲೋಕದ ಎಲ್ಲ ಧರ್ಮಗಳ ನಾಯಕರಿಗೆ ಇಸ್ಲಾಮ್ ಆಹ್ವಾನಿಸುತ್ತದೆ. ಹೀಗೆ ಸಂಭವಿಸಿದರೆ ಲೋಕವು ಉತ್ತಮಗೊಳ್ಳುವುದು. ♦

**LOVE FOR ALL - HATRED FOR NONE**

**ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ**

# ದೇಶವನ್ನಾಳುವವರಿಗೆ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಉತ್ತಮ ಮಾದರಿ

* ಮೌಲಾನಾ ಮುಹಮ್ಮದ್ ಇನಾಮ್ ಘೋರಿ

**"ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದೂ ಜನರೆಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ. ಅಲ್ಲಾಹನು ನಿಮಗೆ ಉಪದೇಶಿಸುವಂಥದ್ದು ಅತ್ಯುತ್ತಮವಾದುದು. ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಕಾಣುವವನೂ ಆಗಿದ್ದಾನೆ."**

(ಪವಿತ್ರ ಖುರ್‌ಆನ್ 4:59).

**"ಭೂಮಿಯಲ್ಲಿ ನಾವು ಅವರನ್ನು ನೆಲೆಗೊಳಿಸಿದರೆ ಅವರು ನಮಾಝನ್ನು ನಿಷ್ಠೆಯಿಂದ ನಿರ್ವಹಿಸುವರು; ಝಕಾತ್ ನೀಡುವರು; ಒಳಿತನ್ನು ಉಪದೇಶಿಸುವರು ಮತ್ತು ಕೆಡುಕನ್ನು ತಡೆಯುವರು. ಎಲ್ಲ ಕಾರ್ಯಗಳ ಅಂತ್ಯ ಪರಿಣಾಮ ಅಲ್ಲಾಹನ ಕೈಯಲ್ಲಿದೆ."**

(ಪವಿತ್ರ ಖುರ್‌ಆನ್ 22:42).

**"ಇಲ್ಲಿ ನಿನಗೆ ಹಸಿವೆ ಮತ್ತು ನಗ್ನತೆಯ ಬಾಧೆ ತಟ್ಟದು. ಬಾಯಾರಿಕೆ ಮತ್ತು ಬಿಸಿಲ ಬೇಗೆಗೆ ಕೂಡ ನೀನು ತುತ್ತಾಗಲಾರೆ."**

(ಪವಿತ್ರ ಖುರ್‌ಆನ್ 20:119,120).

ಸರಕಾರ ಯಾವುದೇ ರೀತಿಯದಾಗಿದ್ದರೂ ಒಂದು ದೇಶದ ಪ್ರಜೆಗಳು ಮತ್ತು ಅವರನ್ನು ಆಳುವವರಿಗೆ ಸ್ಪಷ್ಟವಾದ ಸಂದೇಶ ಮತ್ತು ಅನುಸರಿಸಬೇಕಾದ ಕಾರ್ಯಸೂಚಿಯನ್ನು ಪವಿತ್ರ ಖುರ್‌ಆನಿನ ಈ ಮೇಲಿನ ವಚನಗಳಲ್ಲಿ ನೀಡಲಾಗಿದೆ.

ಚುನಾವಣೆಯನ್ನು ನಡೆಸುವ ಪ್ರಜಾಪ್ರಭುತ್ವದ ಪ್ರಕ್ರಿಯೆ ಪರಿಪೂರ್ಣವಾಗಿ ಪ್ರಾಮಾಣಿಕವಾಗಿರಬೇಕು ಎಂದು ದೇಶದ ಜನರಿಗೆ ಉಪದೇಶಿಸಲಾಗಿದೆ. ಎಂತಹ ಆಡಳಿತಾಧಿಕಾರಿಗಳನ್ನು ಚುನಾಯಿಸಲು ಅಥವಾ ನಾಮನಿರ್ದೇಶಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕೆಂದರೆ ಆ ಅಧಿಕಾರಿಗಳು ಪ್ರಾಮಾಣಿಕರು ಮಾತ್ರವಲ್ಲ ದೇಶವನ್ನು ಆಳುವ ತಮ್ಮ ಹೊಣೆಗಾರಿಕೆಯನ್ನು ನಿರ್ವಹಿಸಲು ಅರ್ಹರೂ ಆಗಿರಬೇಕು. ಸರಕಾರ ಸ್ಥಾಪಿತವಾದ ನಂತರ ದೇಶವನ್ನಾಳುವವರ ಹೊಣೆಗಾರಿಕೆ ಏನೆಂದರೆ ಅವರು ಪರಿಪೂರ್ಣವಾದ ನ್ಯಾಯ ಬದ್ಧತೆಯಿಂದ ಧರ್ಮ, ಸಮುದಾಯ, ವರ್ಣ, ವಂಶವನ್ನು ತಾರತಮ್ಯ ಭಾವನೆಯಿಂದ ಪರಿಗಣಿಸದೆ ಪ್ರಜೆಗಳ ಹಕ್ಕುಗಳನ್ನು ಈಡೇರಿಸಿಕೊಡಲು ಪ್ರಯತ್ನಮಾಡಬೇಕು.

ಜನರ ಹಕ್ಕುಗಳಲ್ಲಿ ಮೊದಲನೆಯದಾಗಿ ಅವರ ಮೂಲಭೂತ ಆವಶ್ಯಕತೆಗಳನ್ನು ಒದಗಿಸಿಕೊಡಲು ವ್ಯವಸ್ಥೆ ಮಾಡಬೇಕು. ಜನರ ಕನಿಷ್ಠತಮ ಮೂಲಭೂತ ಆವಶ್ಯಕತೆ ಯಾವುದೆಂದರೆ ಯಾವುದೇ ವ್ಯಕ್ತಿ ಹಸಿದಿರಬಾರದು. ಕುಡಿಯಲು ಶುದ್ಧವಾದ ನೀರನ್ನು ಒದಗಿಸಲು ಪ್ರಯತ್ನಿಸಬೇಕು. ಧರಿಸಲು ಬಟ್ಟೆಯನ್ನು ಮತ್ತು ವಾಸಿಸಲು ಸರಕಾರದ ಸಂಪನ್ಮೂಲಗಳಿಗನುಸಾರವಾಗಿ ವಸತಿಯನ್ನು ಒದಗಿಸಬೇಕು. ಈ ಆವಶ್ಯಕತೆಯನ್ನು ಈಡೇರಿಸಲು ಇಸ್ಲಾಮ್ ಝಕಾತ್ ಮತ್ತು ಜಿಝಿಯದ ವ್ಯವಸ್ಥೆ ಮಾಡಿದೆ.

ಜನರು ತಮ್ಮ ನಂಬಿಕೆಗಳಿಗೆ ಅನುಸಾರವಾಗಿ ಆರಾಧನೆ ಮಾಡುವ ಸ್ವಾತಂತ್ರ್ಯವನ್ನು ಸರಕಾರ ನೀಡಬೇಕಾದುದು ಕಡ್ಡಾಯವಾಗಿದೆ. ಮಸ್‌ಜಿದ್‌ಗಳನ್ನು, ಚರ್ಚ್‌ಗಳನ್ನು, ಯಹೂದಿ ದೇವಾಲಯಗಳನ್ನು, ಹಿಂದೂ ಮಂದಿರಗಳನ್ನು ಗೌರವಿಸುವ ಮತ್ತು ಸಂರಕ್ಷಿಸುವ ವ್ಯವಸ್ಥೆಯನ್ನು ಸರಕಾರ ಮಾಡಬೇಕು.

ಎಂತಹ ಸಮಾಜ ವ್ಯವಸ್ಥೆ ಸ್ಥಾಪಿಸಲು ಪ್ರಯತ್ನಿಸಬೇಕೆಂದರೆ ಆ ಸಮಾಜದಲ್ಲಿ ಜನರು ತಮ್ಮವರೊಂದಿಗೆ ಮತ್ತು ಅನ್ಯರೊಂದಿಗೆ ಉತ್ತಮ ವರ್ತನೆ, ಸದ್ಗುಣ ಮತ್ತು ನ್ಯಾಯಪಾಲನೆಯ ಉಪದೇಶ ನೀಡುತ್ತಾ ಇರುವವರಾಗಬೇಕು. ಲೌಕಿಕ, ಧಾರ್ಮಿಕ, ನೈತಿಕ, ಔದ್ಯೋಗಿಕ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿ ಅತೃಪ್ತಿಕರವಾದ ಎಲ್ಲ ಕೃತ್ಯಗಳಿಂದ ತಮ್ಮನ್ನು ಮತ್ತು ಅನ್ಯರನ್ನು ತಡೆಯಲು ಪ್ರಯತ್ನಿಸುತ್ತಾ ಇರಬೇಕು.

ಈ ಸಂಕ್ಷಿಪ್ತ ಮುನ್ನುಡಿಯ ನಂತರ ನಾವು ನೋಡೋಣ – ಒಂದು ರಾಜ್ಯದ ಆಡಳಿತೆಗಾರನಾಗಿ ಎಂತಹ ಉತ್ತಮ ಮಾದರಿಯನ್ನು ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಪ್ರಕಟಿಸಿದರೆಂದು. ಇದಕ್ಕೋಸ್ಕರ ಮದೀನ ಮುನವ್ವರ ಎಂಬ ರಾಜ್ಯದ ಮೇಲೆ ವಿಹಂಗಮ ನೋಟ ಬೀರುತ್ತೇವೆ.

ಪೈಗಂಬರ್ ಎಂದು ವಾದಿಸಿದ ನಂತರ ಮಕ್ಕದಲ್ಲಿ ಹದಿಮೂರು ವರ್ಷಗಳ ಕಾಲ ಅತ್ಯಂತ ಹೆಚ್ಚಿನ ಮಟ್ಟದ ಹಿಂಸಾಚಾರಗಳಿಗೆ ಗುರಿಯಾದ ನಂತರ ಅಲ್ಲಾಹನ ಆಜ್ಞೆ ಪ್ರಕಾರ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಮದೀನಕ್ಕೆ ವಲಸೆ ಹೋದರು. ಮದೀನಕ್ಕೆ ತಲಪಿದ ನಂತರ ಅಲ್ಲಿ ಸಾಮೂಹಿಕ ನಮಾಝ್ ಅನುಷ್ಠಿಸಲು ಮಸ್‌ಜಿದನ್ನು ನಿರ್ಮಿಸಲು ಪ್ರಥಮವಾಗಿ ಗಮನ ಹರಿಸಿದರು. ಅವರು ಸ್ವಲ್ಪ ಕಾಲ ವಾಸಿಸಿದ ಖುಬಾ ಎಂಬ ಸ್ಥಳದಲ್ಲಿ ಪ್ರಥಮ ಮಸ್‌ಜಿದ್ ನಿರ್ಮಿಸಲಾಯಿತು. ಅನಂತರ ಮದೀನದಲ್ಲಿ ಇಬ್ಬರು ಅನಾಥ ಮಕ್ಕಳಿಂದ ಜಮೀನು ಖರೀದಿಸಿ ಮಸ್‌ಜಿದ್ ನಬವಿಯ ಅಸ್ತಿಭಾರ ಹಾಕಿದರು. ಅದು ಅತ್ಯಂತ ಸಾಮಾನ್ಯ ಕಟ್ಟಡವಾಗಿದ್ದರೂ ವಿಶಾಲವಾಗಿತ್ತು. ಖರ್ಜೂರದ ಮರದ ಸೋಗೆಗಳಿಂದ ಮಸ್‌ಜಿದಿನ ಛಾವಣಿ ನಿರ್ಮಿಸಲ್ಪಟ್ಟಿತ್ತು. ಈ ರೀತಿ ಪವಿತ್ರ ಖುರ್‌ಆನ್ ಹೇಳಿದ ಹಾಗೆ, ಭೂಮಿಯಲ್ಲಿ ನಾವು ಅವರನ್ನು ನೆಲೆಗೊಳಿಸಿದರೆ ಅವರು ನಮಾಝನ್ನು ನಿಷ್ಠೆಯಿಂದ ನಿರ್ವಹಿಸುವರು ಎಂದು ಅಲ್ಲಾಹನು ನಿರ್ದೇಶಿಸಿದುದನ್ನು ಅನುಸರಿಸಿ ಸಾಮೂಹಿಕ ನಮಾಝ್ ನಿರ್ವಹಿಸುವ ವ್ಯವಸ್ಥೆ ಮಾಡಿದರು. ಅನಂತರ ಮದೀನ ಎಂಬ ನಗರದಲ್ಲಿ ಸುವ್ಯವಸ್ಥೆ ಸ್ಥಾಪಿಸಲು ಗಮನ ಹರಿಸಿದರು.

ನೆನಪಿಡಬೇಕಾದುದೇನೆಂದರೆ ಮದೀನದ ನಗರ ಹೂವಿನ ಹಾಸಿಗೆಯೇನೂ ಆಗಿರಲಿಲ್ಲ. ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಮದೀನದ ನಿವಾಸಿಗಳಲ್ಲಿ ಬಹುಸಂಖ್ಯಾತರ ಓಟುಗಳಿಂದ ಚುನಾಯಿಸಲ್ಪಟ್ಟ ಅಧಿಪತಿಯೂ ಆಗಿರಲಿಲ್ಲ.

ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಲ್ಪಸಂಖ್ಯೆಯಲ್ಲಿ ನಿಷ್ಠಾವಂತ ಶಿಷ್ಯರು ಇಸ್ಲಾಮ್ ಧರ್ಮದ ಸಂದೇಶ ಮತ್ತು ಹಝ್ರತ್ ಪೈಗಂಬರರ ಅತ್ಯುತ್ಕೃಷ್ಟ ಸ್ವಭಾವ ಗುಣಗಳಿಂದ ಪ್ರಭಾವಿತರಾಗಿ ಆಗ ಯಸ್‌ರಿಬ್ ಎಂದು ಕರೆಯಲ್ಪಡುತ್ತಿದ್ದ ಮದೀನಕ್ಕೆ ಆಗಮಿಸಲು ಅವರೊಂದಿಗೆ ಅಪೇಕ್ಷಿಸಿದ್ದರು ಮತ್ತು ಇನ್ನೊಂದು ಕಡೆ ಅಲ್ಲಾಹನು ಯಸ್‌ರಿಬನ್ನು ಮದೀನತುರ್ರಸೂಲನ್ನಾಗಿ ಮಾಡಲು ಕಾರ್ಯನಿರತನಾಗಿದ್ದನು. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಯಾವುದೇ ಸಾಧನ ಸಾಮಗ್ರಿಗಳಿಲ್ಲದೆ ಅಡಗಿಕೊಂಡು, ಅಡಗಿಸಿಕೊಂಡು ತನ್ನ ಒಬ್ಬ ಸಂಗಡಿಗ ಅಬೂಬಕರ್ ಸಿದ್ದೀಖ್(ರ) ಅವರೊಂದಿಗೆ ಅಲ್ಲಿಗೆ ಆಗಮಿಸಿದರು.

ಆದರೆ ಅಲ್ಲಾಹನು ಮದೀನ ನಿವಾಸಿಗಳಾದ ಮುಸ್ಲಿಮರಲ್ಲಿ ಎಂತಹ ಪ್ರೀತಿ ಮತ್ತು ತ್ಯಾಗದ ಮನೋಭಾವವನ್ನು ಸೃಷ್ಟಿಸಿದ್ದನೆಂದರೆ ಪ್ರತಿಯೊಬ್ಬ ಹೀಗೆ ಇಚ್ಛಿಸುತ್ತಿದ್ದನು: ಹಝ್ರತ್ ಪೈಗಂಬರರು ನಮ್ಮ ಮನೆಗೆ ಆಗಮಿಸಿ ಅನುಗ್ರಹ ನೀಡಲಿ ಎಂದು. ಸ್ವಲ್ಪ ದಿವಸಗಳ ನಂತರ ಮಕ್ಕದಿಂದ ಹಝ್ರತ್ ಪೈಗಂಬರರ ಕುಟುಂಬದವರು ಮತ್ತು ಸಹಾಬರು ಮದೀನಕ್ಕೆ ವಲಸೆ ಬಂದರು. ಸಹಾಬರು ಬರಿಗೈಯಲ್ಲಿ ಮದೀನಕ್ಕೆ ಆಗಮಿಸಿದ್ದರು. ಅವರ ಪುನರ್ವಸತಿಯ ವ್ಯವಸ್ಥೆ ಆಗಬೇಕಾಗಿತ್ತು. ಹಝ್ರತ್ ಪೈಗಂಬರರು ಆಗಮಿಸುವಾಗ ಅಲ್ಲಿ ಯಾವುದೇ ಸರಕಾರವಿರಲಿಲ್ಲ. ಅಲ್ಲಿ ಸರಕಾರಿ ಖಜಾನೆಯಾಗಲೀ, ಬೈತುಲ್ ಮಾಲ್ ಆಗಲಿ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಝ್ರತ್ ಪೈಗಂಬರರು ಜಾಣ್ಮೆಯಿಂದ ಒಂದು ಪದ್ಧತಿ ರೂಪಿಸಿದರು. ಮಕ್ಕದ ಒಬ್ಬೊಬ್ಬ ಮುಹಾಜಿರ್ ಮದೀನದ ಒಬ್ಬೊಬ್ಬ ಅನ್ಸಾರ್‌ಗಳೊಂದಿಗೆ ಭ್ರಾತೃ ಸಂಬಂಧ ಸ್ಥಾಪಿಸಿದರು. ಈ ಭ್ರಾತೃ ಸಂಬಂಧ ಎಷ್ಟು ಉತ್ತಮ ಮಾದರಿಯದಾಗಿತ್ತೆಂದರೆ ಕೆಲವು ಅನ್ಸಾರ್‌ಗಳು ತಮ್ಮ ಮುಹಾಜಿರ್ ಸಹೋದರನೊಂದಿಗೆ ಹೇಳಿದರು: ನಮ್ಮ ಸಂಪತ್ತಿನ ಮತ್ತು ಸ್ವತ್ತಿನ ಅರ್ಧಾಂಶವನ್ನು ನಿಮಗೆ ಕೊಡುತ್ತೇವೆ ಎಂದು. ಅವರು ಪ್ರೀತಿ ವಿಶ್ವಾಸದಿಂದ ಹೀಗೆ ಸಹ ಹೇಳಿದರು: ನನಗೆ ಇಬ್ಬರು ಪತ್ನಿಯರಿದ್ದಾರೆ. ನಾನು ಒಬ್ಬಳಿಗೆ ತಲಾಖ್ ನೀಡುತ್ತೇನೆ. ಇದ್ದತ್ ಅವಧಿ ಕಳೆದ ನಂತರ ಆಕೆಯನ್ನು ವಿವಾಹವಾಗಿರಿ. ಆದರೆ ಈ ಕೊಡುಗೆಯ ಪ್ರಸ್ತಾಪ ಆಲಿಸಿದ ಮುಹಾಜಿರ್ ಹೇಳಿದರು: ನಿಮ್ಮ ಸಂಪತ್ತು, ಸ್ವತ್ತು ಮತ್ತು ನಿಮ್ಮ ಕುಟುಂಬ ನಿಮಗೆ ಅನುಗ್ರಹದಾಯಕವಾಗಲಿ. ನನಗೆ ಸ್ವಲ್ಪ ಹಣ ಸಾಲವಾಗಿ ಕೊಟ್ಟು ಮಾರುಕಟ್ಟೆಯ ದಾರಿ ತೋರಿಸಿರಿ. ಸಹಾಬರು ಬೇಗನೆ ತಮ್ಮ ಸ್ವಂತ ಹೆಜ್ಜೆಗಳಲ್ಲಿ ನಿಂತರಲ್ಲದೆ ಅನ್ಯರಿಗೆ ಆಶ್ರಯ ನೀಡಲು ಸಹ ಶಕ್ತರಾದರು. ಮದೀನದ ಮುಸ್ಲಿಮರು ಅನ್ಸಾರ್‌ಗಳೆಂದೂ ಮಕ್ಕದಿಂದ ವಲಸೆ ಬಂದ ಮುಸ್ಲಿಮರು ಮುಹಾಜಿರ್ ಎಂದೂ ಕರೆಯಲ್ಪಡುತ್ತಿದ್ದರು. ಅವರ ಮಧ್ಯೆ ಇದ್ದ ಭಾವೈಕ್ಯತೆ ಮತ್ತು ಭ್ರಾತೃತ್ವ ಭಾವನೆಯ ಮಾದರಿಯಾದ ಮತ್ತು ಜಾಣ್ಮೆಭರಿತ ಸಂಬಂಧದ ಸಂಕ್ಷಿಪ್ತ ವಿವರಣೆ ಮಾತ್ರ ಇದಾಗಿದೆ.

ಮದೀನದ ನಗರ ರಾಜ್ಯದಲ್ಲಿ ಯಾವೆಲ್ಲ ಕೋಮುಗಳು ಮತ್ತು ಗೋತ್ರಗಳು ವಾಸಿಸುತ್ತಿದ್ದವು ಎಂದು ನೋಡುವ. ಅವರನ್ನು ಒಗ್ಗೂಡಿಸಲು, ಅವರಲ್ಲಿ ಭಾವೈಕ್ಯತೆ ಸೃಷ್ಟಿಸಲು ಮತ್ತು ಒಂದು ಆಡಳಿತೆ ವ್ಯವಸ್ಥೆಯ ಅಧೀನಕ್ಕೆ ತರಲು ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಏನೆಲ್ಲ ಕಾರ್ಯವಿಧಾನಗಳನ್ನು ರೂಪಿಸಿದರು ಎನ್ನುವುದನ್ನು ನೋಡುವ. ಆ ಕಾಲದಲ್ಲಿ ಮದೀನದಲ್ಲಿ ಯಹೂದಿಯರ ಬನೂ ಖೈನ್‌ಖಾಅ್, ಬನೂ ನಝೀರ್ ಮತ್ತು ಬನೂ ಖುರೈಝ ಎಂಬ ಮೂರು ಗೋತ್ರಗಳು ವಾಸಿಸುತ್ತಿದ್ದುವು. ಮದೀನದಲ್ಲಿ ಬಹುದೇವಾರಾಧಕರ ಔಸ್ ಮತ್ತು ಖಝ್ರಜ್ ಎಂಬ ಎರಡು ಗೋತ್ರಗಳು ಸಹ ವಾಸಿಸುತ್ತಿದ್ದುವು.

ಈ ಐದು ಗೋತ್ರಗಳಲ್ಲಿ ಆಡಳಿತೆ ವ್ಯವಸ್ಥೆ ಎಂಬುದೇ ಇರಲಿಲ್ಲ. ವಿಶಿಷ್ಟವಾಗಿ ಯಹೂದಿಯರ ಮೂರು ಗೋತ್ರಗಳು ಸ್ವತಂತ್ರವಾಗಿ ಬೇರೆ ಬೇರೆ ಕೋಟೆಗಳಲ್ಲಿ ವಾಸಿಸುತ್ತಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಮತ್ತು ಅವರ ಅನುಯಾಯಿಗಳಲ್ಲಿ ಬಹುತೇಕ ಜನರು ಮದೀನಕ್ಕೆ ವಲಸೆ ಹೋಗಿ ಅಲ್ಲಿ ಬಲಿಷ್ಠರಾಗುತ್ತಾ ಇರುವ ಕಾರಣದಿಂದ ಮಕ್ಕದ ಖುರೈಶಿಗಳು ಅಸೂಯೆಪಡುತ್ತಿದ್ದರು. ಖುರೈಶಿಗಳು ತಮ್ಮ ಶಕ್ತಿ ಜಮಾಯಿಸಿ ಸಂದರ್ಭ ದೊರೆತಾಗ ಮದೀನವನ್ನು ಆಕ್ರಮಿಸಿ ಮುಸ್ಲಿಮರನ್ನು ಅಲ್ಲಿಂದ ಸಹ ಹೊರಗೋಡಿಸುವುದರಲ್ಲಿ ಜಯಗಳಿಸಲು ಚಿಂತಿಸುತ್ತಿದ್ದರು.

ಮದೀನದ ಆಂತರಿಕ ಮತ್ತು ಬಾಹ್ಯ ಪರಿಸ್ಥಿತಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅನುಯಾಯಿಗಳಾದ ಮುಹಾಜಿರ್‌ಗಳಿಗೂ ಅನ್ಸಾರ್‌ಗಳಿಗೂ ನಿಶ್ಚಿಂತರಾಗಿ ಜೀವಿಸುವಂತೆ ಮಾಡುವವುಗಳಾಗಿರಲಿಲ್ಲ. ಹಝ್ರತ್ ಪೈಗಂಬರರು ಮತ್ತು ಅವರ ಅನುಯಾಯಿಗಳು ಸುಖವಾಗಿ ರಾತ್ರಿ ನಿದ್ರಿಸಲು ಸಹ ಸಾಧ್ಯವಾಗುತ್ತಿರಲಿಲ್ಲ. ಆದುದರಿಂದ ಮದೀನದ ನಗರ ರಾಜ್ಯದೊಳಗೆ ಮುಸ್ಲಿಮರು ಮತ್ತು ಮುಸ್ಲಿಮೇತರ ಗೋತ್ರಗಳ, ವಿಶಿಷ್ಟವಾಗಿ ಯಹೂದಿ ಗೋತ್ರಗಳ ಜೊತೆಗೆ ಶಾಂತಿ ಸೌಹಾರ್ದದ ಪರಿಸರದಲ್ಲಿ ಜೀವಿಸಲು ಹಝ್ರತ್ ಪೈಗಂಬರರ ದೂರದರ್ಶಿ ದೃಷ್ಟಿ ಒಂದು ಲಿಖಿತ ಒಪ್ಪಂದ ಮಾಡಿಕೊಳ್ಳುವ ಆವಶ್ಯಕತೆ ಇದೆ ಎಂದು ಮನವರಿಕೆ ಮಾಡಿತು. ಆ ಒಪ್ಪಂದದಲ್ಲಿ ಅಡಕವಾದ ಶರತ್ತುಗಳಲ್ಲಿ ಕೆಲವು ಹೀಗೆ ಇವೆ:

1. ಮುಸ್ಲಿಮರು ಮತ್ತು ಯಹೂದಿಯರು ಪರಸ್ಪರ ಸಹಾನುಭೂತಿ ಮತ್ತು ಪ್ರಾಮಾಣಿಕತೆಯಿಂದ ಜೀವಿಸುವರು. ಒಂದು ಪಕ್ಷ ಇನ್ನೊಂದು ಪಕ್ಷದ ವಿರುದ್ಧ ಅತಿರೇಕವಾಗಿ ಅಥವಾ ದೌರ್ಜನ್ಯದಿಂದ ವರ್ತಿಸಲಾರದು.

2. ಪ್ರತಿಯೊಂದು ಕೋಮಿಗೆ ಧಾರ್ಮಿಕ ಸ್ವಾತಂತ್ರ್ಯವಿರುವುದು.

3. ಎಲ್ಲ ನಾಗರಿಕರ ಜೀವ ಮತ್ತು ಸಂಪತ್ತು ರಕ್ಷಿಸಲ್ಪಡುವುದು.

4. ಪ್ರತಿಯೊಂದು ರೀತಿಯ ಭಿನ್ನಾಭಿಪ್ರಾಯಗಳಿಗೆ ಮತ್ತು ವಿವಾದಗಳಿಗೆ ಸಂಬಂಧಿಸಿ ಹಝ್ರತ್ ಪೈಗಂಬರರನ್ನು ಸಮೀಪಿಸಬೇಕು. ಅವರು ಮಾಡುವ ತೀರ್ಪು ದೂರು ನೀಡಿದ ವ್ಯಕ್ತಿಯ ಕೋಮಿನ ಧರ್ಮಶಾಸ್ತ್ರ ಗ್ರಂಥಕ್ಕೆ ಅನುಸಾರವಾಗಿರುವುದು.

5. ಯಹೂದಿಯರ ಮತ್ತು ಮುಸ್ಲಿಮರ ವಿರುದ್ಧ ಯಾವುದಾದರೂ ಕೋಮು ಯುದ್ಧ ಮಾಡಿದರೆ ಯಹೂದಿಯರೂ ಮುಸ್ಲಿಮರೂ ಪರಸ್ಪರ ಸಹಾಯ ಮಾಡಲು ಸನ್ನದ್ಧರಾಗುವರು.

6. ಮದೀನವನ್ನು ಯಾರಾದರೂ ಆಕ್ರಮಿಸಿದರೆ ಎಲ್ಲರೂ ಸೇರಿಕೊಂಡು ಆಕ್ರಮಣಗಾರರನ್ನು ಎದುರಿಸುವರು.

7. ಮಕ್ಕದ ಖುರೈಶಿಗಳಿಗೆ ಮತ್ತು ಅವರ ಸಹಾಯಕರಿಗೆ ಮದೀನದ ಯಹೂದಿಯರು ಯಾವುದೇ ರೀತಿಯ ಸಹಾಯವನ್ನಾಗಲೀ ಆಶ್ರಯವನ್ನಾಗಲೀ ನೀಡಲಾರರು.

8. ಯಾವುದೇ ಪಕ್ಷ ಹಝ್‌ರತ್ ಪೈಗಂಬರರ ಅನುಮತಿ ಪಡೆಯದೆ ಯುದ್ಧಕ್ಕೋಸ್ಕರ ಹೊರಡಬಾರದು.

9. ಈ ಒಪ್ಪಂದದ ಪ್ರಕಾರ ಯಾವುದೇ ದೌರ್ಜನ್ಯಗಾರ ಅಥವಾ ಕಲಹಗಾರ ಶಿಕ್ಷೆ ಅಥವಾ ಪ್ರತೀಕಾರದಿಂದ ರಕ್ಷಿಸಲ್ಪಡಲಾರನು.

ಅನಂತರ ಸಂಭವಿಸಿದ ಘಟನೆಗಳಿಂದ ತಿಳಿಯುವುದೇನೆಂದರೆ, ಯಹೂದಿ ಗೋತ್ರಗಳು ಒಪ್ಪಂದದ ಕೆಲವು ಶರತ್ತುಗಳನ್ನು ಉಲ್ಲಂಘಿಸುತ್ತಾ ಇದ್ದರೂ ಔಸ್ ಮತ್ತು ಖಝ್‌ರಜ್ ಗೋತ್ರದ ಕೆಲವು ಬಹುದೇವಾರಾಧಕರು ಮುಸ್ಲಿಮರ ಜೊತೆ ಇರುವುದು ಸುರಕ್ಷಿತವೆಂದು ಭಾವಿಸಿ ಬಾಹ್ಯವಾಗಿ ಮುಸ್ಲಿಮರಾಗಿದ್ದರೂ ಅವರ ಹೃದಯಗಳಲ್ಲಿ ಈಮಾನ್ (ವಿಶ್ವಾಸ) ಇಣುಕಿ ಸಹ ನೋಡಿರಲಿಲ್ಲ ಮತ್ತು ಅವರು ಪ್ರತಿಯೊಂದು ವಿಷಮ ಸಂದರ್ಭಗಳಲ್ಲಿ ತಮ್ಮ ಕಪಟ ವಿಶ್ವಾಸವನ್ನು ಪ್ರಕಟಿಸುತ್ತಿದ್ದರೂ ಈ ಒಪ್ಪಂದದ ಕಾರಣದಿಂದ ಮುಸ್ಲಿಮರ ಮತ್ತು ಯಹೂದಿಯರ ಪರಸ್ಪರ ಸಂಬಂಧ ಬಲಿಷ್ಠವಾಗಿತ್ತು ಮತ್ತು ಮದೀನದಲ್ಲಿ ಒಂದು ರೀತಿಯ ಸುಸ್ಥಿರವಾದ ಸರಕಾರದ ಅಸ್ತಿಭಾರವನ್ನು ಸ್ಥಾಪಿಸಲಾಗಿತ್ತು. ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ಅದರ ಅಧಿಪತಿಯಾಗಿ ನಿಶ್ಚಯಿಸಲ್ಪಟ್ಟಿದ್ದರು.

ಇಂತಹ ಅನಾನುಕೂಲ ಪರಿಸ್ಥಿತಿಯಲ್ಲಿಯೂ ಹಝ್‌ರತ್ ಪೈಗಂಬರರು ಅತ್ಯಂತ ಜಾಣ್ಮೆಯಿಂದ ಮದೀನ ನಗರ ರಾಜ್ಯದ ಆಡಳಿತೆ ವ್ಯವಸ್ಥೆಯನ್ನು ವಹಿಸಿಕೊಂಡು ತಮ್ಮ ಅತ್ಯುನ್ನತ ಸ್ವಭಾವ ಗುಣಗಳು, ಸೌಹಾರ್ದ, ಸಮಾನತೆ, ಪರಿಪೂರ್ಣ ನ್ಯಾಯನಿಷ್ಠೆ ಮೂಲಕ ಮದೀನ ಮುನವ್ವರವನ್ನು ಒಂದು ಮಾದರಿ ರಾಜ್ಯವನ್ನಾಗಿ ಮಾಡಿದುದು ಎಂತಹ ಅನುಕರಣೀಯ ಮಾದರಿಯಾಗಿದೆ ಎಂದರೆ ಪ್ರತಿಯೊಂದು ದೇಶದ ಜನರ ಬಹುಮತದಿಂದ ಆಯ್ಕೆಗೊಂಡ ರಾಜ್ಯಾಧಿಪತಿಗೆ ಅಥವಾ ನಾಮನಿರ್ದೇಶಿತ ಆಡಳಿತೆಗಾರನಿಗೆ ದಾರಿದೀಪದ ಸ್ಥಾನವನ್ನು ಹೊಂದಿದೆ.

ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಜೀವನ ಚರಿತ್ರೆಯ ಆಧಾರದಿಂದ ಹೀಗೆ ವಿವರಿಸಲು ಇಚ್ಛಿಸುತ್ತೇನೆ: ಅವರ ಆಧ್ಯಾತ್ಮಿಕ ಪದವಿಯನ್ನು ದೃಷ್ಟಿಯಲ್ಲಿ ಇರಿಸದೆ ನೋಡುವುದಾದರೆ ಅವರ ಯಾವ ವೈಶಿಷ್ಟ್ಯಗಳ ಕಾರಣ ಅವರು ಜನಪ್ರಿಯ ಮತ್ತು ಯಶಸ್ವೀ ರಾಜ್ಯಾಧಿಪತಿಯಾಗಿ, ಕೆಲವು ವಿದ್ರೋಹಿ ಮತ್ತು ಕಪಟ ವಿಶ್ವಾಸಿಗಳನ್ನು ಹೊರತುಪಡಿಸಿ ಮದೀನದ ಜನರೆಲ್ಲರಿಂದ ಅಂಗೀಕರಿಸಲ್ಪಟ್ಟರು ಮತ್ತು ಅವರಿಗೋಸ್ಕರ ಜೀವಾರ್ಪಣೆ ಮಾಡುವುದು ಅಭಿಮಾನಕರವೆಂದು ಗಣಿಸಿದರು?

ಹಝ್‌ರತ್ ಪೈಗಂಬರರ ಪ್ರಥಮ ವೈಶಿಷ್ಟ್ಯ ನಮ್ಮ ಮುಂದೆ ಬರುವುದು ಅವರು ನೀಡಿದ ಧಾರ್ಮಿಕ ಸ್ವಾತಂತ್ರ್ಯ ಮತ್ತು ಅವರ ಸೌಹಾರ್ದ ವರ್ತನೆಯಾಗಿದೆ. ವಿವಿಧ ಧರ್ಮಗಳ ಮತ್ತು ವಿವಿಧ ವಿಚಾರಗಳ ನಂಬಿಕೆ ಹೊಂದಿರುವ ಜನರು ವಾಸಿಸುವ ಒಂದು ರಾಜ್ಯದಲ್ಲಿ ಪ್ರತಿಯೊಬ್ಬನಿಗೆ ತನ್ನ ನಂಬಿಕೆಯನ್ನೂ ವಿಚಾರವನ್ನೂ ಪ್ರಕಟಿಸಲು ಮತ್ತು ಶಾಂತಿಯಿಂದ ಪ್ರಚಾರ ಮಾಡಲು ಮತ್ತು ನಂಬಿಕೆಗಳನ್ನು ಅನುಷ್ಠಾನಕ್ಕೆ ತರಲು ಸ್ವಾತಂತ್ರ್ಯವಿದ್ದು ಯಾರ ಮನಸ್ಸನ್ನೂ ನೋಯಿಸಲು ಅನುಮತಿ ಇರಬಾರದು. ಹಿಂದೆ ಪ್ರಸ್ತಾಪಿಸಿದ ಹಾಗೆ ಮದೀನದಲ್ಲಿ ಏಕದೇವನಾದ ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕ ಹಝ್‌ರತ್ ಮುಹಮ್ಮದ್ ಪೈಗಂಬರರನ್ನು ನಂಬುವ ಮತ್ತು ಪವಿತ್ರ ಖುರ್‌ಆನಿನ ಶರೀಅತನ್ನು ಅನುಷ್ಠಾನಕ್ಕೆ ತರುತ್ತಿದ್ದ ಮುಸ್ಲಿಮರಿದ್ದರು. ಅವರೊಂದಿಗೆ ಹಝ್‌ರತ್ ಮೂಸಾ ಅಲೈಹಿಸ್ಸಲಾಮರ ಶರೀಅತಾದ ತೌರಾತನ್ನು ಅನುಷ್ಠಾನಕ್ಕೆ ತರುತ್ತಿದ್ದ ಯಹೂದಿಯರಿದ್ದರು, ಹಝ್‌ರತ್ ಈಸಾ ಅಲೈಹಿಸ್ಸಲಾಮರನ್ನು ನಂಬುವ ಕೆಲವು ಕ್ರೈಸ್ತರಿದ್ದರು ಮತ್ತು ಬಹುದೇವಾರಾಧಕ ಕೋಮುಗಳೂ ಇದ್ದುವು. ಹಝ್‌ರತ್ ಪೈಗಂಬರರು ಅವರೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಪ್ರತಿಯೊಬ್ಬರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡಿದ್ದರು. ಅವರ ಮುಂದೆ ದೂರು ನೀಡಿದ ವ್ಯಕ್ತಿಯ ಧಾರ್ಮಿಕ ನಿಯಮಗಳಿಗೆ ಅನುಸಾರವಾಗಿ ಹಝ್‌ರತ್ ಪೈಗಂಬರರು ತೀರ್ಪು ನೀಡುತ್ತಿದ್ದರು.

ಪವಿತ್ರ ಖುರ್‌ಆನ್ ಹೀಗೆ ಸಹ ಹೇಳಿದೆ: "ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹಿಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು." (ಪವಿತ್ರ ಖುರ್‌ಆನ್ 6:109).

ಮಕ್ಕದ ಬಹುದೇವಾರಾಧಕರು ಉಹುದ್ ಯುದ್ಧದ ಸಂದರ್ಭದಲ್ಲಿ ಮುಸ್ಲಿಮ್ ಹುತಾತ್ಮರ ಮೃತ ಶರೀರಗಳನ್ನು ಅಗೌರವ ಗೊಳಿಸಿದ್ದರು ಮತ್ತು ಹಝ್‌ರತ್ ಹಮ್‌ಝ[ರ] ಅವರ ಯಕೃತನ್ನು ಸಹ ಬಾಯಲ್ಲಿ ಹಾಕಿ ಜಗಿದಿದ್ದರು. ಆದರೆ ಹಝ್‌ರತ್ ಪೈಗಂಬರ್[ಸ] ಅದರ ಬಗ್ಗೆ ಪ್ರತೀಕಾರ ಮಾಡಲು ಎಂದೂ ಯೋಚಿಸಿರಲಿಲ್ಲ. ಅವರು ಯಾವಾಗಲೂ ವಿರೋಧಿಗಳೊಂದಿಗೆ ಉತ್ತಮವಾಗಿ ವರ್ತಿಸಿದರು.

ಹಝ್‌ರತ್ ಹಸನ್ ಬಿನ್ ಅಸ್‌ವದ್[ರ] ವಿವರಿಸುತ್ತಾರೆ: ಒಂದು ಯುದ್ಧದ ಸಂದರ್ಭದಲ್ಲಿ ಕೊಲ್ಲಲ್ಪಟ್ಟವರ ಮೃತ ಶರೀರಗಳೊಂದಿಗೆ ಕೆಲವು ಮಕ್ಕಳ ಮೃತಶರೀರಗಳೂ ಇದ್ದುವು. ಹಝ್‌ರತ್ ಪೈಗಂಬರರು ಅದರ ಬಗ್ಗೆ ವಿಚಾರಿಸಿದಾಗ ಒಬ್ಬ ವ್ಯಕ್ತಿ ಹೇಳಿದನು: ಅಲ್ಲಾಹನ ಪೈಗಂಬರರೇ, ಅವು ಬಹುದೇವಾರಾಧಕರ ಮಕ್ಕಳ ಶವಗಳೇ ಆಗಿವೆ. ಆಗ ಹಝ್‌ರತ್ ಪೈಗಂಬರ್[ಸ] ಹೇಳಿದರು: ಇಂದು ನಿಮ್ಮ ಪೈಕಿ ಅತ್ಯುತ್ತಮರಾಗಿ ಗಣಿಸಲ್ಪಡುವವರು ಹಿಂದೆ ಬಹುದೇವಾರಾಧಕರ ಮಕ್ಕಳೇ ಆಗಿದ್ದರು. ನೀವು ನೆನಪಿಟ್ಟುಕೊಳ್ಳಿರಿ, ಶಿಶು ಹುಟ್ಟುವಾಗ ಒಳ್ಳೆಯ ಪ್ರಕೃತಿ ಹೊಂದಿಯೇ ಜನಿಸುತ್ತದೆ. ಅನಂತರ ಅವರ ತಂದೆ ತಾಯಂದಿರು ಅದನ್ನು ಯಹೂದಿಯನ್ನಾಗಿ ಅಥವಾ ಕ್ರೈಸ್ತನನ್ನಾಗಿ ಮಾಡುತ್ತಾರೆ.
(ಮುಸ್‌ನದ್ ಅಹ್ಮದ್ ಬಿನ್ ಹಂಬಲ್ ಸಂಪುಟ 6 ಪುಟ 24. ಬೈರೂತ್ ಮುದ್ರಣ).

ಹಝ್‌ರತ್ ಮುಹಮ್ಮದ್ ಪೈಗಂಬರ್[ಸ] ರಾಜ್ಯಾಧಿಪತಿಯಾಗಿ

ಪ್ರಕಟಿಸಿದ ಎರಡನೆಯ ವೈಶಿಷ್ಟ್ಯ ಪರಿಪೂರ್ಣ ನ್ಯಾಯಪಾಲನೆಯಾಗಿದೆ. ಅದು ಜಾಗತಿಕ ಶಾಂತಿಗೆ ಖಾತರಿ ನೀಡುತ್ತದೆ. ಇಂದು ಲೋಕದಲ್ಲಿ ಕಾಣುತ್ತಿರುವ ಸಂಘರ್ಷ ಮತ್ತು ಅಶಾಂತಿಗೆ ಬಹಳ ದೊಡ್ಡ ಕಾರಣವಾಗಿರುವುದು ನ್ಯಾಯಪಾಲನೆಯ ಕೊರತೆಯಾಗಿದೆ. ಇಸ್ಲಾಮ್ ತನ್ನವರೊಂದಿಗೆ ಮಾತ್ರವಲ್ಲ ಅನ್ಯರೊಂದಿಗೆ ಮತ್ತು ಶತ್ರುಗಳೊಂದಿಗೆ ಕೂಡ ನ್ಯಾಯ ನಿಷ್ಠೆಯಿಂದ ವರ್ತಿಸಬೇಕೆಂಬ ಉಪದೇಶ ನೀಡುತ್ತದೆ. ಇದರ ಬಗ್ಗೆ ಹಝ್ರತ್ ಪೈಗಂಬರರ ಜೀವನ ಚರಿತ್ರೆ ಅಪ್ರತಿಮ ಉದಾಹರಣೆಗಳಿಂದ ಅಲಂಕೃತವಾಗಿದೆ. ಸಮಯದ ಕೊರತೆಯ ಕಾರಣ ಕೆಲವು ಉದಾಹರಣೆಗಳನ್ನು ಮಾತ್ರ ನೀಡುವೆನು.

ಯಾವ ಕೋಮುಗಳಲ್ಲಿ ಸದಾಚಾರ ಅಧಃಪತನ ಹೊಂದಲು ಪ್ರಾರಂಭವಾಗುತ್ತಿದೆಯೋ ಅದರಲ್ಲಿ ಪಕ್ಷಪಾತ ಮತ್ತು ಅನ್ಯಾಯ ಪ್ರಾರಂಭವಾಗುತ್ತದೆ. ಹೀಗೆ ಸಂಭವಿಸುತ್ತದೆ: ದೊಡ್ಡ ಜನರು ನಿಯಮಗಳನ್ನು ಉಲ್ಲಂಘಿಸಿದರೂ ರಕ್ಷಿಸಲ್ಪಡುತ್ತಾರೆ. ಬಡವರು ಮತ್ತು ನಿರ್ಗತಿಕರು ಮಾತ್ರ ಶಿಕ್ಷಿಸಲ್ಪಡುತ್ತಾರೆ. ಆದರೆ ಹಝ್ರತ್ ಪೈಗಂಬರರು ರಹಮತುನ್‌ಲಿಲ್ ಆಲಮೀನ್ – ಸಕಲ ಲೋಕಗಳಿಗೆ ಅನುಗ್ರಹವಾಗಿ ಆಗಮಿಸಿದರು. ಅವರು ಅತ್ಯಂತ ಕಾರುಣ್ಯಮಯರಾಗಿದ್ದರು. ಶರೀಅತ್ ನಿಯಮಗಳನ್ನು ಜಾರಿಗೊಳಿಸುವ ಬಗ್ಗೆ ಅತ್ಯಂತ ಅಭಿಮಾನ ಹೊಂದಿದ್ದರು. ಅವರು ನ್ಯಾಯಪಾಲನೆಯನ್ನು ಎಂದೂ ಕೈ ಬಿಟ್ಟಿರಲಿಲ್ಲ. ಬುಖಾರಿ ಶರೀಫಿನಲ್ಲಿ ಹಝ್ರತ್ ಆಯಿಶರಿಂದ(ರ) ಹೀಗೆ ವರದಿಯಾಗಿದೆ: ಬನೀ ಮಖ್‌ಝೂಮ್ ಗೋತ್ರದ ಫಾತಿಮ ಎಂಬ ಹೆಸರಿನ ಸ್ತ್ರೀ ಕದ್ದಿದ್ದಳು. ಈ ಸ್ತ್ರೀಯ ಅಪರಾಧಕ್ಕೆ ಸಂಬಂಧಿಸಿ ಮೃದುವಾಗಿ ವರ್ತಿಸಲು ಶಿಫಾರಸು ಮಾಡಲು ಆ ಗೋತ್ರದ ಜನರು ಇಚ್ಛಿಸಿದರು. ಅವರು ಹಝ್ರತ್ ಪೈಗಂಬರರ ಪ್ರೀತಿಗೆ ಬಹಳ ಪಾತ್ರರಾಗಿದ್ದ ಉಸಾಮ ಬಿನ್ ಝೈದರನ್ನು ಹಝ್ರತ್ ಪೈಗಂಬರರ ಬಳಿಗೆ ಕಳುಹಿಸಿ ಆ ಅಪರಾಧಿಗೆ ಸಂಬಂಧಿಸಿ ಮೃದುವಾಗಿ ವರ್ತಿಸಲು ಅಪೇಕ್ಷೆ ಸಲ್ಲಿಸುವಂತೆ ಮಾಡಿದರು. ಆಗ ಹಝ್ರತ್ ಪೈಗಂಬರರು ಅಪೇಕ್ಷೆಯನ್ನು ಆಲಿಸಿದಾಗ ಸಿಟ್ಟಿನಿಂದ ಅವರ ಮುಖ ಕೆಂಪಗೆ ಆಯಿತು. ಅವರು ಹೇಳಿದರು: "ಬನೀ ಇಸ್ರಾಈಲ್ ಜನರ ಸ್ವಭಾವ ಹೇಗಿತ್ತೆಂದರೆ ಅವರ ಪೈಕಿ ಗಣ್ಯರಾದ ಯಾರಾದರೂ ಕದ್ದರೆ ಅವನನ್ನು ಶಿಕ್ಷಿಸದೆ ಬಿಟ್ಟುಬಿಡುತ್ತಿದ್ದರು. ಆದರೆ ಬಡವನು ಕದ್ದರೆ ಅವನ ಕೈ ಕಡಿದು ಹಾಕುತ್ತಿದ್ದರು. ಆದರೆ ನನ್ನ ಸ್ಥಿತಿ ಹೇಗಿದೆ ಎಂದರೆ ನನ್ನ ಜೀವ ಯಾರ ಕೈಯ್ಯಲ್ಲಿದೆಯೋ ಅವನ ನಾಮದಲ್ಲಿ ಆಣೆ ಹಾಕಿ ಹೇಳುತ್ತೇನೆ. ಮುಹಮ್ಮದನ ಪುತ್ರಿ ಫಾತಿಮ ಕದ್ದರೂ ನಾನು ಅವಳ ಕೈ ಕಡಿದು ಹಾಕುವೆ."

**(ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್.)**

ಎರಡನೆಯ ಸಂಭವ ಹೀಗಿದೆ: ಬದರ್ ಯುದ್ಧದಲ್ಲಿ ಸೆರೆ ಹಿಡಿಯಲಾದ ಮಕ್ಕದ ಬಹುದೇವಾರಾಧಕರಲ್ಲಿ ಹಝ್ರತ್ ಪೈಗಂಬರರ ಚಿಕ್ಕಪ್ಪ ಅಬ್ಬಾಸ್(ರ) ಸಹ ಇದ್ದರು. ಸೆರೆಯಾಳುಗಳ ಮೇಲ್ವಿಚಾರಣೆ ಹಝ್ರತ್ ಉಮರ್‌ರಿಗೆ(ರ) ವಹಿಸಿ ಕೊಡಲಾಗಿತ್ತು. ಅವರು ಹಝ್ರತ್ ಅಬ್ಬಾಸ್(ರ) ಸಹಿತ ಎಲ್ಲ ಕೈದಿಗಳ ಹಗ್ಗದ ಕಟ್ಟುಗಳನ್ನು ಚೆನ್ನಾಗಿ ಬಿಗಿದು ಕಟ್ಟಿದರು. ಕೈದಿಗಳನ್ನು ಮಸ್‌ಜಿದ್ ನಬವಿಯ ಬಳಿಯಲ್ಲಿ ಇರಿಸಲಾಗಿತ್ತು. ಹಝ್ರತ್ ಅಬ್ಬಾಸ್ ನೋವಿನಿಂದ ನರಳುತ್ತಿದ್ದರು. ಹಝ್ರತ್ ಪೈಗಂಬರರಿಗೆ ಈ ನರಳಾಟ ಕೇಳಿಸಿದಾಗ ಅವರ ಮನನೊಂದು ಅವರಿಗೆ ನಿದ್ರೆ ಬರಲಿಲ್ಲ. ಅನ್‌ಸಾರ್‌ಗಳಿಗೆ ಅದರ ಬಗ್ಗೆ ತಿಳಿಯಿತು. ಆಗ ಅವರು ಹಝ್ರತ್ ಅಬ್ಬಾಸರ ಹಗ್ಗದ ಕಟ್ಟುಗಳನ್ನು ಸಡಿಲಗೊಳಿಸಿದರು. ಆಗ ಅವರ ನರಳಾಟ ನಿಂತಿತು. ಆಗ ಹಝ್ರತ್ ಪೈಗಂಬರ್ ವಿಚಾರಿಸಿದರು – ಅಬ್ಬಾಸರ ನರಳಾಟ ಏಕೆ ಕೇಳಿಸುವುದಿಲ್ಲ? ಸಹಾಬರು (ಶಿಷ್ಯರು) ಹೇಳಿದರು: ಅಲ್ಲಾಹನ ಪೈಗಂಬರರೇ, ನಾವು ತಮ್ಮ ಕಷ್ಟವನ್ನು ಕಂಡು ಅವರ ಹಗ್ಗದ ಕಟ್ಟುಗಳನ್ನು ಸಡಿಲಗೊಳಿಸಿದೆವು. ಹಝ್ರತ್ ಪೈಗಂಬರರು ಹೇಳಿದರು: ನೀವು ಮಾಡಿದುದು ಅನ್ಯಾಯವಾಗಿದೆ. ನೀವು ಎಲ್ಲ ಕೈದಿಗಳ ಹಗ್ಗಗಳನ್ನು ಸಡಿಲಗೊಳಿಸಿರಿ ಅಥವಾ ಅಬ್ಬಾಸರ ಹಗ್ಗದ ಕಟ್ಟುಗಳನ್ನು ಬಿಗಿಗೊಳಿಸಿರಿ. ಆಗ ಸಹಾಬರು ಎಲ್ಲ ಕೈದಿಗಳ ಕಟ್ಟುಗಳನ್ನು ಸಡಿಲಗೊಳಿಸಿದರು.

ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತಮ್ಮ ಅತ್ಯುತ್ತಮ ಮಾದರಿ ವರ್ತನೆಯಿಂದ ಈ ಮಹತ್ವಪೂರ್ಣ ಅಂಶವನ್ನು ಮನವರಿಕೆ ಮಾಡಿಕೊಟ್ಟರು, ಒಬ್ಬ ಜಯಶಾಲಿ ನಾಯಕ ಮತ್ತು ಒಬ್ಬ ಜಯಶಾಲಿ ಅಧಿಪತಿಗೆ ಆವಶ್ಯಕವಾದುದೇನೆಂದರೆ ಪ್ರತಿಯೊಂದು ಸೂಕ್ಷ್ಮ ಸಂದರ್ಭದಲ್ಲಿ ತನ್ನ ಸಮುದಾಯಕ್ಕೆ ಮಾರ್ಗದರ್ಶನ ನೀಡಲು ಪ್ರತಿ ಸಮಯದಲ್ಲಿ ಸಿದ್ಧನಾಗಿರಬೇಕು. ಸಾಧ್ಯವಿರುವಷ್ಟು ಮಟ್ಟಿಗೆ ಆವಶ್ಯಕ ಸ್ಥಳದಲ್ಲಿ ತಲಪಿ ಮಾರ್ಗದರ್ಶನ ನೀಡಿ ಸಮುದಾಯಕ್ಕೆ ಧೈರ್ಯ ನೀಡಬೇಕು. ಈ ವಿಷಯಕ್ಕೆ ಸಂಬಂಧಿಸಿ ಕೇವಲ ಒಂದು ಘಟನೆಯನ್ನು ವಿವರಿಸುತ್ತೇನೆ.

ಕಂದಕ ಯುದ್ಧದ ಸಂದರ್ಭದಲ್ಲಿ ಭದ್ರತೆ ಮತ್ತು ಯುದ್ಧ ವ್ಯೂಹದ ದೃಷ್ಟಿಯಿಂದ ಮದೀನದ ಸುತ್ತು ಮುತ್ತು ಕಂದಕ ತೋಡಲಾಗುತ್ತಿತ್ತು. ಸಹಾಬರ ಸ್ಥಿತಿ ಹೇಗಿತ್ತೆಂದರೆ ಹಸಿವಿನ ಕಷ್ಟವನ್ನು ತಗ್ಗಿಸಲು ಹೊಟ್ಟೆಯ ಮೇಲೆ ಕಲ್ಲು ಕಟ್ಟುತ್ತಿದ್ದರು. ಕಂದಕವನ್ನು ಅಗೆಯುವಾಗ ಒಂದು ಬಂಡೆಕಲ್ಲು ಒಡೆಯಲಾಗುತ್ತಿರಲಿಲ್ಲ. ಸಹಾಬರು ಹಝ್ರತ್ ಪೈಗಂಬರರ ಬಳಿಗೆ ಹೋಗಿ ಆ ವಿಷಯ ತಿಳಿಸಿದರು. ಹಝ್ರತ್ ಪೈಗಂಬರ್ ತಕ್ಷಣ ಅಲ್ಲಿಗೆ ತಲಪಿದರು. ಅವರು ಸಹ ಹಸಿವನ್ನು ತಗ್ಗಿಸಲು ಹೊಟ್ಟೆಯ ಮೇಲೆ ಎರಡು ಕಲ್ಲುಗಳನ್ನು ಕಟ್ಟಿದ್ದರು. ಆ ಸ್ಥಿತಿಯಲ್ಲಿಯೂ ಹಝ್ರತ್ ಪೈಗಂಬರ್ ಗುದ್ದಲಿಯನ್ನು ಎತ್ತಿ ಆ ಬಂಡೆಗಲ್ಲಿನ ಮೇಲೆ ಮೂರು ಸಾರಿ ಹೊಡೆದು ಅದನ್ನು ಪುಡಿ ಪುಡಿ ಮಾಡಿದರು. ಅಲ್ಲಾಹನು ಆ ಬಲಹೀನತೆಯ ಸಂದರ್ಭದಲ್ಲಿ ಹಝ್ರತ್ ಪೈಗಂಬರ್ ಪ್ರತಿಯೊಂದು ಹೊಡೆತ ಹೊಡೆದಾಗ ಬೃಹತ್ ಸಾಮ್ರಾಜ್ಯಗಳ ಮೇಲೆ ಮುಸ್ಲಿಮರು ಜಯಗಳಿಸುವ ಅದ್ಭುತ ದೃಶ್ಯಗಳನ್ನು ಹಝ್ರತ್ ಪೈಗಂಬರರಿಗೆ ಅಲ್ಲಾಹನು ತೋರಿಸಿದನು. ಪ್ರತಿ ಹೊಡೆತ ಹೊಡೆದಾಗ ಹಝ್ರತ್ ಪೈಗಂಬರರು ಅಲ್ಲಾಹು ಅಕ್ಬರ್ ಎಂದು ಘೋಷಿಸಿ ಶಾಮ್, ಇರಾನ್, ಸನಾ ಮತ್ತು ಯಮನ್‌ಗಳ ಅರಮನೆಗಳ ಕೀಲಿಗೈಗಳು ತನಗೆ ನೀಡಲ್ಪಟ್ಟವು ಎಂದು ಸಹಾಬರೊಂದಿಗೆ ಹೇಳಿದರು.

ಹಝ್ರತ್ ಪೈಗಂಬರರ ಜೀವಿತ ಕಾಲದಲ್ಲಿಯೇ ಇಸ್ಲಾಮ್ ಅರಬ್ ದೇಶದಲ್ಲಿ ಜಯಗಳಿಸಿತ್ತು. ಅವರು ನಿಧನ ಹೊಂದಿ ಒಂಬತ್ತು

ವರ್ಷ ದಾಟುವುದರೊಳಗೆ ಎಲ್ಲ ಅರಬ್ ದೇಶಗಳಲ್ಲಿ ಮುಸ್ಲಿಮರ ಆಡಳಿತೆ ಸ್ಥಾಪಿತವಾಯಿತು.

ಹಝ್ರತ್ ಪೈಗಂಬರರ ಇನ್ನೊಂದು ಮಹತ್ವಪೂರ್ಣ ವೈಶಿಷ್ಟ್ಯವೇನೆಂದರೆ ಅವರು ಮದೀನ ನಗರ ರಾಜ್ಯದ ಅಧಿಪತಿಯಾಗುವ ಮೊದಲಿನ ಅವರ ಜೀವಿತ ಮತ್ತು ಅನಂತರದ ಜೀವಿತದಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲ. ಮಕ್ಕದಲ್ಲಿ ಅವರು ಜೀವಿಸಿದ ಕಾಲದಲ್ಲಿದ್ದ ಸರಳ ಜೀವನ ಅವರು ಮದೀನದ ಅಧಿಪತಿಯಾದಾಗಲೂ ಮುಂದುವರಿಯಿತು.

ಆ ಕಾಲದಲ್ಲಿ ಇರಾನಿನ ಸಾಮ್ರಾಜ್ಯದ ಸಾಮ್ರಾಟರ ವೈಭವ ಭರಿತ ಆಡಳಿತೆ ಏಷ್ಯಾವನ್ನು ಆವರಿಸಿತ್ತು. ಇನ್ನೊಂದು ಕಡೆ ರೋಮಿನ ಸರಕಾರ ತನ್ನ ಪಾಶ್ಚಿಮಾತ್ಯ ವೈಭವ ಮತ್ತು ಸುಖ ಭೋಗದ ಉದಾಹರಣೆ ಪ್ರದರ್ಶಿಸುತ್ತಿತ್ತು. ಆ ಎರಡು ಸರಕಾರಗಳ ಮಧ್ಯೆ ಅರಬ್ ದೇಶದ ಗೋತ್ರಗಳು ಗುಲಾಮರ ಸೇವೆ ಪಡೆಯುತ್ತಾ ತಮ್ಮ ಸಾಮರ್ಥ್ಯಕ್ಕೆ ಮಿಗಿಲಾಗಿ ತಮ್ಮ ಐಶ್ವರ್ಯ ಪ್ರದರ್ಶಿಸಲು ಪ್ರಯತ್ನಿಸುತ್ತಾ ಇದ್ದುವು.

ಇಂತಹ ಪರಿಸರದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಅತ್ಯಂತ ಸರಳವಾದ ಜೀವಿತದಲ್ಲಿ ಯಾವುದೇ ಬದಲಾವಣೆ ಕಂಡು ಬರಲಿಲ್ಲ. ಅವರು ಮದೀನದ ಜನರ ಸುಖ ಸೌಕರ್ಯಕ್ಕೋಸ್ಕರ ಮತ್ತು ಅವರ ಸ್ಥಿತಿಯನ್ನು ಉತ್ತಮಪಡಿಸಲು ಚಿಂತಿಸುತ್ತಾ ತಮಗೆ ಮತ್ತು ತಮ್ಮ ಕುಟುಂಬದವರಿಗೆ ಹೆಚ್ಚಿನ ಅನುಕೂಲತೆಗಳೇನನ್ನೂ ಒದಗಿಸಲಿಲ್ಲ. ಅವರು ಮನೆಗೆಲಸಕ್ಕೋಸ್ಕರ ಕೆಲಸಗಾರರನ್ನು ನೇಮಿಸಲಿಲ್ಲ. ಮನೆಯವರು ಸ್ವತಃ ಎಲ್ಲ ಕೆಲಸ ಮಾಡುತ್ತಿದ್ದರು. ಹಝ್ರತ್ ಆಯಿಶರೊಂದಿಗೆ(ರ) ಕೇಳಲಾಯಿತು: ಹಝ್ರತ್ ಪೈಗಂಬರರು ಮನೆಯಲ್ಲಿ ಏನು ಮಾಡುತ್ತಿದ್ದರು ಎಂದು. ಹಝ್ರತ್ ಆಯಿಶ(ರ) ಹೇಳಿದರು: "ಮನೆಯಲ್ಲಿ ಮನೆಯವರ ಕೆಲಸದಲ್ಲಿ ಜೊತೆ ಸೇರಿ ದುಡಿಯುತ್ತಿದ್ದರು. ನಮಾಝ್‌ಗೆ ಸಮಯವಾದಾಗ ಮನೆಯಿಂದ ಹೊರಗೆ ಹೋಗುತ್ತಿದ್ದರು." (ಬುಖಾರಿ ಕಿತಾಬುಸ್ಸಲಾತ್).

ಇದು ಎಂತಹ ಅಪ್ರತಿಮ ಉದಾಹರಣೆಯಾಗಿದೆ! ದೊರೆಯಾಗಿದ್ದಾಗ ತನ್ನ ಮನೆಗೆಲಸಕ್ಕೆ ಒಬ್ಬ ಕೆಲಸಗಾರನನ್ನೂ ಇರಿಸಲಿಲ್ಲ ಎಂಬ ಈ ಉದಾಹರಣೆ ಬೇರೆ ಯಾರ ಬಗ್ಗೆಯಾದರೂ ತೋರಿಸಲು ಸಾಧ್ಯವೇ? ಅವರು ಅರಬ್ ದೇಶದ ದೊರೆಯಾಗಿದ್ದಾಗ ಲಕ್ಷಾಂತರ ರೂಪಾಯಿಗಳನ್ನೂ ಹಿಂಡುಗಟ್ಟಲೆ ಜಾನುವಾರುಗಳನ್ನೂ ಬಡ ಜನರಿಗೆ ಹಂಚುತ್ತಿದ್ದರು. ಒಮ್ಮೆ ಅವರ ಬಳಿಗೆ ಎಪ್ಪತ್ತು ಸಾವಿರ ದಿರ್‌ಹಮ್ ತರಲಾಯಿತು. ಇನ್ನೊಂದು ವರದಿ ಪ್ರಕಾರ ತೊಂಬತ್ತು ಸಾವಿರ ದಿರ್‌ಹಮ್ ತರಲಾಯಿತು. ಅವರು ಈ ಹಣವನ್ನು ಹಂಚಿದ ನಂತರವೇ ನೆಮ್ಮದಿ ಪಡೆದರು. (ಅಲ್ ವಫಾ ಬಿ ಅಹ್‌ವಾಲಿಲ್ ಮುಸ್ತಫಾ ಇಬ್ನುಲ್ ಜೂಝಿ ಪುಟ 447 ಬೈರೂತ್).

ಒಮ್ಮೆ ಹಝ್ರತ್ ಪೈಗಂಬರರ ಬಳಿಗೆ ಒಬ್ಬ ವ್ಯಕ್ತಿ ಆಗಮಿಸಿದನು. ಆಡುಗಳಿಂದ ತುಂಬಿದ ಒಂದು ಕಣಿವೆ ಪ್ರದೇಶವನ್ನು ಅವನಿಗೆ ಹಝ್ರತ್ ಪೈಗಂಬರ್ ನೀಡಿದರು. ಆ ನವ ಮುಸ್ಲಿಮ್ ಕಣಿವೆ ಪ್ರದೇಶದ ಮಧ್ಯದಲ್ಲಿರುವ ಜಮೀನನ್ನು ಆವಶ್ಯಪಟ್ಟನು. ಹಝ್ರತ್ ಪೈಗಂಬರರು ಹುಲ್ಲುಗಾವಲು ಪ್ರದೇಶವನ್ನೂ ಆಡುಗಳ ಹಿಂಡನ್ನೂ ಅವನಿಗೆ ಕೊಟ್ಟರು. ಅವನು ತನ್ನ ಕೋಮಿನವರ ಬಳಿಗೆ ಹೋಗಿ ಹೇಳಿದನು: ನೀವೆಲ್ಲರೂ ಮುಸ್ಲಿಮರಾಗಿರಿ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಎಷ್ಟು ಕೊಡುತ್ತಾರೆಂದರೆ ಬಡತನದ ಬಗ್ಗೆ ಎಂದೂ ಹೆದರಬೇಕಾಗಿಲ್ಲ. (ಮಜ್‌ಮ ಉ ಝ್ಝಾಯಿದ್ ಹೈಸಮಿ ಸಂಪುಟ 9 ಪುಟ 13 ಬೈರೂತ್).

ಅವರು ಸಾರ್ವಜನಿಕ ಖಜಾನೆಯಿಂದ ತಮ್ಮನ್ನು ಮತ್ತು ತಮ್ಮ ಕುಟುಂಬದವರನ್ನು ಲಾಭ ಪಡೆಯುವುದರಿಂದ ಯಾವಾಗಲೂ ತಡೆದಿದ್ದರು. ಒಮ್ಮೆ ಅವರ ಪುತ್ರಿಯ ಪುತ್ರ ಹಝ್ರತ್ ಇಮಾಮ್ ಹುಸೈನ್ ಬಾಲಕನಾಗಿದ್ದಾಗ ಖರ್ಜೂರದ ರಾಶಿಯಿಂದ ಒಂದೆರಡು ಖರ್ಜೂರ ತೆಗೆದು ಬಾಯಿಯಲ್ಲಿ ಹಾಕಿದಾಗ ತಕ್ಷಣ ಹಝ್ರತ್ ಪೈಗಂಬರರು ತನ್ನ ಕೈಬೆರಳನ್ನು ತನ್ನ ಮೊಮ್ಮಗನ ಬಾಯಿಗೆ ಹಾಕಿ ಆ ಖರ್ಜೂರ ಹೊರಗೆ ಹಾಕಿ ಹೇಳಿದರು: ಇದು ಸದಖ ನೀಡಲು ತರಲಾದ ಖರ್ಜೂರವಾಗಿದೆ. ಸದಖದ ವಸ್ತು ನಮಗೆ ಉಪಯೋಗಿಸುವುದು ಧರ್ಮಬದ್ಧವಲ್ಲ.

ಹಝ್ರತ್ ಪೈಗಂಬರರ ಮನೆಯ ಸ್ಥಿತಿಯ ಬಗ್ಗೆ ಹಝ್ರತ್ ಆಯಿಶ(ರ) ತನ್ನ ಸಹೋದರಿ ಪುತ್ರ ಹಝ್ರತ್ ಉರ್‌ವರೊಂದಿಗೆ ಹೇಳಿದರು: ಹೇ ನನ್ನ ಸಹೋದರಿ ಪುತ್ರ, ನಾವು ಒಂದು ಹಿಲಾಲ್ (ಪ್ರಥಮ ಚಂದ್ರ) ನೋಡಿದ ನಂತರ ಇನ್ನೊಂದು ಹಿಲಾಲ್ ನೋಡುತ್ತಿದ್ದೆವು. ಮೂರು ಮೂರು ಹಿಲಾಲ್ ನೋಡುತ್ತಿದ್ದೆವು. ಎಂದರೆ ಎರಡು ತಿಂಗಳು ದಾಟಿ ಹೋಗುತ್ತಿದ್ದುವು. ಹಝ್ರತ್ ಪೈಗಂಬರರ ಮನೆಯಲ್ಲಿ ಒಲೆ ಹೊತ್ತಿಸುತ್ತಿರಲಿಲ್ಲ. ಹಝ್ರತ್ ಉರ್‌ವ ವರದಿ ಮಾಡುತ್ತಾರೆ: ನಾನು ಕೇಳಿದೆ: ಹೇ ಚಿಕ್ಕಮ್ಮ ನೀವು ತಿನ್ನುತ್ತಿದ್ದುದಾದರೂ ಏನು? ಹಝ್ರತ್ ಆಯಿಶ(ರ) ಹೇಳಿದರು: ಅಸ್‌ವದಾನಿ ಎಂದರೆ ಖರ್ಜೂರ ಮತ್ತು ನೀರು ಭಕ್ಷಿಸಿ ಜೀವಿಸುತ್ತಿದ್ದೆವು. ಆದರೆ ಮನೆಯ ಸುತ್ತು ಮುತ್ತು ಇದ್ದ ಅನ್‌ಸಾರ್‌ಗಳ ಬಳಿ ಹಾಲು ಕೊಡುವ ಆಡುಗಳಿದ್ದುವು. ಅವರು ಹಾಲನ್ನು ಉಚಿತವಾಗಿ ಹಝ್ರತ್ ಪೈಗಂಬರರಿಗೆ ಕೊಡುತ್ತಿದ್ದರು. ಆ ಹಾಲನ್ನು ಹಝ್ರತ್ ಪೈಗಂಬರ್ ನಮಗೆ ಕೊಡುತ್ತಿದ್ದರು.

ಹಝ್ರತ್ ಮುಹಮ್ಮದ್ ಪೈಗಂಬರರ ಪ್ರಿಯ ಪುತ್ರಿ ಹಝ್ರತ್ ಫಾತಿಮರವರ(ರ) ಸ್ಥಿತಿ ಹೇಗಿತ್ತೆಂದರೆ ಮನೆಯಲ್ಲಿ ಬೀಸುಗಲ್ಲು ಚಲಾಯಿಸುತ್ತಾ ಅವರ ಕೈಗಳಲ್ಲಿ ಬೊಕ್ಕೆಗಳೇಳುತ್ತಿದ್ದುವು. ಹಝ್ರತ್ ಪೈಗಂಬರರ ಬಳಿಗೆ ಕೆಲವು ಗುಲಾಮರನ್ನು ತರಲಾಗಿದೆ ಎಂದು ಅರಿತಾಗ ಅವರು ಹಝ್ರತ್ ಪೈಗಂಬರರೊಂದಿಗೆ ತನ್ನ ಕೆಲಸ ಮಾಡಲು ಒಬ್ಬ ಗುಲಾಮನನ್ನು ತನಗೆ ನೀಡಲು ಅಪೇಕ್ಷಿಸಿದರು. ಹಝ್ರತ್ ಪೈಗಂಬರರು ರಾತ್ರಿ ಹೊತ್ತು ತನ್ನ ಮಗಳ ಮತ್ತು ಅಳಿಯನ ಬಳಿಗೆ ಹೋಗಿ ಹೇಳಿದರು: ನಾನು ನಿಮಗೆ ನೀವು ಬೇಡಿದುದಕ್ಕಿಂತ ಉತ್ತಮವಾದುದರ ಬಗ್ಗೆ ತಿಳಿಸಲೇ? ನೀವು ನಿಮ್ಮ ಹಾಸಿಗೆಯಲ್ಲಿ ಮಲಗಿ 33 ಸಾರಿ ಸುಬ್‌ಹಾನಲ್ಲಾಹ್, 33 ಸಾರಿ ಅಲ್‌ಹಮ್‌ದುಲಿಲ್ಲಾಹ್ ಮತ್ತು 34 ಸಾರಿ ಅಲ್ಲಾಹು ಅಕ್‌ಬರ್ ಹೇಳಿರಿ. ಅದು ನಿಮಗೆ ಸೇವಕನಿಗಿಂತ ಉತ್ತಮವಾಗಿದೆ.

ಒಂದು ವಿಷಯ ಪ್ರಸ್ತಾಪಿಸಲು ಅರ್ಹವಾಗಿದೆ, ಹಝ್ರತ್ ಪೈಗಂಬರರ ಬಳಿಗೆ ಸಾರ್ವಜನಿಕ ಖಜಾನೆಗೆ ಸೇರಿಸಬೇಕಾದ ಹಣ

ಬಂದಾಗ ಅವರು ಅದರಿಂದ ತನ್ನ ವೈಯಕ್ತಿಕ ಆವಶ್ಯಕತೆಗೆ ಬಳಸುವುದು ಪಾಪಕೃತ್ಯ ಎಂದು ಭಾವಿಸುತ್ತಿದ್ದರು. ಆದರೆ ಅವರ ಬಳಿಗೆ ಅವರ ಸ್ವಂತ ಉಪಯೋಗಕ್ಕೆ ಬಳಸಬಹುದಾದ ಹಣ ಸಹ ಬರುತ್ತಿತ್ತು. ಸಹಾಬರು ತಮ್ಮ ನಿಷ್ಠೆ ಮತ್ತು ಪ್ರೀತಿಯ ಕಾರಣದಿಂದ ಬಹಳ ಪಾರಿತೋಷಿಕ ನೀಡುತ್ತಿದ್ದರು. ಆ ಹಣವನ್ನು ಹಝ್‌ರತ್ ಪೈಗಂಬರರು ತಮ್ಮ ಸ್ವಂತ ಆವಶ್ಯಕತೆಗಳಿಗೆ ಮತ್ತು ಕುಟುಂಬದ ಆವಶ್ಯಕತೆಗಳಿಗೆ ಬಳಸಬೇಕೆಂದು ವಿನಂತಿಸುತ್ತಿದ್ದರು. ಹಝ್‌ರತ್ ಪೈಗಂಬರರು ತಮ್ಮ ಕುಟುಂಬದವರ ಮುಂದಿನ ಜೀವಿತಕ್ಕೋಸ್ಕರ ಸಾಕಷ್ಟು ಹಣವನ್ನು ಜಮಾಯಿಸಿ ಇಡುತ್ತಿದ್ದರೂ ಅದು ಆಕ್ಷೇಪಾರ್ಹವಾಗಿರಲಿಲ್ಲ. ಆದರೆ ಹಝ್‌ರತ್ ಪೈಗಂಬರರು ನಿಧನ ಹೊಂದಿದಾಗ ಅವರ ಮನೆಯ ಸ್ಥಿತಿ ಹೇಗಿತ್ತೆಂದು ಅಮರ್ ಬಿನ್ ಹಾರಿಸ್‌ರವರ ಈ ವರದಿಯಿಂದ ಸ್ಪಷ್ಟವಾಗುತ್ತದೆ. ಅವರು ಹೇಳುತ್ತಾರೆ: ಹಝ್‌ರತ್ ಪೈಗಂಬರರು ನಿಧನ ಹೊಂದುವಾಗ ಏನನ್ನೂ ಬಿಟ್ಟು ಹೋಗಲಿಲ್ಲ – ದಿರ್‌ಹಮ್ ಆಗಲಿ, ದೀನಾರ್ ಆಗಲಿ, ಗುಲಾಮನನ್ನಾಗಲಿ, ಸ್ತ್ರೀ ಗುಲಾಮಳನ್ನಾಗಲಿ ಬಿಟ್ಟುಹೋಗಲಿಲ್ಲ – ಒಂದು ಬಿಳಿ ಹೇಸರಗತ್ತೆ, ಅವರ ಆಯುಧಗಳು ಮತ್ತು ಅವರು ಸದಖವಾಗಿ ನೀಡಿದ ಒಂದು ತುಂಡು ಭೂಮಿಯ ಹೊರತು.

ಹಝ್‌ರತ್ ಸಹ್‌ಲ್ ಬಿನ್ ಸಅದ್[ರ] ಹೇಳುತ್ತಾರೆ: ಹಝ್‌ರತ್ ಪೈಗಂಬರರು ಏಳು ದೀನಾರ್‌ಗಳನ್ನು ಹಝ್‌ರತ್ ಆಯಿಶ[ರ] ಬಳಿ ಇರಿಸಿದ್ದರು. ಅವರು ತನ್ನ ಕೊನೆಯ ದಿನಗಳಲ್ಲಿ ಹೇಳಿದರು: ಆಯಿಶ, ನಿನ್ನ ಬಳಿ ಇರುವ ಚಿನ್ನದ ನಾಣ್ಯ ಏನಾಯಿತು? ಅವರು ಹೇಳಿದರು: ಅವು ನನ್ನ ಬಳಿ ಇವೆ. ಹಝ್‌ರತ್ ಪೈಗಂಬರ್ ಹೇಳಿದರು: ಅವುಗಳನ್ನು ಸದಖವಾಗಿ ಕೊಡು. ಅನಂತರ ಅವರು ಪ್ರಜ್ಞಾಶೂನ್ಯರಾದರು. ಹಝ್‌ರತ್ ಆಯಿಶ ಅವರೊಂದಿಗೆ ಇದ್ದರು. ಪ್ರಜ್ಞೆ ಮರಳಿ ಬಂದಾಗ ಹಝ್‌ರತ್ ಪೈಗಂಬರ್ ಕೇಳಿದರು: ಆ ಚಿನ್ನದ ನಾಣ್ಯ ಸದಖವಾಗಿ ನೀಡಿದೆಯೋ? ಹಝ್‌ರತ್ ಆಯಿಶ ಹೇಳಿದರು: ಇನ್ನೂ ಇಲ್ಲ. ಹಝ್‌ರತ್ ಪೈಗಂಬರ್ ಆ ದೀನಾರ್‌ಗಳನ್ನು ತರಿಸಿ ಎಣಿಸಿ ಹೇಳಿದರು: ಲೋಕದಿಂದ ಹೋಗಿ ಅಲ್ಲಾಹನನ್ನು ಭೇಟಿಯಾಗುವಾಗ ಈ ದೀನಾರ್ ಮುಹಮ್ಮದ್ ಬಳಿ ಇದ್ದಲ್ಲಿ ಅಲ್ಲಾಹನ ಬಗ್ಗೆ ಭರವಸೆ ಇಟ್ಟಂತಾಗುವುದು ಹೇಗೆ? ಅನಂತರ ಆ ದೀನಾರ್ ಸದಖವಾಗಿ ನೀಡಿದರು. ಅದೇ ದಿನ ಅವರು ನಿಧನ ಹೊಂದಿದರು. (ಮಜ್‌ಮುಝ್ಝವಾಯಿದ್ ಹೈಸಮಿ ಸಂಪುಟ 3 ಪುಟ 124 ಬೈರೂತ್ ಮುದ್ರಣ).

**(ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವಸಲ್ಲಿಮ್)**

ಹಝ್‌ರತ್ ಪೈಗಂಬರರ ಸತ್ಯಸಂಧನಾದ ಪ್ರೇಮಿ ಹಝ್‌ರತ್ ಗುಲಾಂ ಅಹ್ಮದ್, ಮಸೀಹ್ ಮೌಊದ್, ಮಹ್‌ದೀ ಮಅ್‌ಹೂದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಅಲ್ಲಾಹನು ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ[ಸ] ಅಸಂಖ್ಯಾತ ಖಜಾನೆಗಳ ಬಾಗಿಲುಗಳನ್ನು ತೆರೆದುಕೊಟ್ಟನು. ಆದರೆ ಹಝ್‌ರತ್ ಪೈಗಂಬರರು ಆ ಖಜಾನೆಗಳ ಸಂಪತ್ತನ್ನೆಲ್ಲ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರು. ತನ್ನ ಸ್ವಾರ್ಥ ಉದ್ದೇಶಕ್ಕೋಸ್ಕರ ಚಿಕ್ಕಾಸನ್ನೂ ಬಳಸಲಿಲ್ಲ. ಯಾವುದೇ ಕಟ್ಟಡ ನಿರ್ಮಿಸಲಿಲ್ಲ. ಅರಮನೆ ನಿರ್ಮಿಸಲಿಲ್ಲ. ಒಂದು ಚಿಕ್ಕ ಮನೆಯಲ್ಲಿ, ಬಡವರ ಮನೆಗಿಂತ ಉತ್ತಮವಾಗಿರದ ಮನೆಯಲ್ಲಿ ತನ್ನ ಜೀವಿತವನ್ನು ಕಳೆದರು. ಕೆಟ್ಟದಾಗಿ ವರ್ತಿಸಿದವರೊಂದಿಗೆ ಉತ್ತಮವಾಗಿ ವರ್ತಿಸಿ ತೋರಿಸಿದರು. ಹೃದಯಕ್ಕೆ ನೋವುಂಟುಮಾಡಿದವರಿಗೆ ಅವರ ವಿಪತ್ತಿನ ಕಾಲದಲ್ಲಿ ತಮ್ಮ ಹಣದಿಂದ ಸಂತೋಷವನ್ನು ತಲಪಿಸಿದರು. ಮಲಗಲು ನೆಲದ ಮೇಲೆ ಹಾಸಿಗೆ, ವಾಸಿಸಲು ಒಂದು ಚಿಕ್ಕ ಗುಡಿಸಲು, ತಿನ್ನಲು ಜೋಳದ ರೊಟ್ಟಿ ಅಥವಾ ಹಸಿದಿರುತ್ತಿದ್ದರು. ಲೌಕಿಕ ಸಂಪತ್ತು ಹಝ್‌ರತ್ ಪೈಗಂಬರರಿಗೆ ಧಾರಾಳವಾಗಿ ನೀಡಲ್ಪಟ್ಟಿತ್ತು. ಆದರೆ ಅವರು ತಮ್ಮ ಕೈಗಳನ್ನು ಲೌಕಿಕ ವಸ್ತುಗಳಿಂದ ಸ್ವಲ್ಪ ಮಾತ್ರ ಸಹ ಮಲೀನಗೊಳಿಸಲಿಲ್ಲ. ದಾರಿದ್ರ್ಯಕ್ಕೆ ಐಶ್ವರ್ಯದ ಮೇಲೆ, ಬಡತನಕ್ಕೆ ಶ್ರೀಮಂತಿಕೆ ಮೇಲೆ ಆದ್ಯತೆ ನೀಡಿದರು. ಅವರು ನಿಯೋಜಿತರಾದ ದಿನದಿಂದ ಅವರು ತನ್ನ ಅತ್ಯಂತ ಶ್ರೇಷ್ಠ ಸ್ನೇಹಿತನಾದ ಅಲ್ಲಾಹನನ್ನು ಕಾಣುವ ತನಕ ತನ್ನ ಸೃಷ್ಟಿಕರ್ತನ ಹೊರತು ಬೇರೆ ಯಾರಿಗೂ ಮಹತ್ವ ನೀಡಲಿಲ್ಲ." (ಬರಾಹೀನೆ ಅಹ್ಮದಿಯಾ ರೂಹಾನೀ ಖಝಾಇನ್ ಭಾಗ 1 ಪುಟ 276 – 292 ಹಾಶಿಯ ಸಂಖ್ಯೆ 11).

ಯಾವುದೇ ದೇಶವನ್ನಾಳುವವರಿಗೆ ಮತ್ತು ಸರಕಾರಿ ಅಧಿಕಾರಿಗಳಿಗೆ ಹಝ್‌ರತ್ ಪೈಗಂಬರರ ವೈಯಕ್ತಿಕ ಮತ್ತು ಕೌಟುಂಬಿಕ ಜೀವಿತದ ಈ ಮಾರ್ಗದರ್ಶಕ ವಿವರಣೆಗಳು ದಾರಿದೀಪ ಸ್ತಂಭವಾಗಿದೆ. ಹೀಗೆ ವರ್ತಿಸದೆ ಅವರು ಜನರ ಹಕ್ಕುಗಳನ್ನು ಸರಿಯಾದ ರೀತಿಯಲ್ಲಿ ವೀಕ್ಷಿಸಲಾರರು ಮತ್ತು ಈಡೇರಿಸಿಕೊಡಲಾರರು.

ಇಂದಿನ ಕಾಲದ ರಾಜ್ಯಾಧಿಪತಿಗಳು ಮತ್ತು ಮುಸ್ಲಿಮ್ ರಾಜ್ಯಾಧಿಪತಿಗಳು ರಾಷ್ಟ್ರೀಯ ಖಜಾನೆಯನ್ನು ತಮ್ಮ ಸ್ವಂತ ಮತ್ತು ಕುಟುಂಬದ ಹಿತಕ್ಕಾಗಿ ಅಪಾರವಾಗಿ ಬಳಸುತ್ತಿರುವ ಸ್ಥಿತಿಯ ಬಗ್ಗೆ ಓದಲು, ಆಲಿಸಲು ಮತ್ತು ನೋಡಲು ಲಭ್ಯವಾಗುತ್ತಿದೆ. ಅವುಗಳು ಪ್ರಸ್ತಾಪಿಸಲು ಅನರ್ಹವಾಗಿವೆ. ಅಲ್ಲಾಹನೇ ಅವರಿಗೆ ತಿಳುವಳಿಕೆ ನೀಡುವವನಾಗಲಿ. ನಮ್ಮ ಯಜಮಾನರಾದ ಹಝ್‌ರತ್ ಮುಹಮ್ಮದ್ ಪೈಗಂಬರರ ಅತ್ಯುತ್ಕೃಷ್ಟ ಮಾದರಿ ಜೀವಿತದ ಸಾವಿರದ ಒಂದು ಪಾಲಷ್ಟನ್ನಾದರೂ ಅನುಷ್ಠಾನಕ್ಕೆ ತರಲು ಅವರಿಗೆ ಭಾಗ್ಯ ಲಭಿಸಿದರೆ ಪ್ರಜೆಗಳ ಸ್ಥಿತಿ ಸುಧಾರಣೆಯಾಗಬಹುದಾಗಿದೆ.

ನಮ್ಮ ಜಮಾಅತಿನ ಇಮಾಮರಾದ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್, (ಪಂಚಮ ಖಲೀಫರು) ಇಸ್ಲಾಮಿನ ಶಾಂತಿದಾಯಕ ಮತ್ತು ಮಾನವೀಯರ ಹಿತೈಷಿ ಹಝ್‌ರತ್ ಮುಹಮ್ಮದ್ ಪೈಗಂಬರರ[ಸ] ಪರಿಶುದ್ಧ ಮಾದರಿಗಳನ್ನು ಉಲ್ಲೇಖಿಸಿ ಇಂದಿನ ಕಾಲದ ದೊಡ್ಡ ದೇಶಗಳ ಪಾರ್ಲಿಮೆಂಟುಗಳಲ್ಲಿ ನಿಂತು ನ್ಯಾಯಪಾಲನೆ ಮಾಡುವ ಬಗ್ಗೆ, ಜಾಗತಿಕ ಅಶಾಂತಿ, ಶಾಂತಿಭಂಗ ಮತ್ತು ಉಗ್ರಕೃತ್ಯಗಳನ್ನು ತಡೆಗಟ್ಟಲು ಹಾಗೂ ತೃತೀಯ ಜಾಗತಿಕ ಯುದ್ಧದ ಮೋಡ ತಲೆಯ ಮೇಲೆ ತೇಲಾಡುತ್ತಿರುವಾಗ ಅದರಿಂದ ರಕ್ಷಣೆ ಪಡೆಯಲು ಜಾಗತಿಕ ನಾಯಕರಿಗೆ ಎಚ್ಚರಿಕೆ ನೀಡುತ್ತಿದ್ದಾರೆ.

ಕೊನೆಯದಾಗಿ ಎರಡು ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸಿ ನನ್ನ ಭಾಷಣ ಮುಕ್ತಾಯಗೊಳಿಸುತ್ತೇನೆ. 2012 ಜೂನ್ ದಿನಾಂಕ 27ರಂದು ವಾಶಿಂಗ್‌ಟನ್ ಡಿ.ಸಿ.ಯ ಕ್ಯಾಪಿಟೋಲ್ ಹಿಲ್‌ನಲ್ಲಿ

ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫ) ಕಾಂಗ್ರೆಸ್ ಮತ್ತು ಸೆನಟಿನ ಪ್ರಮುಖ ಸದಸ್ಯರು, ವೈಟ್ ಹೌಸಿನ ಸಿಬ್ಬಂದಿ, ಸರಕಾರೇತರ ಸಂಸ್ಥೆಗಳ ಮುಖ್ಯಸ್ಥರು, ವಿವಿಧ ದೇಶಗಳ ರಾಯಭಾರಿಗಳು ಅವರ ಉಪಸ್ಥಿತಿಯಲ್ಲಿ ಅವರನ್ನು ಸಂಬೋಧಿಸಿ ಹೀಗೆ ಹೇಳಿದರು:

"ಪ್ರಥಮ ಜಾಗತಿಕ ಮಹಾ ಯುದ್ಧ ಕೊನೆಗೊಂಡಾಗ ಕೆಲವು ದೇಶಗಳ ನಾಯಕರು, ಭವಿಷ್ಯತ್‌ಕಾಲದಲ್ಲಿ ಉತ್ತಮ ಶಾಂತಿಭರಿತ ಅಂತರ್ರಾಷ್ಟ್ರೀಯ ಸಂಬಂಧ ಸ್ಥಾಪಿತವಾಗಲಿ ಎಂದು ಆಶಿಸಿದ್ದರು. ಜಾಗತಿಕ ಶಾಂತಿ ಸ್ಥಾಪನೆಗೆ ಒಂದು ಪ್ರಯತ್ನವಾಗಿ ಲೀಗ್ ಆಫ್ ನೇಶನ್ಸ್ ಸಂಸ್ಥೆ ಸ್ಥಾಪಿಸಲ್ಪಟ್ಟಿತು. ಅದರ ಮೂಲಭೂತ ಉದ್ದೇಶ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವುದು ಮತ್ತು ಮುಂದಿನ ಕಾಲದಲ್ಲಿ ಯುದ್ಧವನ್ನು ತಡೆಗಟ್ಟುವುದಾಗಿತ್ತು. ದುರ್ಭಾಗ್ಯಕರವಾಗಿ ಲೀಗ್ ಆಫ್ ನೇಶನ್ಸ್ ತತ್ವಗಳಲ್ಲಿ ಮತ್ತು ಅದರ ಠರಾವುಗಳಲ್ಲಿ ಕೆಲವು ನ್ಯೂನತೆಗಳೂ ಕೊರತೆಗಳೂ ಇದ್ದುವು. ಅದು ಎಲ್ಲ ಕೋಮುಗಳ ಹಕ್ಕುಗಳಿಗೆ ಸರಿಯಾದ ರೀತಿಯಲ್ಲಿ ಸಮಾನವಾದ ಸಂರಕ್ಷಣೆ ನೀಡಲಿಲ್ಲ. ಸಮಾನತೆ ರಹಿತವಾದ ಪರಿಣಾಮವಾಗಿ ದೀರ್ಘಕಾಲ ನೆಲೆನಿಲ್ಲುವ ಶಾಂತಿ ಸ್ಥಾಪಿತವಾಗಲಿಲ್ಲ. ಲೀಗ್ ಆಫ್ ನೇಶನ್ಸ್ ಮಾಡಿದ ಪ್ರಯತ್ನ ವಿಫಲವಾಯಿತು ಮತ್ತು ಅದರ ನೇರವಾದ ಪರಿಣಾಮವಾಗಿ ದ್ವಿತೀಯ ಜಾಗತಿಕ ಮಹಾಯುದ್ಧ ಪ್ರಾರಂಭವಾಯಿತು. ಅದರ ನಂತರ ಸಂಭವಿಸಿದ ಅಪ್ರತಿಮ ವಿನಾಶ ಮತ್ತು ಧ್ವಂಸದ ಬಗ್ಗೆ ನಮಗೆಲ್ಲರಿಗೂ ತಿಳಿದಿದೆ. ಆ ಯುದ್ಧದಲ್ಲಿ ಅಂದಾಜು ಏಳುಕೋಟಿ ಐವತ್ತು ಲಕ್ಷ ಜನರು ಜೀವವನ್ನು ಕಳಕೊಂಡರು. ಅವರಲ್ಲಿ ಒಂದು ಬಹಳ ದೊಡ್ಡ ಸಂಖ್ಯೆ ನಿರಪರಾಧಿ ನಾಗರಿಕರಾಗಿದ್ದರು. ಈ ಯುದ್ಧ ಲೋಕದ ಕಣ್ಣು ತೆರೆಯಲು ಸಾಕಷ್ಟು ಆಗಬೇಕಾಗಿತ್ತು. ಅದರ ಪರಿಣಾಮವಾಗಿ ಎಂತಹ ಧೋರಣೆಗಳನ್ನು ರೂಪಿಸಬೇಕಾಗಿತ್ತೆಂದರೆ ಅವುಗಳ ಮೂಲಕ ನ್ಯಾಯದ ತಳಹದಿಯಲ್ಲಿ ಎಲ್ಲ ಪಕ್ಷಗಳ ಜನರಿಗೆ ಅವರಿಗೆ ಅರ್ಹವಾದ ಹಕ್ಕುಗಳು ಸಿಗಬಹುದಾಗಿತ್ತು ಮತ್ತು ಈ ಸಂಸ್ಥೆ ಜಾಗತಿಕ ಶಾಂತಿಗೆ ಒಂದು ಮಾರ್ಗವಾಗುತ್ತಿತ್ತು. ಆ ಕಾಲದ ಸರಕಾರಗಳು ನಿಸ್ಸಂಶಯವಾಗಿ ಶಾಂತಿ ಸ್ಥಾಪಿಸಲು ತಕ್ಕಮಟ್ಟಿಗೆ ಪ್ರಯತ್ನ ಮಾಡಿದವು. ಆ ಮೂಲಕ ಸಂಯುಕ್ತರಾಷ್ಟ್ರ ಸಂಘ ಸ್ಥಾಪಿಸಲ್ಪಟ್ಟಿತು. ಆದರೆ ಸಂಯುಕ್ತರಾಷ್ಟ್ರ ಸಂಘದ ಸ್ಥಾಪನೆಯ ಪ್ರಮುಖವಾದ ಮೂಲಭೂತ ಉದ್ದೇಶ ಈಡೇರಲಿಲ್ಲವೆಂದು ಬೇಗನೆ ಸ್ಪಷ್ಟವಾಯಿತು."

ಇದೇ ರೀತಿ 2013 ಜೂನ್ ದಿನಾಂಕ 11ರಂದು ಲಂಡನಿನ ಪಾರ್ಲಿಮೆಂಟ್ ಹೌಸ್‌ನಲ್ಲಿ ಮಾಡಿದ ಭಾಷಣದಲ್ಲಿ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಹೀಗೆ ಹೇಳಿದರು: "ಈ ಕಾಲದ ಪ್ರಮುಖ ಆವಶ್ಯಕತೆಯೇನೆಂದರೆ ಜಾಗತಿಕ ಶಾಂತಿ ಮತ್ತು ಸೌಹಾರ್ದತೆ ಸ್ಥಾಪಿಸಲು ಮಾಡುವ ಪ್ರಯತ್ನದಲ್ಲಿ ಎಲ್ಲ ಜನರು ಒಬ್ಬರಿನ್ನೊಬ್ಬರನ್ನು ಮತ್ತು ಎಲ್ಲ ಧರ್ಮಗಳನ್ನು ಗೌರವಿಸಬೇಕು. ಹೀಗೆ ಮಾಡದಿದ್ದರೆ ಅಪಾಯಕರ ಪರಿಣಾಮಗಳು ತಲೆದೋರುವುವು.

"ಲೋಕ ಒಂದು ಜಾಗತಿಕ ಗ್ರಾಮ (ಗ್ಲೋಬಲ್ ವಿಲೇಜ್) ಆಗಿ ಪರಿವರ್ತಿತವಾಗಿದೆ. ಪರಸ್ಪರ ಗೌರವ ನೀಡದಿರುವಿಕೆ ಮತ್ತು ಶಾಂತಿಯನ್ನು ವರ್ಧಿಸಲು ಪರಸ್ಪರ ಐಕ್ಯತೆ ಇಲ್ಲದ ಕಾರಣ ಯುದ್ಧ ಪ್ರಾರಂಭವಾದರೆ ಅದು ಕೇವಲ ಸ್ಥಳೀಯವಾಗಿ ಒಂದು ನಗರ ಅಥವಾ ಒಂದು ದೇಶಕ್ಕೆ ಮಾತ್ರ ಹಾನಿ ಉಂಟುಮಾಡುವುದಾಗಿರಲಾರದು. ಅದು ಲೋಕದವಿಡೀ ನಾಶಕ್ಕೆ ಹೇತುವಾಗುವುದು. ಹಿಂದಿನ ಎರಡು ಜಾಗತಿಕ ಮಹಾಯುದ್ಧಗಳ ಘೋರ ವಿನಾಶಗಳ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ಕೆಲವು ದೇಶಗಳ ಧೋರಣೆಗಳ ಕಾರಣದಿಂದ ಇನ್ನೊಂದು ಜಾಗತಿಕ ಮಹಾಯುದ್ಧದ ಚಿಹ್ನೆಗಳು ದಿಗಂತದಲ್ಲಿ ಕಾಣಿಸಿಕೊಳ್ಳುತ್ತಾ ಇವೆ. ಜಾಗತಿಕ ಯುದ್ಧವೇನಾದರೂ ಪ್ರಾರಂಭವಾದರೆ ಪಾಶ್ಚಿಮಾತ್ಯ ಲೋಕ ಸಹ ಅದರ ದೀರ್ಘಕಾಲೀನ ವಿನಾಶಕಾರಿ ದುಷ್ಪರಿಣಾಮಗಳಿಂದ ಪ್ರಭಾವಿತವಾಗುವುದು. ನೀವೆಲ್ಲರೂ ಬನ್ನಿರಿ, ನಾವೆಲ್ಲರೂ ಸೇರಿ ಈ ವಿನಾಶದಿಂದ ರಕ್ಷಣೆ ಪಡೆಯುವ. ನಮ್ಮ ಮುಂದಿನ ಪೀಳಿಗೆಯನ್ನು ಯುದ್ಧದ ವಿನಾಶಕಾರಿ ಪರಿಣಾಮಗಳಿಂದ ರಕ್ಷಿಸಲು ನೀವೆಲ್ಲರೂ ಬನ್ನಿರಿ. ಏಕೆಂದರೆ ಈ ವಿನಾಶಕಾರಿ ಯುದ್ಧ ಅಣುಬಾಂಬ್ ಬಳಸುವ ಯುದ್ಧವೇ ಆಗುವುದು. ಲೋಕ ಯಾವ ಕಡೆಗೆ ಸಾಗುತ್ತಿದೆಯೋ ಅದರಲ್ಲಿ ಅಂತಹ ಯುದ್ಧ ಸ್ಫೋಟಗೊಳ್ಳುವ ಅಪಾಯ ಕಾಣಿಸುತ್ತದೆ. ಈ ವಿನಾಶಕಾರಿ ಪರಿಣಾಮಗಳಿಂದ ರಕ್ಷಿಸಿಕೊಳ್ಳಲು ನ್ಯಾಯ ಪಾಲನೆ, ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಯನ್ನು ಮೈಗೂಡಿಸುವುದು ಆವಶ್ಯಕವಾಗಿದೆ. ದ್ವೇಷಗಳನ್ನು ವರ್ಧಿಸಲು ಪ್ರಯತ್ನಿಸುತ್ತಾ ಜಾಗತಿಕ ಶಾಂತಿಯನ್ನು ಕೆಡಿಸಲು ನಿರತರಾಗಿರುವವರ ವಿರುದ್ಧ ಒಗ್ಗಟ್ಟಾಗಿ ನಿಂತು ಅವರನ್ನು ತಡೆಯಬೇಕು.

"ಮಹಾಶಕ್ತಿ ರಾಷ್ಟ್ರಗಳು ತಮ್ಮ ಹೊಣೆಗಾರಿಕೆಗಳನ್ನು ಅರಿತುಕೊಂಡು ಅತ್ಯಂತ ನ್ಯಾಯಪೂರ್ಣವೂ ಸರಿಯೂ ಆಗಿರುವ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲಿ ಎಂದು ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತೇನೆ – ಆಮೀನ್." (ಆಲಮೀ ಬುಹ್‌ರಾನ್ ಔರ್ ಅಮನ್ ಕೀ ರಾಹ್ ಪುಟ 129).

♦

**LOVE FOR HONESTY AND HATRED FOR DISHONESTY**

**ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ**

# ಸೃಷ್ಟಿಕರ್ತನಾದ ಅಲ್ಲಾಹನ ಅಸ್ತಿತ್ವದ ಬಗ್ಗೆ ಜ್ಞಾನ ಗಳಿಸಲಿರುವ ಮಾರ್ಗಗಳು

* ಮೌಲಾನ ಕರೀಮುದ್ದೀನ್ ಶಾಹಿದ್

**"ನಮ್ಮ ಮಾರ್ಗದಲ್ಲಿ ಯಾರು ಅತ್ಯಂತ ಪ್ರಯತ್ನಪಡುತ್ತಾರೋ, ಖಂಡಿತವಾಗಿಯೂ ನಾವು ಅವರನ್ನು ನಮ್ಮ ಪಥದಲ್ಲಿ ನಡೆಸುವೆವು. ನಿಶ್ಚಯವಾಗಿಯೂ ಅಲ್ಲಾಹನು ಸತ್ಕರ್ಮಿಗಳ ಜೊತೆಯಲ್ಲಿರುತ್ತಾನೆ."** (ಪವಿತ್ರ ಖುರ್‌ಆನ್ 29:70).

ಪವಿತ್ರ ಖುರ್‌ಆನಿನ ಈ ವಚನದಿಂದ ತಿಳಿಯುವುದೇನೆಂದರೆ, ಅಲ್ಲಾಹನ ಬಗ್ಗೆ ಜ್ಞಾನವನ್ನು ಗಳಿಸಲು ಅಥವಾ ಅವನನ್ನು ಗುರುತಿಸಲು ಕಠಿಣ ಪರಿಶ್ರಮದ ಆವಶ್ಯಕತೆ ಇದೆ. ಸ್ಪಷ್ಟವಾಗಿ ತಿಳಿದಿರುವ ವಿಷಯವೇನೆಂದರೆ ಲೋಕದಲ್ಲಿ ಪ್ರತಿಯೊಂದು ಕೆಲಸ ಮಾಡಲು ಕಠಿಣ ಪ್ರಯತ್ನ ಮತ್ತು ಪರಿಶ್ರಮದ ಆವಶ್ಯಕತೆ ಇರುತ್ತದೆ. ಪ್ರಯತ್ನ ಮಾಡದೆ, ದುಡಿಯದೆ ಲೋಕದಲ್ಲಿ ಯಾವ ಕೆಲಸವನ್ನೂ ಪೂರ್ಣಗೊಳಿಸಲು ಸಾಧ್ಯವಿಲ್ಲ. ಹೀಗಿರುವಾಗ ಅಲ್ಲಾಹನ ಬಗ್ಗೆ ಜ್ಞಾನ ಗಳಿಸಲು ಬಹಳ ಪ್ರಯತ್ನಪಡುವ ಆವಶ್ಯಕತೆ ಇರುತ್ತದೆ. ಇದಕ್ಕೆ ಸಂಬಂಧಿಸಿ ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

**"ಹೇ ಮನುಷ್ಯನೇ, ನೀನು ನಿನ್ನ ಪ್ರಭುವಿನ ಬಳಿಗೆ ಅತಿ ಪ್ರಯತ್ನಪಟ್ಟು ತಲಪುವವನೂ ಅವನನ್ನು ಭೇಟಿಯಾಗುವವನೂ ಆಗಿರುವೆ."** (ಪವಿತ್ರ ಖುರ್‌ಆನ್ 84:7).

ಅಲ್ಲಾಹನಿಗೆ ಸಂಬಂಧಿಸಿ ಒಂದು ವಾಸ್ತವಿಕವಾದ ವಿಷಯ ಇದಾಗಿದೆ:

**"ದೃಷ್ಟಿಗಳು ಅವನನ್ನು ತಲಪಲಾರವು. ಆದರೆ ಅವನು ದೃಷ್ಟಿಗಳನ್ನು ತಲಪುತ್ತಾನೆ. ಅವನು ಅತಿ ಸೂಕ್ಷ್ಮನೂ ಎಲ್ಲವನ್ನು ಬಲ್ಲವನೂ ಆಗಿರುತ್ತಾನೆ."** (ಪವಿತ್ರ ಖುರ್‌ಆನ್ 6:104).

ಪವಿತ್ರ ಖುರ್‌ಆನಿನ ಈ ವಚನ ಅಲ್ಲಾಹನ ಬಗ್ಗೆ ಅವನು ಅತ್ಯಂತ ಸೂಕ್ಷ್ಮವಾದ ಅಸ್ತಿತ್ವ ಹೊಂದಿದವನೆಂದು ಸೂಚಿಸುತ್ತದೆ. ಮನುಷ್ಯನ ಬುದ್ಧಿಶಕ್ತಿ ಸ್ವತಃ ಅವನನ್ನು ತಲಪಲಾರದು. ಬುದ್ಧಿಶಕ್ತಿಗೆ ಅಂತಹ ಸಾಮರ್ಥ್ಯವಿಲ್ಲ. ಅಲ್ಲಾಹನು ಸ್ವತಃ ತನ್ನ ದಾಸನ ಬಳಿಗೆ ಆಗಮಿಸುತ್ತಾನೆ. ತನ್ನ ಸಂದೇಶವಾಣಿಯ ಮೂಲಕ ತನ್ನ ಅಸ್ತಿತ್ವದ ಬಗ್ಗೆ ಸ್ವತಃ ತಿಳಿಸಿಕೊಡುತ್ತಾನೆ. ಅವನು ತನ್ನ ಬಲಹೀನ ದಾಸರಿಗೆ ಸಹಾಯ ನೀಡುತ್ತಾನೆ. ಅವನು ತನ್ನ ದಾಸನ ಕೈಯನ್ನು ಹಿಡಿದುಕೊಳ್ಳುತ್ತಾನೆ.

ಈ ಕಾರಣದಿಂದ ನಾವು ಹೀಗೆ ಹೇಳಬಹುದು – ಅಲ್ಲಾಹನ ಬಗ್ಗೆ ಜ್ಞಾನ ಗಳಿಸುವ ಪ್ರಥಮ ಮಾರ್ಗ ಇದಾಗಿದೆ – ಸರ್ವಶಕ್ತನಾದ ಅಲ್ಲಾಹನು **ಅನಲ್ ಮೌಜೂದ್** – ನಾನು ಇದ್ದೇನೆ ಎಂದು ಹೇಳಿ ಸ್ವತಃ ತನ್ನ ಅಸ್ತಿತ್ವದ ಬಗ್ಗೆ ಸಾಕ್ಷ್ಯವನ್ನು ನೀಡುತ್ತಾನೆ. ಈ ವಿಷಯಕ್ಕೆ ಸಂಬಂಧಿಸಿ ಧಾರಾಳ ಉದಾಹರಣೆಗಳು ಪ್ರವಾದಿಗಳ ಜೀವನ ಚರಿತ್ರೆಗಳಲ್ಲಿ ನಮಗೆ ಲಭಿಸುತ್ತವೆ. ನಾನು ಕೇವಲ 2 ಉದಾಹರಣೆಗಳನ್ನು ನಿಮ್ಮ ಮುಂದೆ ಇರಿಸುತ್ತೇನೆ.

1. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂಬೋಧಿಸಿ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: "(ತನ್ನನ್ನು) ಹುಡುಕುತ್ತಾ ಅಲೆದಾಡುವವನನ್ನಾಗಿ ಅವನು (ಅಲ್ಲಾಹನು) ನಿನ್ನನ್ನು ಕಂಡನು. ಆಗ ಅವನು (ತನ್ನೆಡೆಗೆ) ಮಾರ್ಗದರ್ಶನ ಮಾಡಿದನು." (ಪವಿತ್ರ ಖುರ್‌ಆನ್ 93:8). ಈ ವಚನದಲ್ಲಿ ಅಲ್ಲಾಹನು ಹೀಗೆ ಸೂಚಿಸಿದ್ದಾನೆ: ಹೇ ಪ್ರವಾದಿ, ನೀನು ನಮ್ಮನ್ನು ಹುಡುಕುತ್ತಾ ಅಲೆದಾಡುವುದಾಗಿ ಕಂಡೆವು. ನಾವೇ ಮುಂದೆ ಬಂದು ನಿನಗೆ ಮಾರ್ಗದರ್ಶನ ಮಾಡಿದೆವು.

ಈ ಹುಡುಕಾಟ ಮತ್ತು ಅನ್ವೇಷಣೆಯ ಉತ್ತರ ರೂಪವಾಗಿ ಪವಿತ್ರ ಖುರ್‌ಆನ್ ಅವತೀರ್ಣಗೊಂಡಿದೆ. ಲೋಕವು ನೆಲೆ ನಿಂತಿರುವ ತನಕ ಮಾನವರಿಗೆ ಪವಿತ್ರ ಖುರ್‌ಆನ್ ಮಾರ್ಗದರ್ಶನ ನೀಡುವಂತಹ ಪರಿಪೂರ್ಣ ಜೀವಿತ ಪದ್ಧತಿಯಾಗಿದೆ.

2. ದ್ವಿತೀಯ ಉದಾಹರಣೆ ಹಝ್ರತ್ ಮೂಸಾ ಅಲೈಹಿಸ್ಸಲಾಮರ ಜೀವನ ಚರಿತ್ರೆಯಿಂದ ಸಿಗುತ್ತದೆ. ಅವರು ತನ್ನ ಕುಟುಂಬದ ಜೊತೆಗೆ ಮದ್‌ಯನ್ ಪಟ್ಟಣದಿಂದ ಮರಳಿ ಬರುವಾಗ ಅವರು ಒಂದು ಸ್ಥಳದಲ್ಲಿದ್ದಾಗ ಪರ್ವತದ ಬದಿಯಲ್ಲಿ ಬೆಂಕಿಯನ್ನು ಕಂಡರು. ಅದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ:

**"ಹಾಗೆ ಅವರು (ಮೂಸಾ) ಅಲ್ಲಿಗೆ ಬಂದಾಗ, ಆ ಅನುಗ್ರಹೀತ ಪ್ರದೇಶದಲ್ಲಿರುವ ಕಣಿವೆಯ ಬಲ ಬದಿಯ ಒಂದು ವೃಕ್ಷದಿಂದ ಅವರನ್ನು ಕರೆದು ಹೀಗೆ ಹೇಳಲಾಯಿತು: ಹೇ ಮೂಸಾ, ಸರ್ವ ಲೋಕಗಳ ಪ್ರಭುವಾದ ಅಲ್ಲಾಹನು ನಾನೇ ಆಗಿದ್ದೇನೆ."** (ಪವಿತ್ರ ಖುರ್‌ಆನ್ 28:31).

ಅಲ್ಲಾಹನು ನಾನು ಇದ್ದೇನೆ ಎಂದು ಹೇಳಿ ತನ್ನ ದಾಸನ ಕೈಯನ್ನು ಸ್ವತಃ ಹಿಡಿದುಕೊಳ್ಳುವುದು ಮತ್ತು ತನ್ನ ಅಸ್ತಿತ್ವದ ಬಗ್ಗೆ ತಿಳಿಸಿಕೊಡುವುದು ಆ ರೀತಿಯಲ್ಲಿ ಆಗಿದೆ. ಈ ವಿಷಯವನ್ನು ನಾವು ಈ ರೀತಿ ವಿವರಿಸಬಹುದು: ಸಾವಿರಾರು ಪರದೆಗಳ ಹಿಂದೆ ಮರೆಯಾಗಿದ್ದರೂ ಅಲ್ಲಾಹನು ತನ್ನ ದಾಸರೊಂದಿಗೆ ಸಂಭಾಷಣೆ ನಡೆಸಿ ತನ್ನ ಅಸ್ತಿತ್ವದ ಬಗ್ಗೆ ಸ್ವತಃ ಸಾಕ್ಷ್ಯಾಧಾರ ನೀಡುತ್ತಾನೆ. ಅಲ್ಲಾಹನ ಅಸ್ತಿತ್ವದ ಬಗ್ಗೆ ಜ್ಞಾನ ಗಳಿಸಲು ಇದಕ್ಕಿಂತ ಮಿಗಿಲಾದ ಬೇರೆ ಯಾವುದೇ ಸ್ಪಷ್ಟವೂ ಪ್ರಕಾಶಮಾನವೂ ಆಗಿರುವ ಸಾಕ್ಷ್ಯಾಧಾರ ಇರುವುದಿಲ್ಲ.

ಪದ್ಯ: **ಬಿನ್ ದೇಖೇ ಕಿಸೀ ಮಹ್‌ರುಖ್ ಪೆ ಆಯೆ ದಿಲ್ ಕೆವುಂಕರ್ ಖಿಯಾಲಿ ಸನಮ್ ಸೆ ಲಗಾಯ ದಿಲ್ ದೀದಾರ್ ಗರ್ ನಹೀಂ ತೋ ಗುಫ್‌ತಾರ್ ಹೀ ಸಹೀ ಹುಸ್ನೋ ಜಮಾಲೆ ಯಾರ್ ಕೆ ಆಸಾರ್ ಹೀ ಸಹೀ**

ಚಂದ್ರಮುಖಿಯನ್ನು ನೋಡದೆ ಪ್ರೇಮಿಸುವುದು ಹೇಗೆ ತಾನೆ ಸಾಧ್ಯ. ಕಲ್ಪನೆಯ ಪ್ರಿಯನನ್ನು ಹೃತ್ಪೂರ್ವಕ ಪ್ರೀತಿಸುವುದಾದರೂ ಹೇಗೆ. ದರ್ಶನ ಸಿಗುವುದು ಸಾಧ್ಯವಿಲ್ಲವಾದರೆ ಮಾತುಗಳೇ ಸಾಕು. ಪ್ರಿಯಕರನ ಸೌಂದರ್ಯದ ಚಿಹ್ನೆಗಳೇ ಸಾಕು.

ಅಲ್ಲಾಹನ ಅಸ್ತಿತ್ವದ ಬಗ್ಗೆ ಜ್ಞಾನ ಗಳಿಸಲು ಸಹಾಯಕವಾದ ಇನ್ನೊಂದು ಮಾರ್ಗ ಇದಾಗಿದೆ: ಅಲ್ಲಾಹನು ತನ್ನ ಸಾತ್ವಿಕರಾದ ದಾಸರಿಗೆ ಅದೃಶ್ಯ ಸಮಾಚಾರಗಳನ್ನು ನೀಡಿ ತನ್ನ ಅಸ್ತಿತ್ವದ ಕುರಿತು

ಪುರಾವೆ ನೀಡುತ್ತಾನೆ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: **"(ಅಲ್ಲಾಹನು) ಅದೃಶ್ಯ ವಿಚಾರಗಳನ್ನು ಬಲ್ಲವನಾಗಿದ್ದಾನೆ. ಅವನು ತನ್ನ ರಹಸ್ಯಗಳನ್ನು ಯಾರಿಗೂ ಬಹಿರಂಗಪಡಿಸುವುದಿಲ್ಲ – ಅವನು ಮೆಚ್ಚುವ ತನ್ನ ಸಂದೇಶವಾಹಕರಿಗೆ ಹೊರತು."** (ಪವಿತ್ರ ಖುರ್‌ಆನ್ 72: 27, 28).

ಪ್ರವಾದಿಗಳ ಚರಿತ್ರೆಯಲ್ಲಿ ಇದಕ್ಕೆ ಸಂಬಂಧಿಸಿ ಸಾವಿರಾರು ಉದಾಹರಣೆಗಳು ಇವೆ. ಪವಿತ್ರ ಖುರ್‌ಆನ್‌ನಲ್ಲಿ ಅದೃಶ್ಯ ಸಮಾಚಾರಗಳ ಸಂಗ್ರಹವೇ ಇದೆ. ಉದಾಹರಣೆಗೆ, **ವ ಇಧಲ್ ಇಶಾರು ಉತ್ತಿಲತ್** – "ಹತ್ತು ಮಾಸ ಗರ್ಭವುಳ್ಳ ಒಂಟೆಗಳು ತ್ಯಜಿಸಲ್ಪಡುವಾಗ." (ಪವಿತ್ರ ಖುರ್‌ಆನ್ 81:5).

ಈ ವಚನ ಹೀಗೆ ಸೂಚಿಸುತ್ತದೆ: ಒಂದು ಕಾಲ ಬರಲಿದೆ. ಆಗ ಒಂಟೆಗಳು ನಿರುಪಯೋಗಿಗಳಾಗುವುವು. ಎಂದರೆ ಅವುಗಳು ಸಂಚಾರ ಮಾಡಲು ಬಳಸಲ್ಪಡಲಿಕ್ಕಿಲ್ಲ. ಹದೀಸುಗಳಲ್ಲಿ ವಿಶದವಾಗಿ ಹೀಗೆ ವಿವರಿಸಲಾಗಿದೆ. ಎಂತಹ ವಾಹನಗಳು ಪ್ರಯಾಣಕ್ಕೋಸ್ಕರ ನಿರ್ಮಿಸಲ್ಪಡುವುವು ಎಂದರೆ ಅವು ಬೆಂಕಿಯ ಸಹಾಯದಿಂದ ಚಲಿಸುವುವು. ಅವುಗಳಲ್ಲಿ ಬಾಗಿಲು ಕಿಟಕಿಗಳೂ ಅನೇಕ ದೀಪಗಳೂ ಇರುವುವು ಎಂದು ಭವಿಷ್ಯ ನುಡಿಯಲಾಗಿದೆ. ರೈಲು ಬಂಡಿಯ ಆವಿಷ್ಕಾರದಿಂದ ಈ ಭವಿಷ್ಯವಾಣಿ ಈಡೇರಿತು. ಇದೇ ಪ್ರಕಾರ ಬೇರೆ ಕೆಲವು ಭವಿಷ್ಯವಾಣಿಗಳು ಹೀಗಿವೆ:

**ವ ಇಧಸ್ಸುಹುಫು ನುಶಿರತ್** – ಪುಸ್ತಕಗಳು ವಿಪುಲವಾಗಿ ಪ್ರಚರಿಸಲ್ಪಡುವಾಗ. (81:11).

**ವ ಇಧನ್ನುಫೂಸು ಝುಉವ್ವಿಜತ್** – ಜನರು ಒಂದುಗೂಡಿಸಲ್ಪಡುವಾಗ. (81:8).

ಲೋಕದಲ್ಲಿ ಮಾನವರು ಪರಸ್ಪರ ಸಂಬಂಧ ವರ್ಧಿಸುವರು ಎಂದು ಈ ವಚನ ಸೂಚಿಸುತ್ತವೆ. ಈ ಎಲ್ಲ ಭವಿಷ್ಯವಾಣಿಗಳು ನಮ್ಮ ಕಾಲದಲ್ಲಿ ಈಡೇರಿವೆ.

ಇಸ್ಲಾಮ್ ಎಂತಹ ಧರ್ಮವಾಗಿದೆ ಎಂದರೆ ಪ್ರತಿಯೊಂದು ಕಾಲಘಟ್ಟದಲ್ಲಿ ಈ ಧರ್ಮದ ಅನುಯಾಯಿಗಳಾದವರಲ್ಲಿ ಎಂತಹ ಜನರು ಜನಿಸುತ್ತಾರೆಂದರೆ, ಅವರಿಗೆ ಅಲ್ಲಾಹನು ಅದೃಶ್ಯ ಸಮಾಚಾರಗಳನ್ನು ಪ್ರಕಟಿಸಿ ತನ್ನ ಅಸ್ತಿತ್ವದ ಬಗ್ಗೆ ಸಾಕ್ಷ್ಯಾಧಾರಗಳನ್ನು ನೀಡುತ್ತಾ ಇರುತ್ತಾನೆ. ನಮ್ಮ ಈ ಕಾಲಘಟ್ಟದಲ್ಲಿ ಅಲ್ಲಾಹನಿಂದ ನಿಯೋಜಿತರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವರು ಬಲಹೀನರೂ ಅನಾಮಿಕರೂ ಆಗಿದ್ದ ಸ್ಥಿತಿಯಲ್ಲಿದ್ದಾಗ ಅಲ್ಲಾಹನು ಹೀಗೆ ಸಮಾಚಾರವನ್ನು ನೀಡಿದನು:

**ಯಅ್‌ತೀಕ ಮಿನ್ ಕುಲ್ಲಿ ಫಜ್ಜಿನ್ ಅಮೀಖ್, ಯನ್‌ಸುರುಕ ರಿಜಾಲುನ್ ನೂಹೀ ಇಲೈಹಿಮ್ ಮಿನಸ್ಸಮಾ.**

ಅರ್ಥ: ಪ್ರತಿಯೊಂದು ಮಾರ್ಗದಿಂದಲೂ ಜನರು ನಿನ್ನ ಬಳಿಗೆ ಆಗಮಿಸುವರು. ಎಷ್ಟು ಹೆಚ್ಚು ಹೆಚ್ಚಾಗಿ ಜನರು ಆಗಮಿಸುವರೆಂದರೆ, ಅವರು ಆಗಮಿಸುವ ಮಾರ್ಗಗಳು ಆಳವಾಗಿ ಪರಿಣಮಿಸುವುವು. ಯಾವ ಜನರಿಗೆ ನಾವು ಪ್ರೇರೇಪಣೆ ನೀಡುತ್ತೇವೋ ಅವರು ನಿನಗೆ ಸಹಾಯ ನೀಡುವರು. (ಬರಾಹೀನೆ ಅಹ್ಮದಿಯಾ).

ದೂರ ಪ್ರದೇಶದಲ್ಲಿರುವ ಖಾದಿಯಾನ್ ಎಂಬ ಅಜ್ಞಾತ ಗ್ರಾಮದ ಕಡೆಗೆ ಬಹಳ ಸಂಖ್ಯೆಯಲ್ಲಿ ಜನರು ಆಗಮಿಸಲು ಪ್ರಾರಂಭಿಸಿದ್ದು, ಆ ಚಿಕ್ಕ ಗ್ರಾಮ ಲೋಕದಾದ್ಯಂತ ಪ್ರಸಿದ್ಧಿ ಗಳಿಸಿದ್ದು ಮತ್ತು ಸಾವಿರಾರು ಜನರು ಇಲ್ಲಿನ ಆಧ್ಯಾತ್ಮಿಕ ಸಮಾವೇಶದಲ್ಲಿ ಭಾಗವಹಿಸುತ್ತಾ ಇರುವುದು ಸಾಮಾನ್ಯವಾದ ವಿಷಯವೇನೂ ಅಲ್ಲ. ಇವು ಅಲ್ಲಾಹನು ತೋರಿಸಿದ ವೈಭವಶಾಲಿ ದೃಷ್ಟಾಂತವಾಗಿವೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಸ್ವತಃ ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ:

**ಮೈಂ ಥಾ ಗರೀಬೋ ಬೇಕಸೋ ಗುಮ್‌ನಾಮ್ ಬೇಹುನರ್ ಕೋಯೀ ನ ಜಾನ್‌ತಾ ಥಾ ಕೆ ಹೈ ಖಾದಿಯಾನ್ ಕಿದರ್ ಲೋಗೋಂ ಕಿ ಇಸ್ ತರಫ್ ಕೊ ಝರಾ ಭಿ ನಝರ್ ನಹೀ ಮೇರೇ ಉಜೂರ್ ಕಿ ಭೀ ಕಿಸೀ ಕೊ ಖಬರ್ ನಹೀ ಅಬ್ ದೇಖ್‌ತೇ ಹೊ ಕೈಸಾ ರುಜೂಯೆ ಜಹಾಂ ಹುವಾ ಎಕ್ ಮರ್‌ಜಿಯೆ ಖವಾಸ್ಸ್ ಯಹೀ ಖಾದಿಯಾನ್ ಹುವಾ.**

ಅರ್ಥ: ನಾನು ಬಡವನೂ ಬಲಹೀನನೂ ಅಜ್ಞಾತನೂ ಚಾತುರ್ಯ ರಹಿತನೂ ಆಗಿದ್ದೆ. ಖಾದಿಯಾನ್ ಎಲ್ಲಿದೆ ಎಂದು ಯಾರಿಗೂ ತಿಳಿದಿರಲಿಲ್ಲ. ಜನರು ಈ ಗ್ರಾಮದ ಕಡೆಗೆ ಒಂದಿಷ್ಟೂ ಲಕ್ಷ್ಯ ನೀಡಿರಲಿಲ್ಲ. ನನ್ನ ಬಗ್ಗೆ ಸಹ ಯಾರಿಗೂ ತಿಳಿದಿರಲಿಲ್ಲ. ಈಗ ನೋಡಿರಿ, ಈ ಗ್ರಾಮ ಲೋಕದಾದ್ಯಂತ ಜನರು ಆಗಮಿಸುವ ಸ್ಥಳವಾಯಿತು. ಇದೇ ಖಾದಿಯಾನ್ ಗಣ್ಯರು ಸಹ ಆಗಮಿಸುವ ಸ್ಥಳವಾಯಿತು.

ಈ ವರ್ಷ 2022 ಸೆಪ್ಟಂಬರ್ ದಿನಾಂಕ 30 ಶುಕ್ರವಾರದಂದು ನಮ್ಮ ಪ್ರಿಯ ಇಮಾಮ್ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಪಂಚಮ ಖಲೀಫ ಅಮೇರಿಕದ ನಗರವಾದ ಝಿಯೋನ್ (ZION)ನಲ್ಲಿ ಮಸ್‌ಜಿದ್ ಫತ್‌ಹೆ ಅಝೀಮ್ ಉದ್ಘಾಟಿಸುವಾಗ ಸರ್ವಶಕ್ತನಾದ ಅಲ್ಲಾಹನ ಒಂದು ವೈಭವಶಾಲಿ ದೃಷ್ಟಾಂತದ ವಿವರಣೆ ನೀಡುತ್ತಾ ಹೇಳಿದುದು, ಅದೃಶ್ಯ ವಿಷಯಗಳಿಗೆ ಸಂಬಂಧಿಸಿ ಅಲ್ಲಾಹನು ನೀಡುವ ಜ್ಞಾನದ ಬಗ್ಗೆಯಾಗಿತ್ತು. ಅದು ಅಲ್ಲಾಹನ ಅಸ್ತಿತ್ವದ ಬಗ್ಗೆ ಒಂದು ದೊಡ್ಡ ಸಾಕ್ಷ್ಯಾಧಾರವಾಗಿದೆ. ಅದರ ವಿವರಣೆ ಹೀಗೆ: ಅಮೇರಿಕದಲ್ಲಿ ಕ್ರೈಸ್ತನಾದ ಡೂಯೀ ಪ್ರವಾದಿತ್ವದ ವಾದ ಮಾಡಿದ್ದನು. ಅವನು ಹೀಗೆ ತನ್ನ ಕೊಳಕು ಹೇಳಿಕೆ ಪ್ರಕಟಿಸಿದನು:

"ನಾನು ದೇವನೊಂದಿಗೆ ಪ್ರಾರ್ಥಿಸುತ್ತೇನೆ. ಇಸ್ಲಾಮ್ ಲೋಕದಿಂದ ಸಂಪೂರ್ಣವಾಗಿ ನಾಶವಾಗುವ ಕಾಲ ಬೇಗನೆ ಸನ್ನಿಹಿತವಾಗಲಿ. ಹೇ ದೇವಾ, ನೀನು ಹಾಗೆಯೇ ಮಾಡು. ಹೇ ದೇವಾ, ಇಸ್ಲಾಮನ್ನು ನಾಶಮಾಡು."

ಡೂಯೀಗೆ ಎದುರಾಗಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಪ್ರಕಟಣೆ ನೀಡಿ ಹೇಳಿದರು: ಹೇ ಪ್ರವಾದಿತ್ವ ವಾದಿ, ನನ್ನೆದುರಿಗೆ ಬಾ. ಪ್ರಾರ್ಥನೆ ಮೂಲಕ ಪರಸ್ಪರ ಎದುರಾಗೋಣ. ನಾವಿಬ್ಬರೂ ದೇವನೊಂದಿಗೆ ಪ್ರಾರ್ಥಿಸೋಣ. ನಮ್ಮ ಪೈಕಿ ಯಾರು ಸುಳ್ಳು ಹೇಳುವವನಾಗಿರುವನೋ ಅವನು ಮೊದಲು ನಾಶವಾಗುವವನಾಗಲಿ ಎಂದು ನಾವಿಬ್ಬರೂ ಪ್ರಾರ್ಥಿಸೋಣ. (ಅಮೇರಿಕದಿಂದ ಪ್ರಕಟಿಸಲಾಗುತ್ತಿದ್ದ ಟೆಲಿಗ್ರಾಫ್ ಪತ್ರಿಕೆ 1903 ಜುಲಾಯಿ 5ರ ಸಂಚಿಕೆ).

ಈ ಆಹ್ವಾನದ ವಿರುದ್ಧ ಡೂಯೀ ದುರಹಂಕಾರ ಭರಿತನಾಗಿ ಹೇಳಿದನು: "ಏನು ಈ ನುಸಿಗಳಿಗೂ ನೊಣಗಳಿಗೂ ಉತ್ತರ ನೀಡುವೆನು ಎಂದು ನೀವು ಯೋಚಿಸುತ್ತಿರುವಿರೇನು? ನಾನು ನನ್ನ ಪಾದವನ್ನು ಅವರ ಮೇಲೆ ಇರಿಸುವುದಾದರೆ ಅವರನ್ನು ತುಳಿದು ಹಾಕಿ ನಾಶಮಾಡುವೆನು." (ಡೂಯೀ ಪ್ರಕಟಿಸುತ್ತಿದ್ದ ಲೀವ್ಸ್ ಆಫ್ ಹೀಲಿಂಗ್ ಪತ್ರಿಕೆ 1903 ಡಿಸೆಂಬರ್ ಸಂಚಿಕೆ).

ಹಝ್ರತ್ ಮಸೀಹ್ ಮೌಊದ್[ಅ] ಅದಕ್ಕೆ ಮೊದಲು 1903 ಅಗಸ್ಟ್ 23ರ ವಿಜ್ಞಾಪನೆಯಲ್ಲಿ ಹೀಗೆ ಪ್ರಕಟಿಸಿದ್ದರು: ಡೂಯೀ ನನ್ನೆದುರಿಗೆ ಬಾರದೆ ಓಡಿ ಹೋದರೂ ನೀವು ದೃಢವಾಗಿ ತಿಳಿದುಕೊಳ್ಳಿರಿ, ಅವನ ಝಿಯೋನ್ ಮೇಲೆ ಬೇಗನೆ ವಿಪತ್ತು ಬಂದೆರಗಲಿದೆ. ಹೇ ದೇವಾ, ಹೇ ಪರಿಪೂರ್ಣ ದೇವಾ, ನೀನು ಬೇಗನೆ ಈ ತೀರ್ಮಾನ ಮಾಡು ಮತ್ತು ಡೂಯೀಯ ಸುಳ್ಳು ಜನರ ಮುಂದೆ ಪ್ರಕಟಿಸು.

ಅನಂತರ ಏನೆಲ್ಲ ಸಂಭವಿಸಿತೆಂದು ಆಲಿಸಿರಿ. ಡೂಯೀ ರಾಜಕುಮಾರನ ಹಾಗೆ ಜೀವಿಸುತ್ತಿದ್ದನು. ಅವನ ಬಳಿ ಏಳು ಕೋಟಿ ರೂಪಾಯಿಗಳಿದ್ದುವು. ಅವನ ಪತ್ನಿ ಮತ್ತು ಪುತ್ರ ಅವನ ಶತ್ರುಗಳಾದರು. ಪಿತ ತನ್ನ ಪುತ್ರ ಜಾರಜನೆಂದು ಪ್ರಕಟಣೆ ನೀಡಿದನು. ಅನಂತರ ಡೂಯೀಗೆ ಪಾರ್ಶ್ವವಾಯು ರೋಗ ಬಾಧಿಸಿತು. ಅವನು ದುಃಖದಿಂದ ಹುಚ್ಚನಾದನು. 1907 ಮಾರ್ಚ್ ತಿಂಗಳಲ್ಲಿ ಬಹಳ ನಿರಾಶೆಯಿಂದಲೂ ದುಃಖದಿಂದಲೂ ಭರಿತನಾಗಿ ಸತ್ತನು. ಅಲ್ಲಾಹನು ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್‌ರಿಗೆ[ಅ] ಮುಂಚಿತವಾಗಿ ತಿಳಿಸಿದ್ದನು. ಹಝ್ರತ್ ಮಸೀಹ್ ಮೌಊದ್[ಅ] 1907 ಫೆಬ್ರವರಿ ದಿನಾಂಕ 10ರಂದು ಪ್ರಕಟಿಸಿದ ವಿಜ್ಞಾಪನೆಯಲ್ಲಿ ಹೀಗೆ ಬರೆದಿದ್ದರು: "ದೇವನು ಹೇಳುತ್ತಾನೆ – ನಾನು ಒಂದು ಹೊಸದಾದ ದೃಷ್ಟಾಂತ ಪ್ರಕಟಿಸುವೆನು. ಅದರಲ್ಲಿ ಬೃಹತ್ತಾದ ವಿಜಯು ಫತ್‌ಹ್ ಅಝೀಮ್ ಅಡಕವಾಗಿರುವುದು. ಅದು ಇಡೀ ಲೋಕಕ್ಕೆ ಒಂದು ದೃಷ್ಟಾಂತವಾಗುವುದು."

ಡೂಯೀ ನಾಶವಾಗಿ ಅಲ್ಲಾಹನ ಅಸ್ತಿತ್ವದ ಬಗ್ಗೆ ಸಾಕ್ಷ್ಯ ನೀಡಿ ಹೋದನು. ಆ ದೃಷ್ಟಾಂತ ಕ್ರೈಸ್ತ ಲೋಕಕ್ಕೆ ಪುರಾತನ ಮತ್ತು ಆಧುನಿಕ ಲೋಕದ ಮೇಲೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಯವನ್ನು ಸಾಬೀತುಗೊಳಿಸುತ್ತದೆ.

ಅಲ್ಲಾಹನ ಬಗ್ಗೆ ಜ್ಞಾನ ಗಳಿಸುವ ಇನ್ನೊಂದು ಮಾರ್ಗ ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಅಧ್ಯಯನ ಮತ್ತು ವೀಕ್ಷಣೆಗಳಾಗಿವೆ. ನಾವು ವಿಶ್ವದ ಸೃಷ್ಟಿಯ ಸುಸ್ಥಿರವಾದ ವ್ಯವಸ್ಥೆಗಳ ಮತ್ತು ವೈಶಿಷ್ಟ್ಯಗಳ ಬಗ್ಗೆ ಚಿಂತಿಸುವುದಾದರೆ ಅಲ್ಲಾಹನ ಅಸ್ತಿತ್ವ, ಅವನ ಶಕ್ತಿಸಾಮರ್ಥ್ಯ ಮತ್ತು ಎದ್ದು ಕಾಣುವ ಅವನ ಸರ್ವವ್ಯಾಪಿ ಶಕ್ತಿಯು ಗೋಚರಿಸುತ್ತವೆ. ಅಲ್ಲಾಹನ ಹೊರತು ಬೇರೆ ಯಾರಿಗೂ ಇಂತಹ ಶಕ್ತಿಸಾಮರ್ಥ್ಯವನ್ನು ಅನ್ವಯಿಸಿ ಹೇಳುವ ಧೈರ್ಯ ಇರಲಾರದು.

ಪವಿತ್ರ ಖುರ್‌ಆನ್ ಬುದ್ಧಿಶಾಲಿಗಳಾದ ಮನುಷ್ಯರೊಂದಿಗೆ ಚಿಂತಿಸಲು ಆಹ್ವಾನ ನೀಡುತ್ತಾ ಹೀಗೆ ಹೇಳುತ್ತದೆ:

**"ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ಅಲ್ಲಾಹನಿಗಿದೆ. ಅಲ್ಲಾಹನು ಎಲ್ಲ ಕಾರ್ಯಗಳಲ್ಲೂ ಸರ್ವಸಮರ್ಥನಾಗಿದ್ದಾನೆ. ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲೂ ರಾತ್ರಿ – ಹಗಲುಗಳ ರೂಪಾಂತರದಲ್ಲೂ ದಿಟವಾಗಿಯೂ ಬುದ್ಧಿಶಾಲಿಗಳಿಗೆ (ಹಲವು) ದೃಷ್ಟಾಂತಗಳಿವೆ."** (ಪವಿತ್ರ ಖುರ್‌ಆನ್ 3: 190, 191).

ಈ ವಚನಗಳು ಸೂಚಿಸುವುದೇನೆಂದರೆ ಭೂಮ್ಯಾಕಾಶಗಳ ಸೃಷ್ಟಿಯಾದುದು ಆಕಸ್ಮಿಕವಾಗಿಯಲ್ಲ. ಅವುಗಳ ಸೃಷ್ಟಿಯ ಹಿನ್ನಲೆಯಲ್ಲಿ ಸುಸ್ಥಿರ ಸುವ್ಯವಸ್ಥಾಪಿತ ಯೋಜನೆ ಇದೆ.

ಪವಿತ್ರ ಖುರ್‌ಆನ್‌ನಲ್ಲಿ ವಿವಿಧ ಸ್ಥಳಗಳಲ್ಲಿ ಅಲ್ಲಾಹನ ಶಕ್ತಿ ಸಾಮರ್ಥ್ಯಗಳನ್ನು ಪ್ರಸ್ತಾಪಿಸಿ ಅವನ ಅಸ್ತಿತ್ವವನ್ನು ಪರಿಚಯ ಮಾಡಿಕೊಡಲಾಗಿದೆ. ಉದಾಹರಣೆಗೆ ಈ ಕೆಳಗಿನ ವಚನಗಳನ್ನು ನೋಡಿರಿ:

**"ಅಲ್ಲಾಹನು ನೀವು ಕಾಣುವಂಥ ಸ್ತಂಭಗಳಿಲ್ಲದೆ ಆಕಾಶಗಳನ್ನು ಉನ್ನತಿಯುಲ್ಲಿ ಇಟ್ಟಿರುವನು. ಅನಂತರ ಅವನು ಸಿಂಹಾಸನಾರೂಢನಾದನು. ಸೂರ್ಯನನ್ನೂ ಚಂದ್ರನನ್ನೂ ಅವನು ನಿಯಮಕ್ಕೆ ಅಧೀನಗೊಳಿಸಿದನು. ಎಲ್ಲವೂ ಒಂದು ನಿರ್ದಿಷ್ಟ ಕಾಲಾನುಸಾರ ಚಲಿಸುತ್ತಿರುತ್ತವೆ. ಅವನು ನಿಸರ್ಗ ನಿಯಮವನ್ನು ನಿಯಂತ್ರಿಸುತ್ತಾನೆ. ನಿಮ್ಮ ಪ್ರಭುವಿನ ಭೇಟಿಯ ಬಗ್ಗೆ ನಿಮಗೆ ದೃಢ ವಿಶ್ವಾಸ ಹುಟ್ಟಲಿಕ್ಕೋಸ್ಕರ ಅವನು ದೃಷ್ಟಾಂತಗಳನ್ನು ವಿವರಿಸಿಕೊಡುತ್ತಾನೆ.**

**"ಅವನು ಭೂತಲವನ್ನು ವಿಸ್ತಾರಗೊಳಿಸಿ ಅದರಲ್ಲಿ ಪರ್ವತಗಳನ್ನೂ ನದಿಗಳನ್ನೂ ಸೃಷ್ಟಿಸಿದ್ದಾನೆ. ಎಲ್ಲ ವಿಧ ಹಣ್ಣು ಹಂಪಲುಗಳಲ್ಲಿ ಅವನು ಹೆಣ್ಣು – ಗಂಡೆಂಬ ಜೋಡಿಗಳನ್ನು ಉಂಟುಮಾಡಿದ್ದಾನೆ. ಹಗಲನ್ನು ರಾತ್ರಿಯಿಂದ ಅವನು ಮುಚ್ಚುತ್ತಾನೆ. ದಿಟವಾಗಿಯೂ ಚಿಂತನಶೀಲರಿಗೆ ಇದರಲ್ಲಿ ಹಲವು ದೃಷ್ಟಾಂತಗಳಿವೆ.**

**"ಭೂಮಿಯಲ್ಲಿ ಒಂದಕ್ಕೊಂದು ತಾಗಿಕೊಂಡು ಅನೇಕ ವಲಯಗಳಿವೆ. ದ್ರಾಕ್ಷೆಯ ತೋಟಗಳೂ ಧಾನ್ಯದ ಹೊಲಗಳೂ ಖರ್ಜೂರದ ಮರಗಳೂ ಇವೆ. ಒಂದೇ ಬುಡದಿಂದ ಗುಂಪಾಗಿ ಮೊಳೆಯುವವು ಹಾಗೂ ಹಾಗೆ ಮೊಳೆಯದವು ಸಹ ಇವೆ. (ಇವೆಲ್ಲ) ಒಂದೇ ಜಲದಿಂದ ಬೆಳೆಯುತ್ತವೆ. ಆದರೆ ಫಲಗಳಲ್ಲಿ ಒಂದಕ್ಕಿಂತ ಇನ್ನೊಂದನ್ನು ಉತ್ಕೃಷ್ಟವಾಗಿ ನಾವು ಮಾಡುತ್ತೇವೆ. ಖಂಡಿತವಾಗಿಯೂ ವಿವೇಕಶಾಲಿಗಳಿಗೆ ಇದರಲ್ಲಿ ಹಲವು ದೃಷ್ಟಾಂತಗಳಿವೆ."** (ಪವಿತ್ರ ಖುರ್‌ಆನ್ 13: 3–5).

ಈ ಎಲ್ಲ ವಿಷಯಗಳನ್ನು ಒಂದೊಂದಾಗಿ, ಬೇರೆ ಬೇರೆಯಾಗಿ ಚಿಂತಿಸುವುದಾದರೆ ಅಲ್ಲಾಹನ ಶಕ್ತಿಸಾಮರ್ಥ್ಯಗಳ ಏಕಮಾತ್ರ ವೈಭವ ನಿಸ್ಸಂಶಯವಾಗಿ ಒಬ್ಬ ವಾಸ್ತವಿಕ ಸೃಷ್ಟಿಕರ್ತನ ಅಸ್ತಿತ್ವದ ಸಾಕ್ಷ್ಯಾಧಾರವನ್ನು ನೀಡುತ್ತದೆ. ಒಬ್ಬ ಬುದ್ಧಿಶಾಲಿ ಮನುಷ್ಯ ಅಲ್ಲಾಹನ ಈ ಶಕ್ತಿ ಸಾಮರ್ಥ್ಯಗಳ ಪ್ರದರ್ಶನದ ಕಡೆಗೆ ಸಮಗ್ರವಾಗಿ ದೃಷ್ಟಿ ಬೀರುವುದಾದರೆ ಕೊನೆಗೆ ಅವನು ಒಬ್ಬ ನೈಜ ಸೃಷ್ಟಿಕರ್ತನ ಅಸ್ತಿತ್ವದ ಬಗ್ಗೆ ಒಪ್ಪಿಕೊಳ್ಳಬೇಕಾಗುತ್ತದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಎಷ್ಟು ಚೆನ್ನಾಗಿ ಪದ್ಯರೂಪದಲ್ಲಿ ಹೀಗೆ ವಿವರಿಸಿದ್ದಾರೆ:

**ಹೈ ಅಜಬ್ ಜಲ್ವ ತೆರಿ ಖುದ್‌ರತ್ ಕಾ ಪ್ಯಾರೇ ಹರ್‌ತರಫ್ ಜಿಸ್ ತರಫ್ ದೇಖೇಂ ವಹೀ ರಹ್ ಹೈ ತೆರೇ ದೀದಾರ್‌ಕಾ ಕ್ಯಾ ಅಜಬ್ ತೂನೆ ಹರ್ ಎಕ್ ಝರ್‍ರಮೇ ರಖೇ ಹೆಂ ಖವಾಸ್ ಕೌನ್ ಪಡ್ ಸಕ್ತಾ ಹೈ ಸಾರಾ ದಫ್ತರ್ ಉನ್ ಅಸ್‌ರಾರ್ ಕಾ ತೆರಿ ಖುದ್‌ರತ್ ಕಾ**

**ಕೊಯೀ ಭಿ ಇಂತಹಾ ಪಾತಾ ನಹೀಂ ಕಿಸ್ ಸೆ ಖಿಲ್ ಸಕ್ತಾ ಹೈ ಪೇಚ್ ಇಸ್ ಉಖ್‌ದಯೆ ದುಶ್ವಾರ್ ಕಾ**

"ಹೇ ಪ್ರಿಯಕರ, ಪ್ರತಿಯೊಂದು ಸ್ಥಳದಲ್ಲಿ ನಿನ್ನ ಶಕ್ತಿ ಸಾಮರ್ಥ್ಯಗಳ ಅದ್ಭುತ ಪ್ರದರ್ಶನವಿದೆ. ಯಾವ ಕಡೆಗೆ ನೋಡಿದರೂ ಅಲ್ಲಿ ನಿನ್ನನ್ನು ಕಾಣುವ ಮಾರ್ಗವಿದೆ. ಎಷ್ಟು ಅದ್ಭುತಕರವಾಗಿದೆ, ನೀನು ಪ್ರತಿಯೊಂದು ಕಣದಲ್ಲಿ ವೈಶಿಷ್ಟ್ಯಗಳನ್ನಿರಿಸಿದೆ. ಆ ರಹಸ್ಯಗಳ ದಾಖಲೆಗಳನ್ನೆಲ್ಲ ಓದ ಬಲ್ಲವನು ಯಾರಿದ್ದಾನೆ. ನಿನ್ನ ಸಾಮರ್ಥ್ಯಗಳ ತುತ್ತ ತುದಿಗಳನ್ನು ತಿಳಿದುಕೊಳ್ಳುವವನು ಯಾರೂ ಇಲ್ಲ. ಈ ಕಷ್ಟಕರವಾದ ಗಂಟನ್ನು ಬಿಚ್ಚಬಲ್ಲವನು ಯಾರಿದ್ದಾನೆ?"

ಅಲ್ಲಾಹನ ಅಸ್ತಿತ್ವದ ಬಗ್ಗೆ ಜ್ಞಾನ ಗಳಿಸಿ ಅವನನ್ನು ಗುರುತಿಸಲು ಇರುವ ಇನ್ನೊಂದು ಮಾರ್ಗ ಈ ಲೋಕದಲ್ಲಿ ಪ್ರಕಟವಾಗುತ್ತಿರುವ ಅವನ ಗುಣಗಳ ಬಗ್ಗೆ ಅಧ್ಯಯನ ನಡೆಸುವುದಾಗಿದೆ. ಈ ವಿಶಿಷ್ಟ ಗುಣಗಳು ಬೇರೆ ಕೃತ್ರಿಮ ದೇವರುಗಳಲ್ಲಿ ಕಾಣುವುದು ಅಸಂಭವ್ಯವಾಗಿದೆ. ಅಲ್ಲಾಹನ ವಿಶಿಷ್ಟ ಗುಣಗಳಲ್ಲಿ ಒಂದು, ಅವನು ವಸ್ತುಗಳ ಸೃಷ್ಟಿಕರ್ತನೆಂಬ ಗುಣವಾಗಿದೆ. ಎಂದರೆ ಪ್ರತಿಯೊಂದು ವಸ್ತುವನ್ನು ಅಲ್ಲಾಹನೇ ಸೃಷ್ಟಿಸಿರುವನು. ಸೃಷ್ಟಿ ಕಾರ್ಯದಲ್ಲಿ ಯಾರೂ ಅಲ್ಲಾಹನ ಸಹಭಾಗಿಯಾಗಿಲ್ಲ.

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ:

**"ಆಕಾಶಗಳನ್ನೂ ಭೂಮಿಯನ್ನೂ ಅವುಗಳ ಮಧ್ಯದಲ್ಲಿರುವ ಎಲ್ಲವನ್ನೂ ನಾವು ಯಥೋಚಿತವಾಗಿ ಮತ್ತು ನಿಗದಿತ ಅವಧಿಗಾಗಿ ಹೊರತು ಸೃಷ್ಟಿಸಿಲ್ಲ."** (46:4).

**"ಹೇಳು: ನೀವು ಅಲ್ಲಾಹನನ್ನು ಬಿಟ್ಟು ಆರಾಧಿಸುವವುಗಳ ಬಗ್ಗೆ ಯೋಚಿಸಿ ನೋಡಿದ್ದೀರಾ? ಭೂಮಿಯಲ್ಲಿ ಅವರು ಏನನ್ನು ಸೃಷ್ಟಿಸಿದ್ದಾರೆ? ಅಥವಾ ಆಕಾಶಗಳ ಸೃಷ್ಟಿಕಾರ್ಯದಲ್ಲಿ ಅವರದೇನಾದರೂ ಸಹಭಾಗಿತ್ವ ಇದೆಯೇ?"** (46:5)

ಅಲ್ಲಾಹನು ಪಂಥಾಹ್ವಾನ ನೀಡುತ್ತಿದ್ದಾನೆ. ವಸ್ತುಗಳನ್ನು ಸೃಷ್ಟಿಸುವುದರಲ್ಲಿ ಯಾರಾದರೂ ಅವನಿಗೆ ಸಹಭಾಗಿಗಳಾಗಿದ್ದರೆ ಅದರ ಬಗ್ಗೆ ವೈಚಾರಿಕ ಮತ್ತು ವಸ್ತುನಿಷ್ಠ ಸಾಕ್ಷ್ಯಾಧಾರಗಳಿಂದ ಸಾಬೀತುಗೊಳಿಸಿರಿ ಎಂದು.

ಇದೇ ರೀತಿ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಸಹ ಹೇಳಿದ್ದಾನೆ:

**"ಆಕಾಶಗಳನ್ನೂ ಭೂಮಿಯನ್ನೂ ಆರು ಹಂತಗಳಲ್ಲಿ ಸೃಷ್ಟಿಸಿದ ಅಲ್ಲಾಹನೇ ನಿಮ್ಮ ಪ್ರಭು, ಅನಂತರ ಅವನು (ಆಧಿಪತ್ಯದ) ಸಿಂಹಾಸನದಲ್ಲಿ ಆಸೀನನಾದನು. ರಾತ್ರಿಯಿಂದ ಹಗಲನ್ನು ಅವನು ಮುಚ್ಚುತ್ತಾನೆ. ಅದು ಹಗಲನ್ನು ಬೇಗ ಬೇಗನೆ ಬೆನ್ನಟ್ಟುತ್ತದೆ. ಸೂರ್ಯನನ್ನು, ಚಂದ್ರನನ್ನೂ, ನಕ್ಷತ್ರಗಳನ್ನೂ, ಅವನ ಆಜ್ಞೆಗೆ ವಿಧೇಯವಾದ ನೆಲೆಯಲ್ಲಿ ಅವನು ಸೃಷ್ಟಿಸಿದ್ದಾನೆ. ಸೃಷ್ಟಿಸುವ ಮತ್ತು ಆಜ್ಞಾಪಿಸುವ ಅಧಿಕಾರ ಅವನಿಗೆ ಸೇರಿದೆ."** (7:65).

ಅಲ್ಲಾಹನು ವಿಶ್ವದ ಸೃಷ್ಟಿಕರ್ತನಾಗಿರುವುದು ಮತ್ತು ಪ್ರತಿಯೊಂದರ ಮೇಲೆ ಅವನ ಆಜ್ಞೆ ಮತ್ತು ಆಡಳಿತಾಧಿಕಾರ ಸ್ಥಾಪಿಸಲ್ಪಟ್ಟಿರುವುದು ಅಲ್ಲಾಹನ ಬಗ್ಗೆ ಜ್ಞಾನ ಗಳಿಸಲು ಸಹಾಯಕವಾದ ಒಂದು ಮಹತ್ವಪೂರ್ಣವಾದ ಮಾರ್ಗವಾಗಿದೆ.

ಅಲ್ಲಾಹನನ್ನು ಗುರುತಿಸುವ ಮತ್ತು ಅವನ ಪರಿಚಯ ಗಳಿಸುವ ಇನ್ನೊಂದು ಮಾರ್ಗ ಪ್ರಾರ್ಥನೆಗಳು ಅಂಗೀಕರಿಸಲ್ಪಡುವುದಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

**"(ಹೇ ಪ್ರವಾದಿ,) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು) – ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ."** (2:187).

ಪ್ರಾರ್ಥನೆಗಳು ಅಂಗೀಕರಿಸಲ್ಪಡುವುದು ಜೀವಂತ ದೇವನ ಜೀವಂತ ವಾಸ್ತವಿಕತೆಯಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಒಂದು ಪದ್ಯದಲ್ಲಿ ಹೇಳುತ್ತಾರೆ:

**ತುಜೆ ದುನ್‌ಯಾ ಮೇ ಹೈ ಕಿಸ್‌ನೆ ಪುಕಾರಾ ಕೆ ಫಿರ್ ಖಾಲೀ ಗಯ ಕಿಸ್‌ಮತ್ ಕಾ ಮಾರಾ ತೂ ಫಿರ್ ಹೈ ಕಿಸ್ ಖದರ್ ಉಸ್‌ಕೋ ಸಹಾರಾ ಕೆ ಜಿಸ್ ಕಾ ತೂಹೀ ಹೈ ಸಬ್‌ಸೇ ಪ್ಯಾರಾ ಹುವಾಮೇಂ ತೇರೆ ಫರ್ಝೋಂ ಕ ಮುನಾದಿ ಫ ಸುಬ್‌ಹಾನಲ್ಲಝೀ ಅಖ್‌ಝಲ್ ಅಆದಿ.**

"ಲೋಕದಲ್ಲಿ ನಿನ್ನೊಂದಿಗೆ ಯಾರು ಬೇಡಿಕೊಂಡರೋ ಅಂತಹ ವ್ಯಕ್ತಿ ಬರಿಗೈಯಲ್ಲಿ ಮರಳುವ ಭಾಗ್ಯಹೀನನಾಗಲಿಲ್ಲ. ನೀನು ಅವನಿಗೆ ಎಷ್ಟು ಆಶ್ರಯ ನೀಡುವವನಾದೆ. ಅವನಿಗೆ ನೀನೇ ಆಗಿರುವೆ ಎಲ್ಲರಿಗಿಂತಲೂ ಪ್ರಿಯಕರ. ನಾನು ನಿನ್ನ ಅನುಗ್ರಹಗಳ ಬಗ್ಗೆ ಘೋಷಿಸುವವನಾಗುವೆನು. ನನ್ನ ಶತ್ರುಗಳನ್ನು ಹೀನೈಸಿದವನು ಪರಿಶುದ್ಧನಾಗಿರುವನು."

ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಸಹ ಹೇಳಿದ್ದಾರೆ: "ಪ್ರಾರ್ಥನೆ ನಿಷ್ಪ್ರಯೋಜಕವಾಗಿದೆ ಎಂದು ಅವಿವೇಕಿ ಯೋಚಿಸುತ್ತಾನೆ. ಆದರೆ ಪ್ರಾರ್ಥನೆಯ ಕಾರಣದಿಂದಲೇ ಸರ್ವಶಕ್ತನಾದ ಅಲ್ಲಾಹನು ಅವನನ್ನು ಅನ್ವೇಷಿಸುವವರಿಗೆ ಪ್ರಕಟವಾಗುತ್ತಾನೆ. **ಅನಲ್ ಖಾದಿರ್** – ನಾನು ಸರ್ವಶಕ್ತನಾಗಿದ್ದೇನೆ ಎಂಬ ಸಂದೇಶವಾಣಿಯನ್ನು ಅವರ ಹೃದಯಗಳಿಗೆ ಅವತೀರ್ಣಗೊಳಿಸುತ್ತಾನೆ ಎಂದು ಅವಿವೇಕಿಗಳಿಗೆ ತಿಳಿದಿರುವುದಿಲ್ಲ. ದೃಢವಿಶ್ವಾಸ ಹೊಂದುವ ಹಸಿವು ಮತ್ತು ದಾಹವನ್ನು ಹೊಂದಿ ತನ್ನ ಜೀವಿತದಲ್ಲಿ ಆಧ್ಯಾತ್ಮಿಕ ಪ್ರಕಾಶವನ್ನು ಆಶಿಸುವವನಿಗೆ ಪ್ರಾರ್ಥನೆಯೇ ಒಂದು ಮಾರ್ಗವಾಗಿದೆ. ಅದು ಅಲ್ಲಾಹನ ಅಸ್ತಿತ್ವದ ಬಗ್ಗೆ ದೃಢವಾದ ನಂಬಿಕೆ ದಯಪಾಲಿಸುತ್ತದೆ ಮತ್ತು ಎಲ್ಲ ಸಂದೇಹಗಳನ್ನು ದೂರ ಸರಿಸುತ್ತದೆ." (ಅಯ್ಯಾಮೆ ಸುಲ್‌ಹ್ ಪುಟ 10 ರೂಹಾನೀ ಖಝಾಇನ್ ಸಂಪುಟ 14 ಪುಟ 219).

ಹಝ್ರತ್ ಮಸೀಹ್ ಮೌಊದ್[ಅ] ಇನ್ನೊಂದು ಸ್ಥಳದಲ್ಲಿ ಹೇಳುತ್ತಾರೆ: ಪರೀಕ್ಷೆಗೊಳಗಾದ ಕಾಲದಲ್ಲಿ ಪ್ರಾರ್ಥನೆಗಳ ಆಶ್ಚರ್ಯಕರವಾದ ವೈಶಿಷ್ಟ್ಯಗಳು ಮತ್ತು ಅವುಗಳ ಪರಿಣಾಮಗಳು ಪ್ರಕಟವಾಗುತ್ತವೆ. ಸತ್ಯವೇನೆಂದರೆ ನಮ್ಮ ದೇವನು ಪ್ರಾರ್ಥನೆಗಳ ಮೂಲಕವೇ ಗುರುತಿಸಲ್ಪಡುತ್ತಾನೆ. (ಮಲ್‌ಫೂಝಾತ್ ಸಂಪುಟ 3 ಪುಟ 201).

ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಸಹ ಹೇಳಿದ್ದಾರೆ: "ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ತನ್ನನ್ನು ಗುರುತಿಸುವ ಚಿಹ್ನೆಯಾಗಿ

ಹೀಗೆ ಹೇಳಿದ್ದಾನೆ: **"ನಿಮ್ಮ ದೇವನು ಸಂಕಷ್ಟಕ್ಕೆ ಗುರಿಯಾದವನ ಪ್ರಾರ್ಥನೆಗಳನ್ನು ಆಲಿಸುತ್ತಾನೆ.** ಪವಿತ್ರ ಖುರ್‌ಆನ್ ವಚನ ಹೀಗಿದೆ: **ಅಮ್ಮನ್ ಯುಜೀಬುಲ್ ಮುಝ್‌ತರ್ರ ಇದಾ ದಆಹು – ಸಂಕಷ್ಟಕ್ಕೆ ಗುರಿಯಾದವನು ಪ್ರಾರ್ಥಿಸುವಾಗ ಅವನ ಪ್ರಾರ್ಥನೆಗೆ ಉತ್ತರವನ್ನು ನೀಡುವನು.**

"ಪ್ರಾರ್ಥನೆಗಳು ಅಂಗೀಕರಿಸಲ್ಪಡುವುದು ತನ್ನ ಅಸ್ತಿತ್ವದ ಚಿಹ್ನೆಯಾಗಿದೆ ಎಂದು ಅಲ್ಲಾಹನು ಹೇಳಿರುವಾಗ ಬುದ್ಧಿಶಾಲಿಯಾದ ಮನುಷ್ಯನು ಹೇಗೆ ತಾನೆ ಊಹಿಸಲು ಸಾಧ್ಯ – ಪ್ರಾರ್ಥನೆಯಿಂದ ಯಾವುದೇ ಸ್ಪಷ್ಟವಾದ ಪರಿಣಾಮ ಉಂಟಾಗುವುದಿಲ್ಲ; ಅದೊಂದು ಆಚಾರ ಮಾತ್ರವಾಗಿದೆ; ಅದರಲ್ಲಿ ಯಾವುದೇ ಆಧ್ಯಾತ್ಮಿಕ ವಿಷಯವಿಲ್ಲವೆಂದು. ನನ್ನ ಅಭಿಪ್ರಾಯವೇನೆಂದರೆ, ಸತ್ಯವಾದ ವಿಶ್ವಾಸ ಹೊಂದಿದ ಯಾರೂ ಪ್ರಾರ್ಥನೆ ಬಗ್ಗೆ ಇಂತಹ ಗೌರವ ರಾಹಿತ್ಯ ಖಂಡಿತವಾಗಿಯೂ ಹೊಂದಲಾರನು. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಭೂಮ್ಯಾಕಾಶಗಳ ಗುಣವಿಶೇಷಗಳ ಬಗ್ಗೆ ಚಿಂತಿಸುವ ಮೂಲಕ ಸತ್ಯದೇವನನ್ನು ಗುರುತಿಸುವ ಹಾಗೆ ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ಮೂಲಕ ಸಹ ಅಲ್ಲಾಹನ ಅಸ್ತಿತ್ವದ ಬಗ್ಗೆ ದೃಢ ವಿಶ್ವಾಸ ಉಂಟಾಗುತ್ತದೆ." (ಅಯ್ಯಾಮುಸ್ಸುಲ್‌ಹ್ ಪುಟ 28–29. ರೂಹಾನೀ ಖಝಾಇನ್ ಸಂಪುಟ 14 ಪುಟ 260).

ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಮೂಲಕ ಅರಬ್ ದೇಶದಲ್ಲಿ ಸಂಭವಿಸಿದ ಆಧ್ಯಾತ್ಮಿಕ ಕ್ರಾಂತಿಯ ಬಗ್ಗೆ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಮರುಭೂಮಿಗಳಿರುವ ಅರಬ್ ದೇಶದಲ್ಲಿ ಎಂತಹ ಅದ್ಭುತ ಘಟನೆ ಸಂಭವಿಸಿತೆಂದರೆ, ಮೃತರಾದ ಲಕ್ಷಗಟ್ಟಲೆ ಜನರು ಕೆಲವು ದಿನಗಳೊಳಗೆ ಜೀವಂತರಾದರು. ಅನೇಕ ಪೀಳಿಗೆಗಳಲ್ಲಿ ಬಿಗಡಾಯಿಸಿದ್ದ ಜನರು ದೈವಿಕವಾದ ವರ್ಣದಿಂದ ರಂಜಿತರಾದರು. ಅಂಧರಾದವರು ದೃಷ್ಟಿ ಹೊಂದಿದರು. ಮೂಗರ ನಾಲಗೆಗಳಿಂದ ದೈವಿಕ ಜ್ಞಾನ ಜಾರಿಗೊಂಡಿತು. ಲೋಕದಲ್ಲಿ ಥಕ್ಕನೆ ಎಂತಹ ಕ್ರಾಂತಿ ಸಂಭವಿಸಿತೆಂದರೆ ಅದರ ಮೊದಲು ಯಾವ ಕಣ್ಣು ಸಹ ಅಂತಹ ಕ್ರಾಂತಿಯನ್ನು ವೀಕ್ಷಿಸಿರಲಿಲ್ಲ. ಯಾವುದೇ ಕಿವಿ ಆಲಿಸಿರಲಿಲ್ಲ. ಅದು ಏನೆಂದು ಗೊತ್ತೇ? ಅಲ್ಲಾಹನಲ್ಲಿ ತಲ್ಲೀನನಾದ ಒಬ್ಬ ಮಹಾನುಭಾವನು ಅಂಧಕಾರಮಯ ರಾತ್ರಿಗಳಲ್ಲಿ ಮಾಡಿದ ಪ್ರಾರ್ಥನೆಗಳ ಪರಿಣಾಮವಾಗಿಯೇ ಲೋಕದಲ್ಲಿ ಪರಿವರ್ತನೆ ಸಂಭವಿಸಿತು. ಅದು ಎಂತಹ ಅದ್ಭುತಗಳನ್ನು ತೋರಿಸಿತೆಂದರೆ ಅದು ಆ ನಿರಕ್ಷರ ಬಲಹೀನ ವ್ಯಕ್ತಿಯಿಂದ ಸಂಭವಿಸುವುದು ಅಸಾಧ್ಯವೆಂದೇ ತೋರುತ್ತಿತ್ತು.

"ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತೇನೆ. ಪ್ರಾರ್ಥನೆಗಳ ಪರಿಣಾಮ ಜಲ ಮತ್ತು ಅಗ್ನಿಯ ಪರಿಣಾಮಗಳಿಗಿಂತ ಮಿಗಿಲಾಗಿವೆ. ಲೋಕದಲ್ಲಿ ಯಾವುದೇ ವಸ್ತು ಪ್ರಾರ್ಥನೆಗಿಂತ ಹೆಚ್ಚು ಮಹತ್ವಪೂರ್ಣ ಪ್ರಭಾವ ಬೀರಲಾರದು." (ಬರಕಾತುದ್ದುಆ ಪುಟ 8 ರೂಹಾನೀ ಖಝಾಇನ್ ಸಂಪುಟ 6 ಪುಟ 10–11).

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬರೆದ ಹಖೀಖತುಲ್ ವಹೀ ಗ್ರಂಥದಲ್ಲಿ 208 ದೃಷ್ಟಾಂತಗಳನ್ನು ಉಲ್ಲೇಖಿಸಲಾಗಿದೆ. ಅವುಗಳು ಅಲ್ಲಾಹನ ಅಸ್ತಿತ್ವದ ಜ್ಞಾನ ಪಡೆಯಲು ಮತ್ತು ಅವನ ಸಾಮೀಪ್ಯ ಪಡೆಯಲು ವೈಭವಶಾಲಿ ಮಾರ್ಗಗಳಾಗಿವೆ. ನೀವೆಲ್ಲರೂ ಈ ಗ್ರಂಥವನ್ನು ಆವಶ್ಯಕವಾಗಿ ಓದಿರಿ. ಇನ್‌ಶಾಅಲ್ಲಾಹ್ ಎಲ್ಲ ವಿಧ ಸಂಶಯಗಳು ದೂರವಾಗುವುವು. ಕೊನೆಯದಾಗಿ, ಹಝ್ರತ್ ಮಸೀಹ್ ಮೌಊದ್‌ರ[ಅ] ಗ್ರಂಥಗಳಿಂದ ಉಲ್ಲೇಖಗಳನ್ನು ನಿಮ್ಮ ಮುಂದಿರಿಸುತ್ತೇನೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಜೀವಂತನಾಗಿರುವ ಹಯ್ಯು ಮತ್ತು ಖಯ್ಯೂಮ್ ಆಗಿರುವ ಅಲ್ಲಾಹನು ನಮ್ಮೊಂದಿಗೆ ಮನುಷ್ಯನ ಹಾಗೆ ಮಾತನಾಡುತ್ತಾನೆ. ನಾವು ಒಂದು ವಿಷಯದ ಬಗ್ಗೆ ವಿಚಾರಿಸುವಾಗ ಮತ್ತು ಪ್ರಾರ್ಥಿಸುವಾಗ ಅಲ್ಲಾಹನು ಶಕ್ತಿಶಾಲಿ ಶಬ್ದಗಳಿಂದ ಉತ್ತರ ನೀಡುತ್ತಾನೆ. ಸಾವಿರ ಸಲ ಅವನನ್ನು ವಿಚಾರಿಸಿದರೂ ಅವನು ಉತ್ತರ ನೀಡದೆ ಇರುವುದಿಲ್ಲ. ಅವನು ಅದ್ಭುತಕರವಾದ ವಿಷಯಗಳನ್ನು ತಿಳಿಸುತ್ತಾನೆ. ಮತ್ತು ಅಸಾಧಾರಣ ಶಕ್ತಿಶಾಲಿ ದೃಶ್ಯಗಳನ್ನು ತೋರಿಸುತ್ತಾನೆ. ಯಾರನ್ನು ದೇವನೆಂದು ಹೇಳಬೇಕೋ ಅವನೇ ತಾನೆಂದು ದೃಢವಿಶ್ವಾಸ ಹುಟ್ಟಿಸುತ್ತಾನೆ. (ನಸೀಮ್ ದಅ್‌ವತ್ ಪುಟ 82 ರೂಹಾನೀ ಖಝಾಇನ್ ಸಂಪುಟ 19 ಪುಟ 448)

ಇದೇ ರೀತಿ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನಮ್ಮ ದೇವನಲ್ಲಿ ಅಸಂಖ್ಯಾತ ಅದ್ಭುತಗಳಿವೆ. ಸತ್ಯ ಮತ್ತು ನಿಷ್ಠೆಯಿಂದ ಅವನಿಗೆ ಸೇರಿದವರೇ ಅವುಗಳನ್ನು ಕಾಣುತ್ತಾರೆ. ಅವನ ಶಕ್ತಿಸಾಮರ್ಥ್ಯಗಳ ಬಗ್ಗೆ ದೃಢವಿಶ್ವಾಸ ಹೊಂದದವರಿಗೆ ಮತ್ತು ನಿಷ್ಠಾವಂತರಾಗಿರದವರಿಗೆ ಅವನು ಆ ಅದ್ಭುತಗಳನ್ನು ಪ್ರಕಟಿಸುವುದಿಲ್ಲ. ಒಬ್ಬ ದೇವನಿದ್ದಾನೆ, ಅವನು ಪ್ರತಿಯೊಂದು ವಸ್ತುವಿನ ಮೇಲೆ ಅಧಿಕಾರ ಹೊಂದಿದ್ದಾನೆ ಎನ್ನುವುದನ್ನು ಇಂದಿನ ತನಕ ತಿಳಿದುಕೊಳ್ಳದ ಮನುಷ್ಯನು ಎಷ್ಟು ಭಾಗ್ಯಹೀನನಾಗಿದ್ದಾನೆ! ನಮ್ಮ ಸ್ವರ್ಗ ನಮ್ಮ ದೇವನಾಗಿದ್ದಾನೆ. ನಮ್ಮ ಉನ್ನತ ರಸಾನುಭೂತಿಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು. ಎಲ್ಲ ಸೌಂದರ್ಯ ಅವನಲ್ಲಿ ಅಡಕವಾಗಿವೆ. ಜೀವಾರ್ಪಣೆ ಮಾಡುವುದರಿಂದ ಸಿಗುವುದಾದರೂ ಈ ಸಂಪತ್ತು ಗಳಿಸಲು ಅರ್ಹವಾಗಿದೆ. ತನ್ನ ಎಲ್ಲ ಅಸ್ತಿತ್ವವನ್ನು ಕಳಕೊಳ್ಳುವುದರಿಂದ ಗಳಿಸಬಹುದಾದರೂ ಈ ಮಾಣಿಕ್ಯ ಖರೀದಿಸಲು ಅರ್ಹವಾಗಿದೆ. ಹೇ ಅನುಗ್ರಹ ರಹಿತರೇ, ಈ ಕಾರಂಜಿಯ ಕಡೆಗೆ ಓಡಿರಿ. ಅದು ನಿಮ್ಮ ದಾಹವನ್ನು ನೀಗಿಸುವುದು. ಇದು ಜೀವಿತದ ಕಾರಂಜಿಯಾಗಿದೆ. ಅದು ನಿಮ್ಮನ್ನು ರಕ್ಷಿಸುವುದು. ನಾನೇನು ಮಾಡಲಿ, ಈ ಶುಭವಾರ್ತೆಯನ್ನು ಹೇಗೆ ಹೃದಯಗಳಲ್ಲಿ ಇರಿಸಲಿ. ಯಾವ ತಮಟೆ ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ. ನಿಮ್ಮ ದೇವ ಇವನೆಂದು ಆಲಿಸುವಂತೆ ಮಾಡಲಿ. ಜನರ ಕಿವಿಗಳು ಆಲಿಸುವಂತೆ ಮಾಡಲು ಯಾವ ಔಷಧಿಯಿಂದ ಚಿಕಿತ್ಸೆ ನಡೆಸಲಿ! (ಕಿಶ್ತಿನೂಹ್ ಪುಟ 21 ರೂಹಾನೀ ಖಝಾಇನ್ ಸಂಪುಟ19 ಪುಟ 21–22).

**(ಖಾದಿಯಾನ್‌ನಲ್ಲಿ ನಡೆದ ಜಲ್ಸಾ ಸಾಲಾನ {ವಾರ್ಷಿಕ ಸಮ್ಮೇಳನ}ದಲ್ಲಿ 23–12–2022ರಂದು ಮಾಡಿದ ಭಾಷಣ. ಭಾಷಾಂತರ: ಎಮ್. ಉಬೈದುಲ್ಲಾ)** ♦

**LOVE FOR ALL**
**HATRED FOR NONE**

# ಜಾಗತಿಕ ಅಹ್ಮದಿಯಾ ಜಮಾಅತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಬಹುಮಾನ್ಯ ಪೋಪ್ ಫ್ರಾನ್ಸಿಸ್‌ರಿಗೆ ಬರೆದ ಪತ್ರ





**Islamabad,**
**Sheephatch Lane,**
**Tilford Surrey**
**GU10 2AQ,**
**United Kingdom.**

**26 ಆಗಸ್ಟ್ 2022**

ಹೀಸ್ ಹೋಲಿನೆಸ್ ಪೋಪ್ ಫ್ರಾನ್ಸಿಸ್

ಯುವರ್ ಹೋಲಿನೆಸ್,

ಇಂದು ನಾವು ತೀವ್ರವಾದ ಮತ್ತು ಅತ್ಯಂತ ಅಪಾಯಕರವಾದ ಕಾಲದಲ್ಲಿದ್ದೇವೆ ಮತ್ತು ಲೋಕವು ಅನಿಶ್ಚಿತತೆ ಮತ್ತು ಉತ್ಕಟತೆಯಿಂದ ಆವರಿಸಲ್ಪಟ್ಟಿದೆಯಾದುದರಿಂದ ನಾನು ತಮಗೆ ಬರೆಯುತ್ತಿದ್ದೇನೆ. ಎರಡು ವರ್ಷಗಳಿಗಿಂತ ಹಿಂದೆ ಕೋವಿಡ್–19 ಮಹಾಮಾರಿ ಲೋಕವನ್ನು ಶರಣಾಗತವಾಗುವಂತೆ ಮಾಡಿದ್ದು ಎಲ್ಲ ದೇಶಗಳನ್ನೂ ಜನಾಂಗಗಳನ್ನೂ ಬಾಧಿಸಿದೆ. ಈ ಮಹಾಮಾರಿ ಈಗಲೂ ಬಾಧಿಸುತ್ತಿರುವಾಗ ಇನ್ನೊಂದು ಮಹಾವಿಪತ್ತು ಉಕ್ರೈನ್ ಸಂಘರ್ಷದ ರೂಪದಲ್ಲಿ ಸ್ಫೋಟಿಸಿದ್ದು ಅದರ ಪರಿಣಾಮ ಎಷ್ಟು ವಿನಾಶಕರವಾಗುವುದು ಮತ್ತು ಎಷ್ಟು ದೂರವ್ಯಾಪಕವಾಗುವುದು ಎಂದು ಯಾರಿಗೆ ತಿಳಿಯಲು ಸಾಧ್ಯವಿದೆ. ಪಶ್ಚಿಮ ದೇಶಗಳ ಮತ್ತು ಚೈನದ ಮಧ್ಯೆ ತೈವಾನ್‌ಗೆ ಸಂಬಂಧಿಸಿದ ಬಿಗುವಿನ ಪರಿಸ್ಥಿತಿಗಳು ಇತ್ತೀಚೆಗಿನ ವಾರಗಳಲ್ಲಿ ಲೋಕದ ಭೌಗೋಳಿಕ ಸ್ಥಿರತೆಗೆ ಕುಂದುಂಟು ಮಾಡಿವೆ.

ನಿರಾಕರಿಸಲಾಗದ ಸತ್ಯವೇನೆಂದರೆ, ಲೋಕದ ಮಹಾಶಕ್ತಿಶಾಲಿ ದೇಶಗಳು ಯುದ್ಧಪೀಡಿತ ಬಡ ದೇಶಗಳ ದುರ್ದೆಶೆಯನ್ನು ಆಯುಧಗಳ ಮಾರಾಟ ಮೂಲಕ ದೀರ್ಘಕಾಲದಿಂದ ಶೋಷಣೆ ಮಾಡುತ್ತಿರುವಾಗ ಅಂತಹ ಪರಿಸ್ಥಿತಿ ಅಭಿವೃದ್ಧಿ ಹೊಂದಿದ ದೇಶಗಳಲ್ಲೂ ಸಂಭವಿಸಬಹುದೆಂದು ಎಂದೂ ಊಹಿಸಿರಲಿಲ್ಲ. ಅವರು ತಮ್ಮ ದುರಹಂಕಾರದ ಕಾರಣದಿಂದ ಅಂಧರಾಗಿದ್ದರು. ಆದರೆ ಉಕ್ರೈನ್ ಸಂಘರ್ಷ ಅವರ ಕಣ್ಣುಗಳನ್ನು ತೆರೆದಿವೆ. ಅನ್ಯಾಯಗಳು ಮತ್ತು ದೌರ್ಜನ್ಯಗಳು ಲೋಕದ ಇತರ ಪ್ರದೇಶಗಳಲ್ಲಿ ಸಂಭವಿಸುತ್ತಾ ಇದ್ದದು ಶೂನ್ಯತೆಯಲ್ಲಿ ಅಲ್ಲ. ಅವುಗಳು ಲೋಕದ ಇತರ ಭಾಗಗಳಿಗೂ ವ್ಯಾಪಿಸಬಲ್ಲವು ಎಂಬ ಸತ್ಯವನ್ನು ಅವರು ಮನವರಿಕೆ ಮಾಡುವಂತಾಗಿದೆ.

ಚರಿತ್ರೆ ಹೀಗೆ ಸಾಕ್ಷ್ಯ ನೀಡಿದೆ: ಮಾನವ ರಚಿತ ಮಹಾವಿಪತ್ತುಗಳು ಮತ್ತು ನೈಸರ್ಗಿಕ ವಿಪತ್ತುಗಳು ಸೃಷ್ಟಿಕರ್ತನಾದ ದೇವನ ಕಡೆಗೆ ಬೆನ್ನು ಹಾಕಿದ ದೇಶಗಳಲ್ಲಿ ಮತ್ತು ಕಾಲಗಳಲ್ಲಿ ಸಂಭವಿಸಿವೆ. ಸ್ವಲ್ಪ ಕಾಲದ ಹಿಂದೆ ತಾವು ನೀಡಿದ ಒಂದು ಭಾಷಣ ನನ್ನ ಗಮನಕ್ಕೆ ಬಂದಿದೆ. ಆ ಭಾಷಣದಲ್ಲಿ ತಾವು ತಮ್ಮ ಭಯವನ್ನು ಹೀಗೆ ಸೂಚಿಸಿರುವಿರಿ – ತಾವು ದೇವನೊಂದಿಗೆ ಅವನು ಮನುಷ್ಯರ ವರ್ತನೆಗಳಿಂದ ತೃಪ್ತನಾಗಿರುವನೋ ಎಂದು ಕೇಳಿದರೆ ದೇವನು ಅದರ ಬಗ್ಗೆ ತನ್ನ ಅತೃಪ್ತಿಯನ್ನು ಸೂಚಿಸುವನು ಎಂದು. ತಾವು ಹೀಗೆಯೂ ನಿಮ್ಮ ನಂಬಿಕೆಯನ್ನು ಸೂಚಿಸಿರುವಿರಿ: ವ್ಯಾಪಕವಾಗಿರುವ ನೈಸರ್ಗಿಕ ದುರಂತಗಳಿಗೆ ಕಾರಣ ಇಂದಿನ ಲೋಕದ ತಪ್ಪಾದ ಕರ್ಮಗಳಿಗೆ ಮತ್ತು ನಿರ್ಲಕ್ಷ್ಯತೆಗಳಿಗೆ ಪ್ರತಿಕ್ರಿಯೆ ರೂಪದಲ್ಲಿದೆ ಎಂದು. ನಾನು ತಮ್ಮೊಂದಿಗೆ ಸಂಪೂರ್ಣವಾಗಿ ಸಹಮತ ಹೊಂದಿದ್ದೇನೆ. ತಮ್ಮ ಈ ಸಂದೇಶ ಲೋಕದಾದ್ಯಂತ ಬಿತ್ತರಿಸಲ್ಪಡಬೇಕಾದುದು ಮತ್ತು ಆಲಿಸಲ್ಪಡಬೇಕಾದುದು ಇಂದಿನ ಕಾಲದಲ್ಲಿ ಆವಶ್ಯಕವಾಗಿದೆ ಎಂದು ನಾನು ಭಾವಿಸುತ್ತೇನೆ. ಸಂಭಾವ್ಯ ವಿನಾಶ ಮತ್ತು ದುರವಸ್ಥೆಗಳಿಂದ ರಕ್ಷಿಸಿಕೊಳ್ಳಲು ಮಾನವರು ತುರ್ತಾಗಿ ಸರ್ವಶಕ್ತನಾದ ದೇವನ ಕಡೆಗೆ ತಿರುಗುವುದು ಆವಶ್ಯಕವಾಗಿದೆ ಎಂದು ನಾನು ದೃಢವಾಗಿ ನಂಬುತ್ತೇನೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಎಂಬ ಧಾರ್ಮಿಕ ಜಾಗತಿಕ ಸಂಸ್ಥೆಯ ಸರ್ವೋನ್ನತ ನೇತರನಾದ ನಾನು ತಮಗೆ ತಿಳಿಸಲು ಇಚ್ಛಿಸುತ್ತೇನೆ, ಅಹ್ಮದಿಯಾ ಮುಸ್ಲಿಮ್ ಸಂಘಟನೆ 1889ರಲ್ಲಿ ಇಂಡಿಯಾ ದೇಶದ ಚಿಕ್ಕ ಗ್ರಾಮವಾಗಿರುವ ಖಾದಿಯಾನ್‌ನಲ್ಲಿ ಸ್ಥಾಪಿಸಲ್ಪಟ್ಟಿತು.

ನಮ್ಮ ಸಂಘಟನೆಯ ಸ್ಥಾಪಕರಾಗಿದ್ದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೀಗೆ ವಾದಿಸಿದ್ದರು: ಮಾನವರನ್ನು ಅವರ

ಸೃಷ್ಟಿಕರ್ತನ ಕಡೆಗೆ ಮರಳಿ ತರಲು ಮತ್ತು ಮಾನವರು ಒಬ್ಬರಿನ್ನೊಬ್ಬರ ಬಗ್ಗೆ ಹೊಂದಿರುವ ಹೊಣೆಗಾರಿಕೆಗಳನ್ನು ನೆರವೇರಿಸುವ ಬಗ್ಗೆ ಅವರೆಲ್ಲರ ಗಮನ ಹರಿಸಲು ಸರ್ವಶಕ್ತನಾದ ಅಲ್ಲಾಹನು ತನ್ನನ್ನು ನಿಯೋಜಿಸಿದ್ದಾನೆ. ಎಲ್ಲ ರೀತಿಯ ಅವ್ಯವಸ್ಥೆ, ಕ್ರೌರ್ಯ ಮತ್ತು ಅನ್ಯಾಯಗಳನ್ನು ಕೊನೆಗೊಳಿಸಿ ಪರಸ್ಪರ ಹಕ್ಕುಗಳನ್ನು ಈಡೇರಿಸಿ ಕೊಡಬೇಕೆಂದೂ ಆ ಮೂಲಕ ಸರ್ವಶಕ್ತನಾದ ದೇವನ ಕ್ರೋಧದಿಂದ ರಕ್ಷಿಸಿಕೊಳ್ಳಬೇಕೆಂದೂ ನಿರಂತರವಾಗಿ ಅವರು ಉಪದೇಶಿಸುತ್ತಿದ್ದರು.

ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೀಗೆ ಹೇಳಿದ್ದರು: ವಿಶ್ವಾಸ ಮತ್ತು ಅವಿಶ್ವಾಸಕ್ಕೆ ಸಂಬಂಧಿಸಿದ ವಿಷಯ ಪರಲೋಕದಲ್ಲಿ ತೀರ್ಮಾನಿಸಲ್ಪಡುವುದು. ಈಗ ಸಂಭವಿಸುವ ನೈಸರ್ಗಿಕ ವಿಪತ್ತುಗಳು ಅಥವಾ ಹಿಂದಿನ ಕೋಮುಗಳನ್ನು ನಾಶಗೊಳಿಸಿದ ನೈಸರ್ಗಿಕ ವಿಪತ್ತುಗಳು ಜನರ ಅವಿಶ್ವಾಸದ ಕಾರಣದಿಂದ ಮಾತ್ರ ಸಂಭವಿಸಿದವುಗಳಲ್ಲ. ಆ ಕೋಮುಗಳು ಅವರ ದುರಹಂಕಾರ, ಅತಿರೇಕ ವರ್ತನೆ ಮತ್ತು ದೌರ್ಜನ್ಯಗಳ ಕಾರಣದಿಂದ ನಾಶಗೊಳಿಸಲ್ಪಟ್ಟವು. ಫರೋವ ಕೂಡ ನಾಶವಾದುದು ಅವನ ಅವಿಶ್ವಾಸದ ಕಾರಣದಿಂದಲ್ಲ. ಅವನ ಅನ್ಯಾಯ ಮತ್ತು ಬರ್ಬರ ವರ್ತನೆಗಳ ಕಾರಣದಿಂದ ಅವನು ನಾಶಗೊಳಿಸಲ್ಪಟ್ಟನು.

ನಾನು ತಮಗೆ 2020ರಲ್ಲಿ ಬರೆದ ಹಾಗೆಯೇ ದಿಗಂತದಲ್ಲಿ ಬೆದರಿಸುವ ರೂಪದಲ್ಲಿ ಲೋಕದಲ್ಲಿ ಇನ್ನಷ್ಟು ಯಾತನೆ ಮತ್ತು ಕಲಹವನ್ನು ನಾನು ಕಾಣುತ್ತಿದ್ದೇನೆ. ಅಭೂತಪೂರ್ವ ಸಾಂಪತ್ತಿಕ ಮತ್ತು ಆರ್ಥಿಕ ಪ್ರಯಾಸಗಳು, ಮಹಾಮಾರಿಯ ಕಾರಣದಿಂದಲೂ ಇಂದಿನ ಭೌಗೋಲಿಕ ಬಿಗುವುಗಳಿಂದಲೂ ಲೋಕದ ದೇಶಗಳ ಮೇಲೂ ಜನರ ಮೇಲೂ ಬೆದರಿಕೆ ಒಡ್ಡುತ್ತಿದೆ. ಈ ಕಾರಣದಿಂದ ವಿವಿಧ ದೇಶಗಳ ಒಳಗೆ ಮತ್ತು ದೇಶಗಳ ಮಧ್ಯೆ ಪರಸ್ಪರ ಇನ್ನಷ್ಟು ಸಂಘರ್ಷ ಮತ್ತು ಒಡಕು ಸ್ಪಷ್ಟವಾದ ಸಂಭಾವ್ಯತೆಯಾಗಿದೆ. ಆದುದರಿಂದ ಜಾಗತಿಕ ಶಾಂತಿ ಮತ್ತು ಭದ್ರತೆಯಲ್ಲಿ ಬಿರುಕು ಮುಂದಿನ ತಿಂಗಳುಗಳಲ್ಲಿ ಮತ್ತು ವರ್ಷಗಳಲ್ಲಿ ಸಂಭವಿಸಬಹುದೆಂದು ನಾನು ಭಯಪಡುತ್ತೇನೆ.

ರೋಮನ್ ಕ್ಯಾಥಲಿಕ್ ಚರ್ಚ್‌ನ ಜಾಗತಿಕ ನಾಯಕರಾದ ತಾವು ಬಹಳ ಪ್ರಭಾವಶಾಲಿ ಆಗಿರುವಿರಿ. ಲೋಕದ ರಾಜಕೀಯ ನಾಯಕರಿಗೆ ಮತ್ತು ಜನರಿಗೆ ಮಾರ್ಗದರ್ಶನ ನೀಡಬೇಕೆಂದು ನಾನು ತಮ್ಮೊಂದಿಗೆ ಪ್ರಾಮಾಣಿಕತೆಯಿಂದ ಅಪೇಕ್ಷಿಸುತ್ತೇನೆ. ಅವರು ತಮ್ಮ ಸೃಷ್ಟಿಕರ್ತನನ್ನು ಗುರುತಿಸಿ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡುವ ಬಗ್ಗೆ ತುರ್ತು ಮತ್ತು ಅತ್ಯಾವಶ್ಯಕ ಹೊಣೆಗಾರಿಕೆ ಅವರಿಗಿದೆ ಎಂಬುದರ ಬಗ್ಗೆ. ಆ ಮೂಲಕ ತೃತೀಯ ಜಾಗತಿಕ ಮಹಾಯುದ್ಧದ ಮಹಾವಿನಾಶಗಳಿಂದ ಮಾನವರನ್ನು ಸಂರಕ್ಷಿಸಬಹುದು.

ಇಂದಿನ ಕಾಲದಲ್ಲಿ ಧಾರ್ಮಿಕ ನಾಯಕರ ಅಗ್ರಗಣ್ಯ ಹೊಣೆಗಾರಿಕೆ ಪ್ರಚಲಿತ ಕಾಲದಲ್ಲಿ ಲೋಕದ ಅಸ್ಥಿರತೆ ಮತ್ತು ವಿಪತ್ತುಗಳು ಮಾನವರಿಗೆ ನೀಡಲಾಗುವ ಮುನ್ನೆಚ್ಚರಿಕೆಯಾಗಿದೆ ಎಂಬುದರ ಬಗ್ಗೆ ಮಾನವರಿಗೆ ಮಾರ್ಗದರ್ಶನ ನೀಡುವುದಾಗಿದೆ. ನನ್ನ ನಂಬಿಕೆ ಏನೆಂದರೆ ಮಾನವರ ರಕ್ಷಣೆಗಿರುವ ಏಕಮಾರ್ಗ ಅತ್ಯಂತ ವಿನೀತರಾಗಿ ನಮ್ಮ ಸೃಷ್ಟಿಕರ್ತನ ಮುಂದೆ ಬಾಗಿಕೊಂಡು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವುದಾಗಿದೆ. ಹಾಗೆ ಮಾಡಿದರೆ ಲೋಕವು ಪ್ರಚಲಿತ ಹತಾಶ ಸ್ಥಿತಿಯಿಂದ ಶಾಂತಿ, ಪ್ರೀತಿ ಮತ್ತು ಕಾರುಣ್ಯದ ಧಾಮವಾಗಿ ಪರಿವರ್ತಿಸಲ್ಪಡುವುದು.

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ನಾಯಕನಾಗಿ ನಾನು ಪ್ರತಿಜ್ಞೆ ಮಾಡುತ್ತೇನೆ, ಲೋಕವನ್ನು ವಿನಾಶದಿಂದ ರಕ್ಷಿಸಲು ಮತ್ತು ಮಾನವರನ್ನು ತಮ್ಮ ಸೃಷ್ಟಿಕರ್ತನನ್ನು ಗುರುತಿಸುವಂತೆ ಮಾಡುವ ಎಲ್ಲ ಪ್ರಯತ್ನಗಳಲ್ಲಿ ಭಾಗವಹಿಸಲು ನಮ್ಮ ಸಂಘಟನೆಯವರೆಲ್ಲ ಸದಾ ಸಿದ್ಧರಾಗಿರುತ್ತೇವೆಂದು.

ಲೋಕದ ಶಾಂತಿ ಮತ್ತು ಸಮೃದ್ಧಿಗೋಸ್ಕರ ಮಾಡುವ ಎಲ್ಲ ಪ್ರಯತ್ನಗಳನ್ನು ಸರ್ವಶಕ್ತನಾದ ಅಲ್ಲಾಹನು ಅನುಗ್ರಹಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಎಲ್ಲ ಧರ್ಮಗಳ ನಾಯಕರು ಮತ್ತು ಜನರು ಈ ಶ್ರೇಷ್ಠ ಉದ್ದೇಶಕ್ಕೋಸ್ಕರ ತಮ್ಮ ವಿಶ್ವಾಸಗಳಲ್ಲಿರುವ ವ್ಯತ್ಯಾಸಗಳನ್ನು ಬದಿಗೆ ಸರಿಸಿ ಮಾನವರ ಮೋಕ್ಷಕ್ಕೋಸ್ಕರ ಕಾರ್ಯನಿರತರಾಗಬೇಕು. ನಿಶ್ಚಯವಾಗಿ ಇದು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಉದ್ದೇಶಲಕ್ಷ್ಯವಾಗಿದೆ ಮತ್ತು ಯಾವಾಗಲೂ ನಾವು ಈ ನಿಟ್ಟಿನಲ್ಲಿ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವೆವು.

ಸರ್ವಶಕ್ತನಾದ ಅಲ್ಲಾಹನು ಲೋಕಕ್ಕೆ ವಿವೇಕವನ್ನೂ ತಿಳುವಳಿಕೆಯನ್ನೂ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಆಮೀನ್.

ಶುಭಾಶಯಗಳೊಂದಿಗೆ ಮತ್ತು ಪ್ರಾರ್ಥನೆಗಳೊಂದಿಗೆ.

ಪ್ರಾಮಾಣಿಕವಾಗಿ ನಿಮ್ಮವನಾದ,

ಮಿರ್ಝಾ ಮಸ್‌ರೂರ್ ಅಹ್ಮದ್

ಖಲೀಫತುಲ್ ಮಸೀಹ್ V

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನೇತಾರ.

# ನೀನು ಮಾಡು – ಮಾಡಬೇಡ

♦ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್[ರ]

## 7 – ಧರ್ಮಕ್ಕೆ ಸಂಬಂಧಿಸಿದ ವಿಷಯಗಳು

101. ನೀನು ಅಲ್ಲಾಹನ ಅನುಗ್ರಹಗಳನ್ನು ನೆನಪಿಸಿ ಅವನೊಂದಿಗೆ ಪ್ರೀತಿಯನ್ನು ವರ್ಧಿಸು.

102. ನೀನು ನೀರನ್ನು ಬಿಸ್ಮಿಲ್ಲಾಹ್ ಎಂದು ಹೇಳಿ ಕುಡಿಯಲು ಪ್ರಾರಂಭಿಸಿ ನೀರು ಕುಡಿದ ನಂತರ ಅಲ್‌ಹಮ್‌ದುಲಿಲ್ಲಾಹ್ ಎಂದು ಹೇಳು.

103. ನಿನ್ನ ಪ್ರತಿಯೊಂದು ಕೆಲಸ ಪ್ರಾಮಾಣಿಕವಾಗಿರಬೇಕು.

104. ಹೇ ಮಹಿಳೆ, ನಿನ್ನ ಸೌಂದರ್ಯಕ್ಕಿಂತ ನಿನ್ನ ಸ್ವಭಾವಗುಣಗಳು ಮತ್ತು ನಿನ್ನ ಸ್ವಭಾವಗುಣಗಳಿಗಿಂತ ನಿನ್ನ ಧರ್ಮನಿಷ್ಠೆ ಅಲ್ಲಾಹನ ಸನ್ನಿಧಿಯಲ್ಲಿ ಸ್ಥಾನ ಪಡೆಯುತ್ತದೆ.

105. ನೀನು ನಿನ್ನ ತಂದೆ ತಾಯಂದಿರೊಂದಿಗೆ ಕಠಿಣವಾಗಿ ವರ್ತಿಸಬೇಡ. "ಉಫ್" (ಛೀ) ಎಂದು ಕೂಡ ಹೇಳಬೇಡ.

106. ನೀನು ಅಝಾನ್ ಆಲಿಸಿದ ಕೂಡಲೆ ನಮಾಝ್‌ಗೋಸ್ಕರ ಸಿದ್ಧತೆ ನಡೆಸು.

107. ನೀನು ಇಶಾ ನಮಾಝ್ ಮಾಡದೆ ನಿದ್ರಿಸಬಾರದು.

108. ನೀನು ಜೀವಂತವಾಗಿರುವ ಯಾವುದನ್ನೂ ಬೆಂಕಿಯಲ್ಲಿ ಸುಡಬೇಡ.

109. ನೀನು ಕೇವಲ ಸಾಮಗ್ರಿಗಳ ಮೇಲೆ ಮಾತ್ರ ಭರವಸೆ ಇಡಬೇಡ.

110. ನೀನು ನಿನ್ನ ಎಲ್ಲ ಬೇಡಿಕೆಗಳನ್ನು ಅಲ್ಲಾಹನ ಮುಂದಿಡು.

111. ನೀನು ಅಲ್ಲಾಹನ ಹೊರತು ಬೇರೆ ಯಾರೊಂದಿಗೂ ಪ್ರಾರ್ಥಿಸಬೇಡ.

112. ನೀನು ಅಲ್ಲಾಹನ ಹೊರತು ಬೇರೆ ಯಾರನ್ನೂ ಆರಾಧಿಸಬೇಡ.

113. ನೀನು ಅಲ್ಲಾಹನು ಅದ್ವಿತೀಯನೂ ಸಮಾನತೆ ಇಲ್ಲದವನೂ ಎಂದು ದೃಢವಿಶ್ವಾಸ ಹೊಂದು.

114. ನೀನು ಶರೀಅತಿಗೆ ವಿರುದ್ಧವಾದ ಆಚಾರಗಳನ್ನು ಅನುಷ್ಠಿಸಬೇಡ.

115. ನೀನು ದೇವತೆ, ಭೂತ, ಪ್ರೇತ, ಮಾಂತ್ರಿಕ ಮತ್ತು ಮಂತ್ರವಾದ ಮೊದಲಾದವುಗಳಲ್ಲಿ ನಂಬಿಕೆ ಇರಿಸಬೇಡ.

116. ನೀನು ನಮಾಝ್ ಮಾಡುವವರ ಮುಂದಿನಿಂದ ಹಾದು ಹೋಗಬೇಡ.

117. ನೀನು ಯಾರ ವಿರುದ್ಧವಾದರೂ ಪ್ರಾರ್ಥಿಸಬೇಡ.

118. ಮಸ್‌ಜಿದ್‌ಗೆ ಹೋಗುವಾಗ ನೀನು ಯಾವ್ಯಾವ ಒಳಿತುಗಳ ಪಾರಿತೋಷಕಗಳನ್ನು ಅಲ್ಲಾಹನ ಸನ್ನಿಧಿಗೆ ಒಯ್ಯುತ್ತಿರುವೆ ಎಂದು ಯೋಚಿಸು.

119. "ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದು" ಒಳಿತಿನ ಅರ್ಥವಾಗಿದೆ ಎಂದು ತಿಳಿದುಕೋ.

120. ನೀನು ಅಲ್ಲಾಹನನ್ನು ಅವನ ಗುಣಗಳ ಪ್ರಕಟಣೆಯನ್ನು ಕಂಡು ಗುರುತಿಸು. ಏಕೆಂದರೆ ಅವನ ಅಸ್ತಿತ್ವ ಹೇಗಿದೆ ಎಂದು ನಿನಗೆ ತಿಳಿಯದು.

121. ಪವಿತ್ರ ಖುರ್‌ಆನ್ ಪರಿಪೂರ್ಣವಾದ ಅಂತಿಮ ಶರೀಅತ್ ಗ್ರಂಥವೆಂದು ನೀನು ನಂಬು.

122. ಪ್ರತಿಯೊಂದು ದೇಶ ಮತ್ತು ಜನಾಂಗದಲ್ಲಿ ಪ್ರವಾದಿಗಳು ಬರುತ್ತಾ ಇದ್ದರು ಎಂದು ನಂಬು.

123. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠರು ಎಂದು ನಂಬು.

124. ಅಲ್ಲಾಹನ ಸಂದೇಶವಾಣಿಯು ಅವತೀರ್ಣವಾಗುವ ಬಾಗಿಲು ಯಾವಾಗಲೂ ತೆರೆದಿರುವುದು ಎಂದು ನಂಬು.

125. ಹಝ್ರತ್ ಮುಹಮ್ಮದ್ ಪೈಗಂಬರರ[ಸ] ನಂತರ ಅವರನ್ನು ಅನುಸರಿಸುವಂತಹ ಉಮ್ಮತೀ ನಬಿ (ಶಿಷ್ಯ ಪ್ರವಾದಿ) ಯಾವುದೇ ಹೊಸ ಶರೀಅತ್ ಇಲ್ಲದೆ ಬರಬಹುದೆಂದು ನಂಬು.

126. ಅಲ್ಲಾಹನ ಹೊರತು ಯಾರಿಗೂ ಯಾರ ಪಾಪವನ್ನೂ ಕ್ಷಮಿಸಲು ಸಾಧ್ಯವಿಲ್ಲವೆಂದು ತಿಳಿದುಕೊಳ್ಳು.

127. ಖಾದಿಯಾನಿನ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಮಸೀಹ್ ಮೌಊದ್ ಎಂದೂ ಇಮಾಮ್ ಮಹ್‌ದೀ ಎಂದು ನಂಬು.

128. ನಿನಗೆ ಯಾವುದಾದರೂ ವಿಷಯದ ಬಗ್ಗೆ ಸಂಶಯ ತಲೆದೋರಿದರೆ ಅಲ್ಲಾಹನೊಂದಿಗೆ ಪ್ರಾರ್ಥಿಸಿ ನಿನ್ನ ಆತ್ಮದೊಂದಿಗೆ ಕೇಳು. ಅದು ಸಹ ನಿನಗೆ ಉತ್ತರ ನೀಡುವುದು.

129. ನೀನು ನಿನ್ನ ದುರಾಲೋಚನೆಗಳನ್ನು "ಲಾಹೌಲಾ" ಪ್ರಾರ್ಥನೆ ಮತ್ತು "ಅಊಧುಬಿಲ್ಲಾಹಿ" ಎಂದು ಪ್ರಾರಂಭಿಸುವ ಪ್ರಾರ್ಥನೆ ಮೂಲಕ ದೂರಸರಿಸು.

130. ಅಲ್ಲಾಹ್ ಮತ್ತು ನಿನ್ನ ಸಂಬಂಧಿಕರು ಇವರಿಬ್ಬರಲ್ಲಿ ಒಬ್ಬರ

ಬಗ್ಗೆ ಆಯ್ಕೆ ಮಾಡಬೇಕಾಗಿ ಬಂದರೆ ಅಲ್ಲಾಹನಿಗೆ ಆದ್ಯತೆ ನೀಡು.

131. ನೀನು ಅಲ್ಲಾಹನನ್ನು ದೃಷ್ಟಾಂತಗಳ ಮೂಲಕ ಗುರುತಿಸು; ಕೇವಲ ವೈಚಾರಿಕ ಸಾಕ್ಷ್ಯಾಧಾರಗಳಿಂದ ಮಾತ್ರವಲ್ಲ.

132. ನೀನು ಅಲ್ಲಾಹನ ವಿಧಿನಿರ್ಣಯವನ್ನು ಅಂಗೀಕರಿಸಲು ಕಲಿ. ಹಾಗೆ ಮಾಡಿದರೆ ನೀನು ಅಲ್ಲಾಹನ ಪ್ರೀತಿ ಗಳಿಸುವೆ.

133. ನೀನು ಅಲ್ಲಾಹನ ಆಜ್ಞೆ ಪಾಲಿಸುವಾಗ ಅವನು ನೀಡಿದ ರಿಯಾಯಿತಿಗಳನ್ನು ಸಂತೋಷದಿಂದ ಅಂಗೀಕರಿಸು.

134. ನೀನು ನಿನ್ನ ಪಾಪಗಳಿಗಿಂತ ಅಲ್ಲಾಹನ ಕ್ಷಮೆಯು ಬಹಳ ಹೆಚ್ಚು ವಿಸ್ತಾರವಾಗಿದೆ ಎಂದು ದೃಢವಾಗಿ ನಂಬು.

135. ನೀನು ಅಲ್ಲಾಹನ ಆಜ್ಞೆಗಳನ್ನು ಉಲ್ಲಂಘಿಸುವುದು ನಿನ್ನ ಆತ್ಮವನ್ನು ನಾಶಮಾಡುವ ವಿಷವೆಂದು ತಿಳಿದುಕೊಳ್ಳು.

136. ನೀನು ಅಲ್ಲಾಹನನ್ನು ಸಂದರ್ಶಿಸಲು ಬಯಸುವಿಯಾದರೆ ಅತ್ಯಂತ ಅನುಕೂಲ ಸಮಯ ರಾತ್ರಿಯ ಅಂತಿಮ ಭಾಗವಾಗಿದೆ.

137. ಪ್ರಾರ್ಥನೆ ಅಂಗೀಕರಿಸಲ್ಪಡಲು ಅತ್ಯಂತ ಮುಖ್ಯ ಮಾರ್ಗ ಭಯಭಕ್ತಿ (ತಖ್ವಾ) ಆಗಿದೆ.

138. ನೀನು ಅಲ್ಲಾಹನ ಅನುಗ್ರಹಗಳನ್ನು ಎಣಿಸಿ ಅವನೊಂದಿಗೆ ಪ್ರೀತಿಯಲ್ಲಿ ತಲ್ಲೀನನಾಗು.

139. ಅಲ್ಲಾಹನು ಎಲ್ಲ ಕಡೆ ಹಾಜರಿರುವವನೂ ಎಲ್ಲವನ್ನೂ ನೋಡುತ್ತಿರುವವನೂ ಆಗಿರುವನೆಂದು ನೀನು ದೃಢವಿಶ್ವಾಸ ಹೊಂದು.

## ಪ್ರತಿಭೆಗಳು



**ಮಂಜೇಶ್ವರ** ಜಮಾಅತಿನ ಎಂ.ಪಿ. ಮೂಸಾ ಸಾಹಿಬ್ ಮತ್ತು ಫಹ್‌ಮಿದ ಸಾಹಿಬ ದಂಪತಿಯ ಪುತ್ರಿ ಎಂ.ಪಿ. ಮಲೀಹ ಫಾತಿಮ 1st P.U ಪರೀಕ್ಷೆಯಲ್ಲಿ 99.5% ಅಂಕ ಪಡೆದು ಉತ್ತೀರ್ಣಳಾಗಿದ್ದಾಳೆ. ಮಾಶಾ ಅಲ್ಲಾಹ್.



**ಪಯಂಗಾಡಿ** ಜಮಾಅತಿನ ಶಫೀಕ್ ಅಹ್ಮದ್ ಮತ್ತು ಫಾತಿಮತ್ ಝುಹ್ರ ದಂಪತಿಯ ಪುತ್ರಿ ಶಹಾಮ ಪರ್ವೀನ್ (ಯುಗರಶ್ಮಿ ಸಂಪಾದಕರ ಮೊಮ್ಮಗಳು) 1st P.U ಪರೀಕ್ಷೆಯಲ್ಲಿ 97.7% ಅಂಕ ಪಡೆದು ಉತ್ತೀರ್ಣಳಾಗಿದ್ದಾಳೆ. ಮಾಶಾ ಅಲ್ಲಾಹ್.






**ಕೂಡಾಳಿ** ಜಮಾಅತಿನ ಅನಸ್ ಅಹ್ಮದ್ ಮತ್ತು ಖಾನಿತ ಸಿದ್ದೀಖ ದಂಪತಿಯ ಪುತ್ರ ಇಹಾನ್ ಇಬ್ರಾಹಿಂ (ಯುಗರಶ್ಮಿ ಸಂಪಾದಕರ ಮೊಮ್ಮಗ) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 95% ಅಂಕ ಪಡೆದು ಉತ್ತೀರ್ಣನಾಗಿದ್ದಾನೆ. ಮಾಶಾ ಅಲ್ಲಾಹ್.



**ಮಂಗಳೂರು** ಜಮಾಅತಿನ ಝುಫರ್ ಅಹ್ಮದ್ ಮತ್ತು ಫಾತಿಮತ್ ಝುಹ್ರ ದಂಪತಿಯ ಪುತ್ರ ಝುಮೀರ್ ಅಹ್ಮದ್ (ಯುಗರಶ್ಮಿ ಸಂಪಾದಕರ ಮೊಮ್ಮಗ) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 84% ಅಂಕ ಪಡೆದು ಉತ್ತೀರ್ಣನಾಗಿದ್ದಾನೆ. ಮಾಶಾ ಅಲ್ಲಾಹ್.

# ಇನ್ಸಾನಿಯತ್ ಝಿಂದಾಬಾದ್
# ಮಾನವೀಯತೆ ಚಿರಕಾಲ ಬಾಳಲಿ

## ಸ್ಥಿರ ಶಾಂತಿ ಸ್ಥಾಪಿಸುವ ಮೂಲ ತತ್ವಗಳು – ಅಹ್ಮದಿಯಾ ವಿಚಾರ ಸಂಕಿರಣ

**ಬೆಂಗಳೂರು:** 'ಭಾರತದಲ್ಲಿದ್ದ ದಯೆಯೇ ಧರ್ಮದಮೂಲವಯ್ಯ' ಎಂಬ ವಾತಾವರಣ ಇಂದು 'ಭಯವೇ ಧರ್ಮದ ಮೂಲವಯ್ಯ' ಎಂಬಂತಾಗಿದ್ದು, ಚರಿತ್ರೆಯ ಚಕ್ರ ಹಿಂದಕ್ಕೆ ತಿರುಗುತ್ತಿದೆ. ಅಲ್ಪಸಂಖ್ಯಾತರು, ದಲಿತರು, ಮಹಿಳೆಯರಿಗೆ ಅಭದ್ರತೆ ಕಾಡುತ್ತಿದೆ ಎಂದು ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ। ನಟರಾಜ್ ಹುಳಿಯಾರ್ ಆತಂಕ ವ್ಯಕ್ತಪಡಿಸಿದರು.

ಅಹ್ಮದಿಯಾ ಮುಸ್ಲಿಂ ಸಂಘಟನೆ ಗೋಕುಲಂ ಗ್ರಾಂಡ್ ಹೋಟೆಲ್‌ನಲ್ಲಿ 10–09–2022ರಂದು ಏರ್ಪಡಿಸಿದ್ದ 'ಸ್ಥಿರ ಶಾಂತಿ ಸ್ಥಾಪಿಸುವ ಮೂಲತತ್ವಗಳು' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿ ಅವರು, ಬೇರೆ ಧರ್ಮಗಳ ಬಗ್ಗೆ ಅರಿಯದಿರುವುದೇ ಸಮಸ್ಯೆ ಉದ್ಭವಿಸಲು ಕಾರಣವಾಗಿದೆ ಚರಿತ್ರೆಯಲ್ಲಿ ಘಟಿಸಿದ ಅಹಿತಕರ ಘಟನಾವಳಿಗಳು ಪುನರಾವರ್ತನೆಯಾಗುತ್ತಿವೆ ಎಂದರು.

ಎಲ್ಲ ಮುಸ್ಲಿಮರು ಮೂಲಭೂತವಾದಿಗಳಲ್ಲ. ಶೇ.5ರಷ್ಟಿರುವ ಮೂಲಭೂತವಾದಿಗಳಿಂದಾಗಿ ಸಮಾಜದ ಸ್ವಾಸ್ಥ್ಯ ಕೆಡುತ್ತಿದೆ. ಇನ್ನುಳಿದ ಶೇ.95ರಷ್ಟು ಮುಸ್ಲಿಮರು ಪ್ರಜಾಪ್ರಭುತ್ವವಾದಿಗಳಾಗಿದ್ದು, ಅವರ ದನಿಯಾಗೋಣ ಎಂದು ಕರೆ ನೀಡಿದರು.

ಅಹ್ಮದಿಯಾ ಮುಸ್ಲಿಂ ಸಮುದಾಯದ ಪ್ರತಿನಿಧಿ ಕೆ.ಕೆ. ಬದ್ರುದ್ದೀನ್ ಸಾಹಿಬ್ ಮಾತನಾಡಿ, ವಿಶ್ವದಲ್ಲಿ ಶಾಂತಿ ನೆಲೆಸಿ, ಎಲ್ಲರೂ ಸಹೋದರ ಭಾವದಿಂದ ಜೀವಿಸಬೇಕು. ಖುರ್‌ಆನ್‌ನಲ್ಲಿ ಹಿಂಸೆ, ಖಡ್ಗ, ಕತ್ತಿ ಸಂಸ್ಕೃತಿಯನ್ನು ಎಲ್ಲೂ ಉಲ್ಲೇಖಿಸಿಲ್ಲ. ವಿಶ್ವದಲ್ಲಿ ಶಾಂತಿ ಸ್ಥಾಪನೆಯಾಗುವವರೆಗೂ ನೆಮ್ಮದಿಯ ಬದುಕು ಸಾಧ್ಯವಿಲ್ಲ ಎಂದರು.

ವಿಧಾನ ಪರಿಷತ್ ಸದಸ್ಯ ನಜೀರ್ ಅಹಮದ್, ಪ್ರಸಾದ ಗುರೂಜಿ, ಸುಮಂಗಲಿ ಸೇವಾಶ್ರಮದ ಸುಶೀಲಮ್ಮ, ಅಹ್ಮದಿಯಾ ಮುಸ್ಲಿಂ ಯುವ ಸಂಘಟನೆಯ ಅಧ್ಯಕ್ಷ ಕೆ. ತಾರಿಖ್ ಅಹ್ಮದ್ ಸಾಹಿಬ್, ಪತ್ರಕರ್ತೆ ಅನೂಷ ರವಿ ಸೂದ್, ಜಕ್ಕೂರ್ ಅಹ್ಮದಿಯಾ ಮುಸ್ಲಿಂ ಜಮಾಅತಿನ ಅಧ್ಯಕ್ಷ ಮುಹಮ್ಮದ್ ಇರ್ಫಾನ್ ಸಾಹಿಬ್ ಮತ್ತಿತರರು ಐಕ್ಯತೆ ಕುರಿತು ಉಪನ್ಯಾಸ ನೀಡಿದರು. ವಿಶ್ವ ಶಾಂತಿ ಕುರಿತ ಕೃತಿ ಲೋಕಾರ್ಪಣೆ ಮಾಡಲಾಯಿತು.

======================================================

## ಅಹ್ಮದಿಯಾ ಮಹಿಳಾ ವಿಭಾಗದಿಂದ ಸರ್ವ ಧರ್ಮ ಸಮ್ಮೇಳನ

**ಮಡಿಕೇರಿ:** ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಮಹಿಳಾ ಘಟಕವಾದ "ಲಜ್ನಾ ಇಮಾಇಲ್ಲಾಹ್" ತಮ್ಮ ನೂರು ವರ್ಷದ ಸಂಭ್ರಮಾಚರಣೆ ಪ್ರಯುಕ್ತ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಅದೇ ರೀತಿ ತಾರೀಕು 29–01–2023ರ ಭಾನುವಾರ ಮಡಿಕೇರಿಯ ಬಾಲಭವನದಲ್ಲಿ ಸರ್ವಧರ್ಮ ಸಮ್ಮೇಳನವನ್ನು ಆಯೋಜಿಸಲಾಗಿತ್ತು.

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಕರ್ನಾಟಕ ಧಕ್ಷಿಣ ವಲಯದ ಮಹಿಳಾ ಘಟಕದ ಅಧ್ಯಕ್ಷೆಯವರಾದ ಬೆಂಗಳೂರಿನ ನಸೀಮಾ ನಾಸಿರ್ ಸಾಹಿಬರವರು ಸರ್ವಧರ್ಮ ಸಮ್ಮೇಳನದ ಕುರಿತು ಪ್ರಸ್ತಾವಿಕವಾಗಿ ಮಾತನಾಡಿದರು.

ಈ ಸಮ್ಮೇಳನದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ನಗರಸಭೆಯ ಅಧ್ಯಕ್ಷರಾದ ಶ್ರೀಮತಿ ಅನಿತಾ ಪೂವಯ್ಯರವರು ಮಾತನಾಡುತ್ತಾ ಮಹಿಳೆಯರು ಎಲ್ಲ ಪಾತ್ರದಲ್ಲೂ ಎಲ್ಲ ಕ್ಷೇತ್ರಗಳಲ್ಲೂ ಮುನ್ನುಗ್ಗುತ್ತಿದ್ದಾರೆ ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಹಾಗೆಯೇ ಮಹಿಳೆಯರು ಸದಾ ಒಳ್ಳೆಯ ಕಾರ್ಯಗಳಲ್ಲಿ ಮುನ್ನುಗ್ಗಬೇಕು ಎಂದು ನಮ್ಮ ರಾಷ್ಟಪತಿ ಶ್ರೀಮತಿ ದ್ರೌಪದಿ ಮುರುಮುರವರನ್ನು ನೆನಪಿಸಿಕೊಂಡರು.

ಬ್ರಹ್ಮಕುಮಾರಿಯ ಧನಲಕ್ಷ್ಮಿ ಅಕ್ಕನವರು ಎಲ್ಲ ಧರ್ಮದ ಮೂಲ ತತ್ವವಾದ ಶಾಂತಿಯು ಮನಸ್ಸಿಗೆ ಎಷ್ಟು ಮುಖ್ಯ, ಅದು ಹೇಗೆ ಪಡೆಯಲು ಸಾಧ್ಯ ಎಂದು ಬಹಳ ವಿವರವಾಗಿ ಹಂಚಿಕೊಂಡರು.

ಸಂತ ಜೋಸೆಫರ ಶಾಲೆಯ ಸಿಸ್ಟರ್ ಅಸುಮ್ತಾ. ಕೆ, ಶಾಂತ ಗುಣಗಳು ಪ್ರತಿಯೊಬ್ಬರಿಗೂ ಯಾವ ರೀತಿ ಪ್ರಮುಖವಾದದ್ದು ಎಂದು ಹೇಳುತ್ತಾ, ಆ ಗುಣಗಳ ಪ್ರಾಮುಖ್ಯತೆಯನ್ನು ತಿಳಿಸಿದರು.

ಸ್ತ್ರೀ ಶಕ್ತಿ ಸಂಘದ ರಾಜ್ಯಾಧ್ಯಕ್ಷೆಯವರಾದ ಶ್ರೀಮತಿ ರೆಹೆನಾ ಸುಲ್ತಾನರವರು ಮಾತನಾಡುತ್ತಾ ಸೇವಾ ಕಾರ್ಯಗಳನ್ನು ನಮ್ಮೆಲ್ಲರ ಹವ್ಯಾಸವಾಗಿ ಮಾಡಿಕೊಳ್ಳಬೇಕೆಂದು ತಮ್ಮ ಮನದಾಳದ ಮಾತುಗಳನ್ನು ವ್ಯಕ್ತಪಡಿಸಿದರು.

ವಕೀಲರಾದ ಶ್ರೀಮತಿ ಮೀನಕುಮಾರಿಯವರು ಮಾತನಾಡುತ್ತಾ ಹಲವಾರು ಧರ್ಮ, ನೂರಾರು ವಿಶ್ವಾಸಾಭಿಪ್ರಾಯವಿದ್ದರೂ ನಮ್ಮ ಮೂಲ ಉದ್ದೇಶ ಮಾನವ ಕಲ್ಯಾಣ ಎಂಬುದನ್ನು ವಿವರಿಸಿದರು.

ಸದಸ್ಯರಾದ ಡಾ. ಅಫ್ರಿನ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಧರ್ಮದ ಸಾಮರಸ್ಯದ ಬಗ್ಗೆ, ಧರ್ಮ ಎಂದಿಗೂ ವಿಶ್ವದಲ್ಲಿ ಶಾಂತಿಭಂಗ ಮಾಡಲು ಕಾರಣವಾಗಬಾರದು, ಅದರ ಹೊಣೆ ನಮ್ಮೆಲ್ಲರ ಕೈಯಲ್ಲಿದೆ ಎಂದು ವಿವರಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಅಹ್ಮದಿಯಾ ಸಂಘಟನೆಯ ಮಹಿಳಾ ಘಟಕದ ಅಧ್ಯಕ್ಷೆಯಾದ, ರೂಮಾನ್ ರಿಝ್‌ವಾನ್ ಸಾಹಿಬ ಮಾತನಾಡುತ್ತಾ ಇಸ್ಲಾಮಿನಲ್ಲಿ ಮಹಿಳೆಯರ ಸ್ಥಾನಮಾನದ ಕುರಿತು ವಿವರಿಸಿದರು.

ಖುರ್‌ಆನ್ ಪಾರಾಯಣದೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ ಸಂಘಟನೆಯ ಉದ್ದೇಶ ಮತ್ತು ಕಾರ್ಯಗಳ ವರದಿಯನ್ನು ಡಾಕ್ಯುಮೆಂಟರಿಯ ಮೂಲಕ ತೋರಿಸಲಾಯಿತು.

ಹಾಗೆಯೇ ಎಲ್ಲ ಅತಿಥಿಗಳು ಮಾನವ ಕಲ್ಯಾಣಕ್ಕಾಗಿ ಶಾಂತಿ, ಸ್ನೇಹ, ಪ್ರೀತಿಯಲ್ಲಿ ಹೇಗೆ ಮಹಿಳೆಯರ ಪಾಲು ಮುಖ್ಯ ಎಂದು ತಮ್ಮದೇ ಆದ ರೀತಿಯಲ್ಲಿ ಮಾತನಾಡಿ ಕಾರ್ಯಕ್ರಮಕ್ಕೆ ಒಂದು ಒಳ್ಳೆಯ ಅರ್ಥಪೂರ್ಣ ಮಾದರಿಯಾದರು.

ಮಹಿಳೆಯರಿಗಾಗಿಯೇ ಏರ್ಪಡಿಸಿದ್ದ ಈ ಸಮಾರಂಭದಲ್ಲಿ ಬಹಳಷ್ಟು ಗಣ್ಯ ಮಹಿಳೆಯರು ಮತ್ತು ಮಕ್ಕಳು ಪಾಲ್ಗೊಂಡಿದ್ದರು.

======================================================

## ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಬೆಂಗಳೂರು ಜಿಲ್ಲಾ ಇಜ್ತಿಮಾ 2023

**ಮಡಿಕೇರಿ:** ಅಲ್ಲಾಹನ ಅನುಗ್ರಹದಿಂದ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜಿಲ್ಲಾ ಬೆಂಗಳೂರಿನ 4ನೇ ವಾರ್ಷಿಕ ಇಜ್ತಿಮಾ ಜೂನ್ 3 ಮತ್ತು 4ರಂದು ಮಡಿಕೇರಿ ಅಹ್ಮದಿಯಾ ಮಸೀದಿಯಲ್ಲಿ ವಿಜೃಂಭಣೆಯಿಂದ ಜರಗಿತು. ಈ ಇಜ್ತಿಮಾದಲ್ಲಿ 73 ಖುದ್ದಾಮ್, 31 ಅತ್ಫಾಲ್ ಮತ್ತು 13 ಅನ್ಸಾರ್ ಸದಸ್ಯರು ಭಾಗವಹಿಸಿದರು.

ಮುಖ್ಯ ಅತಿಥಿಗಳಾಗಿ ಖುದ್ದಾಮುಲ್ ಅಹ್ಮದಿಯಾ ಸೌತ್ ಇಂಡಿಯಾದ ನಾಇಬ್ ಸದರ್ ಜಮಾಲ್ ಮುಹ್ಯುದ್ದೀನ್ ಸಾಹಿಬ್ ಆಗಮಿಸಿದ್ದರು. ಹಾಗೆಯೇ ನಿಯಾಝ್ ಅಹ್ಮದ್ ನಾಇಕ್ ಸಾಹಿಬ್ (ಉಸ್ತಾದ್, ಜಾಮಿಅ ಅಹ್ಮದಿಯಾ ಖಾದಿಯಾನ್) ಮತ್ತು ಹಿಸಾಮ್ ಅಹ್ಮದ್ ಸಾಹಿಬ್ (Editer Light of Islam) ಅತಿಥಿಗಳಾಗಿ ಆಗಮಿಸಿದ್ದರು.

**ಪ್ರಥಮ ದಿನ**

ದಿನಾಂಕ 3ರಂದು ತಹಜ್ಜುದ್ ನಮಾಝ್‌ನೊಂದಿಗೆ ದಿನಚರ್ಯೆ ಆರಂಭವಾಯಿತು. ಫಜರ್ ನಮಾಝ್ ಬಳಿಕ ಮೌಲವಿ ಕಲೀಮ್ ಖಾನ್ ಸಾಹಿಬರು ಖುರ್‌ಆನಿನ ದರ್ಸ್ ನೀಡಿದರು. ಆ ಬಳಿಕ ಎಲ್ಲ ಖುದ್ದಾಂ, ಅತ್‌ಫಾಲ್ ಸದ್ಯಸರು ಸಾಮೂಹಿಕ ಖುರ್‌ಆನ್ ಪಠನ ಮಾಡಿದರು.

ಪೂರ್ವಾಹ್ನ 9:40ಕ್ಕೆ ಜಮಾಲ್ ಮುಹ್ಯುದ್ದೀನ್ ಸಾಹಿಬರು ಖುದ್ದಾಮುಲ್ ಅಹ್ಮದಿಯಾದ ಧ್ವಜಾರೋಹಣ ಮತ್ತು ದುಆ ಮಾಡಿದರು. ಅನಂತರ ಉದ್ಘಾಟನಾ ಸಮಾರಂಭ ಜರಗಿತು. ಅಶ್ರಫ್ ಸಾಹಿಬ್ ಖುರ್‌ಆನ್ ಪಠಿಸಿ ಉರ್ದು ತರ್ಜುಮೆ ಹೇಳಿದರು. ವಿ.ಎ. ರಶೀದ್ ಸಾಹಿಬ್ ಕನ್ನಡ ಭಾಷಾಂತರ ಓದಿದರು. ನಾಇಬ್ ಸದರ್ ಸಾಹಿಬ್ ಖುದ್ದಾಂ ಮತ್ತು ಅತ್‌ಫಾಲ್ ಪ್ರತಿಜ್ಞೆಗಳನ್ನು ಬೋಧಿಸಿದರು. ಉಸಾಮ್ ಸಾಹಿಬ್ ನಝ್ಮ್ ಹಾಡಿದರು. ಜಿಲ್ಲಾ ಖಾಇದ್ ಇರ್ಫಾನ್ ಖಾನ್ ಸಾಹಿಬ್ ಸ್ವಾಗತ ಭಾಷಣ ಮಾಡಿದರು. ಜಿಲ್ಲಾ ಮುಅತಮಿದ್ ಸಾಹಿಬ್ ವರದಿ ಸಲ್ಲಿಸಿದರು. ಮೌಲವಿ ಕಲೀಮ್ ಖಾನ್ ಸಾಹಿಬ್ ಸದರ್ ಖುದ್ದಾಮುಲ್ ಅಹ್ಮದಿಯಾ ಭಾರತ್ ಅವರ ಸಂದೇಶ ವಾಚಿಸಿದರು. ಜಮಾಲ್ ಮುಹ್ಯುದ್ದೀನ್ ಸಾಹಿಬರು ಪವಿತ್ರ ಖುರ್‌ಆನ್ ಮತ್ತು ಮುಹಮ್ಮದ್ ಪೈಗಂಬರರ(ಸ) ಜೀವನ ಮಾದರಿಯ ಬಗ್ಗೆ ಮಸೀಹ್ ಮೌಊದ್(ಅ) ಮತ್ತು ಹಝ್ರತ್ ಖಲೀಫತುಲ್ ಮಸೀಹ್ ನೀಡಿದ ಅಧ್ಯಾಪನೆಗಳ ಆಧಾರದಲ್ಲಿ ಉಪದೇಶಗಳನ್ನು ನೀಡಿದರು.

ಈ ಇಜ್ತಿಮಾದಲ್ಲಿ ಖುದ್ದಾಮುಲ್ ಅಹ್ಮದಿಯಾದ ತಅ್‌ಲೀಮ್ ತರ್ಬಿಯತ್ ಸಂಬಂಧವಾಗಿ ನಾಲ್ಕು ಸೆಮಿನಾರ್‌ಗಳನ್ನು ಏರ್ಪಡಿಸಲಾಯಿತು. ಖುದ್ದಾಮ್ ಮತ್ತು ಅತ್‌ಫಾಲ್‌ಗೋಸ್ಕರ ವಿವಿಧ ಶೈಕ್ಷಣಿಕ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು.

**ದ್ವಿತೀಯ ದಿನ**

ದಿನಾಂಕ 4ರಂದು ತಹಜ್ಜುದ್ ನಮಾಝ್ ಮತ್ತು ಫಜರ್ ನಮಾಝ್ ನಿರ್ವಹಿಸಿದ ನಂತರ ಮೈದಾನದಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳು ಜರಗಿದುವು.

ಸಂಜೆ 6ಗಂಟೆಗೆ ಸಮಾರೋಪ ಕಾರ್ಯಕ್ರಮ ಪ್ರಾರಂಭವಾಯಿತು. ಜನಾಬ್ ನಿಯಾಝ್ ಅಹ್ಮದ್ ನಾಇಕ್ ಸಾಹಿಬ್ ಜಾಮಿಅ ಅಹ್ಮದಿಯಾದಲ್ಲಿ ವ್ಯಾಸಂಗ ಮಾಡುವುದರ ಮಹತ್ವವನ್ನು ವಿವರಿಸಿದರು. ಆ ಬಳಿಕ ಮಡಿಕೇರಿ ಜಮಾಅತಿನ ಅಧ್ಯಕ್ಷರಾದ ಜನಾಬ್ ಶರೀಫ್ ಸಾಹಿಬರು ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ಜಿಲ್ಲಾ ನಾಇಬ್ ಖಾಯಿದ್ ಮುಹಮ್ಮದ್ ತಾಹಿರ್ ಸಾಹಿಬ್ ಕೃತಜ್ಞತೆ ಸಲ್ಲಿಸಿದರು. ಅನಂತರ ಖುದ್ದಾಮ್ ಮತ್ತು ಅತ್‌ಫಾಲ್ ಸ್ಪರ್ಧೆಯ ವಿಜಯಗಳಿಗೆ ಬಹುಮಾನ ವಿತರಿಸಲಾಯಿತು.

ಕೊನೆಗೆ ಜಮಾಲ್ ಮುಹ್ಯುದ್ದೀನ್ ಸಾಹಿಬರ ಸಮಾರೋಪ ಭಾಷಣ ಮತ್ತು ದುಆದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು – ಅಲ್‌ಹಮ್ದುಲಿಲ್ಲಾಹ್.

======================================================

## ಬೆಂಗಳೂರು ಜಿಲ್ಲಾ ಮಟ್ಟದ ಮಜ್ಲಿಸ್ ಅನ್ಸಾರುಲ್ಲಾಹ್ 3ನೇ ವಾರ್ಷಿಕ ಇಜ್ತಿಮಾ 2023

**ವಿಲ್ಸನ್ ಗಾರ್ಡನ್, ಬೆಂಗಳೂರು:** ದಿನಾಂಕ 10, 11 ಜೂನ್ 2023 ಶನಿವಾರ ರವಿವಾರದಂದು ಅಹ್ಮದಿಯಾ ಮಸೀದಿ ಬೆಂಗಳೂರಿನಲ್ಲಿ ಜಿಲ್ಲಾ ಮಟ್ಟದ ಎರಡು ದಿವಸದ 3ನೇ ವಾರ್ಷಿಕ ಅನ್ಸಾರುಲ್ಲಾಹ್ ಇಜ್ತಿಮಾ 2023 ವಿಜೃಂಭಣೆಯಿಂದ ಜರಗಿತು. ಬೆಂಗಳೂರು ಜಿಲ್ಲೆಗೆ ಒಳಪಟ್ಟ ಜಕ್ಕೂರ್, ಮಡಿಕೇರಿ, ಗೋಣಿಕೊಪ್ಪಲು ಮತ್ತು ಮಂಗಳೂರು ಮಜ್ಲಿಸ್‌ಗಳ ಝಯೀಮರು ಹಾಗೂ ಸದಸ್ಯರು ಹಾಜರಿದ್ದರು.

**ಜೂನ್ 10, ಮೊದಲ ದಿನದ ಕಾರ್ಯಕ್ರಮ:**

ಉದ್ಘಾಟನಾ ಸಮಾರಂಭ : 3 ಗಂಟೆಗೆ ಸರಿಯಾಗಿ ನಾಝಿಮ್ ಜಿಲ್ಲಾ ಜ॥ ಸಯ್ಯದ್ ಶಾರಿಕ್ ಮಜೀದ್, ಎಲ್ಲ ಮಜ್ಲಿಸ್‌ಗಳ ಝುಯೀಮರ ಹಾಗೂ ಸದಸ್ಯರನ್ನು ಒಳಗೊಂಡ ಧ್ವಜಾರೋಹಣ ಸಮಾರಂಭ ನೆರವೇರಿಸಿಕೊಟ್ಟರು. ಅನಂತರ ಅವರ ಘನ ಅಧ್ಯಕ್ಷತೆಯಲ್ಲೆ ಉದ್ಘಾಟನಾ ಸಮಾರಂಭ ಜರಗಿತು.

ಖುರ್‌ಆನ್ ಪಾರಾಯಣದೊಂದಿಗೆ ಈ ಸಭೆ ಚಾಲನೆಗೆ ಬಂತು. ನಂತರ ಪ್ರತಿಜ್ಞೆ ಉಚ್ಚರಿಸಲಾಯಿತು. ಕವನ ನಂತರ ಜ॥ ಮುಹಮ್ಮದ್ ಇಸ್ಮಾಈಲ್ ಸಾಹಿಬ್, ನಾಇಬ್ ನಾಝಿಮ್ ಜಿಲ್ಲಾ ಬೆಂಗಳೂರು ಉದ್ಘಾಟನಾ ಭಾಷಣ ಮಾಡುತ್ತಾ ಮಕ್ಕಳ ತರಬೇತಿ ಮತ್ತು ಅನ್ಸಾರುಲ್ಲಾಹ್‌ರ ಜವಾಬ್ದಾರಿಗಳ ವಿಷಯವಾಗಿ ಮಾತನಾಡಿದರು. ನಂತರ ವಾರ್ಷಿಕ ವರದಿ ವಾಚಿಸಲಾಯಿತು. ಅಧ್ಯಕ್ಷರ ಭಾಷಣ ಮತ್ತು ದುಆದೊಂದಿಗೆ ಉದ್ಘಾಟನಾ ಸಮಾರಂಭ ಮುಕ್ತಾಯಗೊಂಡಿತು.

ಇಲ್ಮಿ ಮುಖಾಬಲಜಾತ (ಶೈಕ್ಷಣಿಕ ಸ್ಪರ್ಧೆಗಳು): ಉದ್ಘಾಟನಾ ಸಮಾರಂಭ ನಂತರ ಚಹಾ ವಿರಾಮದಿಂದ ಬಿಡುಗಡೆ ಹೊಂದಿ ಶೈಕ್ಷಣಿಕ ಸ್ಪರ್ಧೆಗಳಿಗೆ ಅಣಿಯಾದರು. ತಿಲಾವತ್ (ಖುರ್‌ಆನ್ ಪಾರಾಯಣ), ಕವನ (ನಝ್ಮ್) ಹಾಗೂ ಭಾಷಣಗಳ ಸ್ಪರ್ಧೆಗಳು ನಡೆದವು. ಕೊನೆಯಲ್ಲಿ "ವೀಕ್ಷಣೆ ಮತ್ತು ವಸ್ತುಗಳ ಪಟ್ಟಿ ತಯಾರಿಕೆ"ಯ ರೋಚಕವಾದ ಸ್ಪರ್ಧೆ ಏರ್ಪಡಿಸಲಾಯಿತು.

ಮಗ್ರಿಬ್, ಇಶಾ ನಮಾಝ್ ನಂತರ ಊಟದ ತರುವಾಯ ಮೊದಲ ದಿನದ ಕಾರ್ಯಕ್ರಮಗಳು ಮುಕ್ತಾಯವಾದವು.

**ಜೂನ್ 11, ಎರಡನೆಯ ದಿನದ ಕಾರ್ಯಕ್ರಮಗಳು:**

ತಹಜ್ಜುದ್, ಫಜರ್ ಮತ್ತು ದರ್ಸ್‌ನೊಂದಿಗೆ ಎರಡನೇ ದಿನದ ಕಾರ್ಯಕ್ರಮಗಳು ಪ್ರಾರಂಭವಾದವು. ನಮಾಝ್ ನಿರ್ವಹಣೆಯ ನಂತರ ವಿಹಾರಕ್ಕಾಗಿ ಎಲ್ಲ ಸದಸ್ಯರು ಬೆಂಗಳೂರಿನ ಸುಪ್ರಸಿದ್ಧ ಉದ್ಯಾನವನವಾದ "ಲಾಲ್‌ಬಾಗ್" ತೆರಳಿದರು.

ವಿಹಾರದಿಂದ ಮರಳಿ ಬಂದು ಚಹಾ ಸೇವನೆಯ ನಂತರ ಆಟೋಟ ಸ್ಪರ್ಧೆಗಳಿಗೆ ಸಜ್ಜಾದರು. ಮ್ಯೂಸಿಕಲ್ ಚೆಯರ್, ಶೋಟ್‌ಪುಟ್, ನಿಶಾನಬಾಝಿ ಇತ್ಯಾದಿ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಮುಂಜಾನೆ 8 :30ರಿಂದ ಮೆಡಿಕಲ್ ಕ್ಯಾಂಪ್ ಏರ್ಪಡಿಸಲಾಗಿತ್ತು. ಬಹುತೇಕ ಸದಸ್ಯರು ತಮ್ಮ ಆರೋಗ್ಯ ತಪಾಸನೆ ಮಾಡಿಕೊಂಡರು.

ಲಘು ಉಪಹಾರದ ನಂತರ 10 ಗಂಟೆಗೆ ಸರಿಯಾಗಿ ಜ॥ ಮೌಲಾನ ಅತಾವುಲ್ ಮಜೀದ್ ಸಾಹಿಬ್, ಅಧ್ಯಕ್ಷರು ಮಜ್ಲಿಸ್ ಅನ್ಸಾರುಲ್ಲಾಹ್ ಭಾರತ ಅವರ ನೇತೃತ್ವದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು. ನಂತರ ತರಬೇತಿ ಮತ್ತು ತಬ್ಲೀಗಿ ಚರ್ಚಾ ಕೂಟಗಳನ್ನು ಏರ್ಪಡಿಸಲಾಯಿತು. ಅದರಲ್ಲಿ ಆಧುನಿಕ ತಂತ್ರಜ್ಞಾನದ ಈ ಕಾಲದಲ್ಲಿ ಮಕ್ಕಳ ತರಬೇತಿಯ ಕುರಿತು ಪ್ರಶ್ನೆಗಳೊಂದಿಗೆ ಉತ್ತರಗಳನ್ನು ಪಡೆಯಲಾಯಿತು. ಅದೇ ರೀತಿಯಲ್ಲಿ ತಬ್ಲೀಗಿ ವಿಷಯದಲ್ಲೂ ಚರ್ಚಿಸಲಾಯಿತು. ಅದಲ್ಲದೆ ಆಶು ಭಾಷಣ (Pick & Speak) ಮತ್ತು ರಸಪ್ರಶ್ನೆ (Quiz) ಸ್ಪರ್ಧೆ ನಡೆಸಲಾಯಿತು.

**ಸಮಾರೋಪ ಸಮಾರಂಭ ಹಾಗೂ ಬಹುಮಾನ ವಿತರಣೆ:**

ಜ॥ ಮೌಲಾನ ಅತಾವುಲ್ ಮಜೀದ್ ಸಾಹಿಬ್ ಅಧ್ಯಕ್ಷರು ಮಜ್ಲಿಸ್ ಅನ್ಸಾರುಲ್ಲಾಹ್ ಭಾರತ ಅವರ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ಜರುಗಿಸಲಾಯಿತು. ಖುರ್‌ಆನ್ ಪಾರಾಯಣದೊಂದಿಗೆ ಸಭೆ ಪ್ರಾರಂಭವಾಯಿತು. ಜ॥ ಸಯ್ಯದ್ ಶಾರಿಖ್ ಮಜೀದ್ ಸಾಹಿಬ್, ಜಿಲ್ಲಾ ನಾಝಿಮ್ ಧನ್ಯವಾದರ್ಪಣೆ ಮಾಡಿದರು. ನಂತರ ಅಧ್ಯಕ್ಷತೆ ಭಾಷಣದಲ್ಲಿ ಅವರು ಸಮಾವೇಶದ ಉದ್ದೇಶ ಮತ್ತು ನಮ್ಮ ಕರ್ತವ್ಯಗಳ ಬಗ್ಗೆ ಬೆಳಕು ಚೆಲ್ಲಿದರು. ನಂತರ ಶೈಕ್ಷಣಿಕ ಹಾಗೂ ಆಟೋಟ ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಕೊನೆಯಲ್ಲಿ ಅಧ್ಯಕ್ಷರ ದುಆದೊಂದಿಗೆ ಈ ಎರಡು ದಿನಗಳ ಇಜ್ತಿಮಾ ಅಲ್ಲಾಹನ ಅನುಗ್ರಹದಿಂದ ಅಚ್ಚುಕಟ್ಟಾಗಿ ನಡೆದು ಮುಕ್ತಾಯಗೊಂಡಿತು. ಅಲ್‌ಹಮ್‌ದುಲಿಲ್ಲಾಹ್.

**(ವರದಿ: ಸಯ್ಯದ್ ಶಾರಿಖ್ ಮಜೀದ್, ನಾಝಿಮ್ ಜಿಲ್ಲಾ ಬೆಂಗಳೂರು)**

## ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

**1. ಜ॥ ಎಂ.ಎ. ಬಶೀರ್ ಅಹ್ಮದ್ ಸಾಹಿಬ್, ಮಡಿಕೇರಿ – ರೂ. 2000/–**

**2. ಜ॥ ರಶೀದ್ ಅಹ್ಮದ್ ಸಿದ್ದೀಖ್ ಸಾಹಿಬ್, ಮಂಗಳೂರು – ರೂ. 1000/–**



ಬೆಂಗಳೂರಿವ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ನಡೆದ ಮಾಧ್ಯಮ ಕ್ಷೇತ್ರದ ಸಾಧಕರ 4 ವರ್ಷಗಳ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಲಬುರಗಿ ಸಂಜೆವಾಣಿಯ ಹಿರಿಯ ಪತ್ರಕರ್ತ ನಜೀರ್ ಮಿಯಾನ್ ಹಟ್ಟಿ (ಅಹ್ಮದಿ) ಅವರಿಗೆ "ಸಾಮಾಜಿಕ ಸಮಸ್ಯೆ ಲೇಖನಕ್ಕೆ" ಲಭಿಸಿದ ಕರ್ನಾಟಕ ಮಾದ್ಯಮ ಅಕಾಡೆಮಿ–2022ರ ಸಾಲಿನ ಅಭಿಮಾನಿ ದತ್ತಿ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

Karnataka media Academy - 2022

Abhimani Award

Nazeer miyan Hutti, Sr Journalist

Sanjevani kannada daily Kalaburagi.

**Statement about ownership and other particulars about the Newspaper Yugarashmi Quarterly (Form IV see Rule 8)**

| | | |
|---|---|---|
| 1. Place of publication | : | Mangalore |
| 2. Period of its publication | : | Quarterly |
| 3. Printer's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 4. Publisher's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 5. Editor's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore - 575001 |
| 6. Name and address of individuals who own the newspaper and partners or share holders holding more than one percent of the Capital | : | Jamath Ahmadiyya, "Darussalam", Near Railway Level Crossing, Pandeshwar, Mangalore – 575001 |

I, Muhammad Yusuf hereby declare that the particulars given above are true to the best of my knowledge and belief.

Date : 1-6-2023

Sd/- Muhammad Yusuf

ನಿಧನ ವಾರ್ತೆಗಳು

## ಜ| ಪಿ.ಎ. ಅಬ್ದುರ್ರಹ್ಮಾನ್ ಸಾಹಿಬ್



**ಮಡಿಕೇರಿ:** ಮೂಲತಃ ಮಂಗಳೂರಿನ ಬೆಂಗರೆ ನಿವಾಸಿ ಜ| ಪಿ.ಎ. ಅಬ್ದುರ್ರಹ್ಮಾನ್ ಸಾಹಿಬ್ ತನ್ನ 73ನೇ ಪ್ರಾಯದಲ್ಲಿ 26–04–2023ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.")

ಅವರ ತಂದೆ ಜನಾಬ್ ಪಿ.ಎ. ಮುಹಮ್ಮದ್ ಮೌಲವಿ ಸಾಹಿಬ್ ಮತ್ತು ಹಿರಿಯ ಸಹೋದರ ಎಂ. ಅಬ್ದುಲ್ಲತೀಫ್ ಸಾಹಿಬ್ ಅಹ್ಮದಿಯತ್ ಸ್ವೀಕರಿಸಿದ ಬಳಿಕ 1972ರಲ್ಲಿ ಅವರು ಅಹ್ಮದಿಯಾ ಜಮಾಅತಿಗೆ ಸೇರಿದರು. ಅಹ್ಮದಿಯೇತರ ಮುಸ್ಲಿಮರಿಂದ ಕಿರುಕುಳಕ್ಕೀಡಾದ ಅವರು ಮಂಗಳೂರು ಬಿಟ್ಟು ಮಡಿಕೇರಿಗೆ ಬಂದರು. ಇಲ್ಲಿ ಜಮಾಅತಿನ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದರು. 1999ರಲ್ಲಿ ಮಡಿಕೇರಿ ಜಮಾಅತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಉತ್ತಮ ಸ್ವಭಾವಗುಣಗಳನ್ನು ಹೊಂದಿದ್ದರು. ಅವರು "ಯುಗರಶ್ಮಿ"ಯ ಓರ್ವ ಹಿತಕಾಂಕ್ಷಿಯೂ ಆಗಿದ್ದರು.

ಅವರು ಪತ್ನಿ, ಓವ್ ಪುತ್ರ, ಮೂವರು ಪುತ್ರಿಯರು ಮತ್ತು ಅನೇಕ ಬಂಧು ಬಾಂಧವರನ್ನು ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ. ಆಮೀನ್.

==========================================

## ಜ| ಎಂ.ಎ. ಅಹ್ಮದ್ ನೂರ್ ಸಾಹಿಬ್



**ಮಡಿಕೇರಿ:** ಮಡಿಕೇರಿ ಜಮಾಅತಿನ ಜ| ಎಂ.ಎ. ನೂರ್ ಸಾಹಿಬ್ ದಿನಾಂಕ 03–03–2023ರಂದು ತನ್ನ 73ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.")

ಮೃತ ಅಹ್ಮದ್ ನೂರ್ ಸಾಹಿಬ್ ಮೂಗ ಮತ್ತು ಕಿವುಡನಾದರೂ ಜಮಾಅತಿನಲ್ಲಿ ಒಳ್ಳೆಯ ಸೇವೆಯನ್ನು ಮಾಡುತ್ತಿದ್ದರು. ಅಹ್ಮದಿಯಾ ಜಮಾಅತನ್ನು ಬಹಳ ಪ್ರೀತಿಯಿಂದ ನೋಡುತ್ತಾ ಜಮಾಅತಿಗೆ ಬರುವ ಮೌಲವಿ ಸಾಹೇಬರುಗಳನ್ನು ಹಾಗೂ ಜಮಾಅತಿನ ಇನ್ಸ್‌ಪೆಕ್ಟರ್‌ಗಳನ್ನು ಬಹಳ ಪ್ರೀತಿಯಿಂದ ನೋಡುತ್ತಾ ಅವರ ಖಿದ್‌ಮತ್ ಮಾಡುತ್ತಿದ್ದರು. ಹಾಗೂ ಮನೆಗೆ ಕರಕೊಂಡು ಬಂದು ಅತಿಥಿ ಸತ್ಕಾರ ಮಾಡುತ್ತಿದ್ದರು. ತಂದೆಯವರು ಮೃತಪಡುವವರೆಗೂ ಅವರ ಖಿದ್‌ಮತ್ ಮಾಡುತ್ತಿದ್ದರು. ನಂತರ ತಾನು ಮೃತಡುವವರೆಗೂ ಮಡಿಕೇರಿಯಲ್ಲಿ ಹಿರಿಯ ಸಹೋದರ ಎಂ.ಎ. ಬಶೀರ್ ಅಹ್ಮದ್ ಸಾಹಿಬರ ಜತೆ ಇದ್ದು ಒಳ್ಳೆಯ ಸೇವೆ ಮಾಡುತ್ತಿದ್ದರು. ಅಲ್ಲಾಹನು ಅವರಿಗೆ ಮಗ್ಫಿರತ್ ಮತ್ತು ಜನ್ನತನ್ನು ಅನುಗ್ರಹಿಸಲಿ. ಆಮೀನ್.

==========================================

## ಜ| ಎಂ.ಎಂ. ಮುಸ್ತಫಾ ಸಾಹಿಬ್



**ಮಡಿಕೇರಿ:** ಮಡಿಕೇರಿ ಜಮಾಅತಿನ ಮರ್ಹೂಂ ಜ| ಎಂ.ಇ. ಮುಹಮ್ಮದ್ ಸಾಹಿಬರ ಹಿರಿಯ ಪುತ್ರ ಎಂ.ಎಂ. ಮುಸ್ತಫಾ ಸಾಹಿಬ್ ತನ್ನ 64ನೇ ಪ್ರಾಯದಲ್ಲಿ 27–05–2023ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.")

ಅವರು ತಾಯಿ, ಪತ್ನಿ, ಒಬ್ಬ ಪುತ್ರ, ಇಬ್ಬರು ಪುತ್ರಿಯರು ಮತ್ತು ಅನೇಕ ಬಂಧು ಬಾಂಧವರನ್ನು ಅಗಲಿದ್ದಾರೆ. ಅಲ್ಲಾಹು ಅವರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ. ಆಮೀನ್.

==========================================


**Contact Details: Ahmadiyya Muslim Jama'at India**

**Head Office**

Shoba Noor-ul-Islam

Qadian, Distt. Gurdaspur, Punjab, Pin:143516

**Branch Office:**

No1 3rd Cross, Wilson Garden, Bangalore-560027 | Darussalam, Near Railway Level Crossing Pandeshwar, Mangalore -575001

www.alislam.org /www.ahmadiyyamuslimjamaat.in

Feedback www.ahmadiyyamuslimjamaat.in/feedback

/islaminind /islaminind /+islaminindia /islaminindia /c/islaminindia

official blog: www.lightofislam.in

National Toll Free Number: 1800 103 2131 (9:00AM to 10:30PM)

MUSLIM TELEVISION AHMADIYYA INTERNATIONAL

ww.mta.tv

Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna

EutelsatE70B,Degree:70° East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna

ಓದಿದ್ದು

## ಚಿನ್ನದ ಶಾಯಿಯ ಕುರಾನ್ ಪ್ರದರ್ಶನ

**ಮಹಾರಾಷ್ಟ್ರದ** ನಾಗಪುರದಲ್ಲಿ ನಡೆದ 108ನೇ ಭಾರತೀಯ ವಿಜ್ಞಾನ ಸಮಾವೇಶದಲ್ಲಿ ಆಯೋಜಿಸಿದ್ದ ವಸ್ತು ಪ್ರದರ್ಶನದಲ್ಲಿ 16ನೇ ಶತಮಾನದಲ್ಲಿ ಚಿನ್ನದ ಶಾಯಿ(ಗೋಲ್ಡನ್ ಇಂಕ್)ಯಿಂದ ರಚಿಸಲಾಗಿದ್ದ ಹಾಗೂ ಆರೆಸ್ಸೆಸ್ ಅಂಗಸಂಸ್ಥೆಯಿಂದ ಸಂರಕ್ಷಿಸಲ್ಪಟ್ಟಿದ್ದ ಕುರಾನ್ ಪ್ರತಿಯನ್ನು ಪ್ರದರ್ಶಿಸಲಾಗಿದೆ. ಅಲ್ಲದೇ ಭಾರತದ ಧಾರ್ಮಿಕತೆ, ಐತಿಹ್ಯ, ವಿಜ್ಞಾನ ಮತ್ತು ಪ್ರಾಚೀನ ಭಾರತದ ಹಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲುವ ಹಸ್ತಪ್ರತಿಗಳನ್ನೂ ಪ್ರದರ್ಶಿಸಲಾಗಿದೆ. ಕುರಾನ್ 385 ಪುಟಗಳನ್ನು ಹೊಂದಿದ್ದು ಎಲ್ಲ ಅಕ್ಷರಗಳನ್ನು ಚಿನ್ನದ ಶಾಯಿಯಿಂದ ಬರೆಯಲಾಗಿದೆ. ಯಾವ ಪುಟದಲ್ಲೂ ಒಂದೇ ಒಂದು ತಪ್ಪುಗಳಿಲ್ಲದೇ ಇರುವುದು ಇದರ ವೈಶಿಷ್ಟ್ಯ. **(ಉದಯವಾಣಿ 4–1–2023)**

==========

## 70 ಕೋಟಿ ಭಾರತೀಯರ ಒಟ್ಟು ಸಂಪತ್ತಿಗಿಂತ 21 ಅತಿ ಶ್ರೀಮಂತರ ಸಂಪತ್ತು ಅಧಿಕ!

**ಹೊಸದಿಲ್ಲಿ, ಜ.16:** ಭಾರತದ 21 ಮಂದಿ ಶತಕೋಟ್ಯಧಿಪತಿಗಳ ಸಂಪತ್ತು ದೇಶದ 70 ಕೋಟಿಗೂ ಅಧಿಕ ಭಾರತೀಯರ ಒಟ್ಟು ಸಂಪತ್ತಿಗಿಂತಲೂ ಅಧಿಕವಾಗಿದೆ ಎಂದು ಆಕ್ಸ್‌ಫಾಮ್ ಇಂಡಿಯಾ ಸಂಸ್ಥೆಯ ಹೊಸ ವರದಿಯೊಂದು ಬಹಿರಂಗಪಡಿಸಿದೆ. ಕಳೆದ ವರ್ಷ ಕೊರೋನ ಸಾಂಕ್ರಾಮಿಕ ಆರಂಭಗೊಂಡಾಗಿನಿಂದ ಭಾರತದ ಶತಕೋಟ್ಯಧಿಪತಿಗಳ ಸಂಪತ್ತಿನಲ್ಲಿ 121 ಶೇಕಡ ಅಥವಾ ದಿನಂಪ್ರತಿ ಸರಾಸರಿ 3,608 ಕೋಟಿ ರೂ. ಹೆಚ್ಚಳವಾಗಿದೆ ಎಂದು ವರದಿ ತಿಳಿಸಿದೆ. **(ವಾರ್ತಾಭಾರತಿ 17–1–2023)**

==========

## ಹತ್ತು ಮಿಲಿಯನ್ ವರ್ಷಗಳ ದಿನಾಂಕಗಳು ಕಂಠಪಾಠ ನಡೆದಾಡುವ ಕ್ಯಾಲೆಂಡರ್ 'ಮೆಮೊರಿ ಪ್ರಶಾಂತ್'

**ಬಶೀರ್ ಅಹ್ಮದ್ ಕಿನ್ಯಾ**

**ಮಂಗಳೂರು, ಜ.16:** 25 ವರ್ಷ ವಯಸ್ಸಿನ ಓರ್ವ ಭಿನ್ನ ಸಾಮರ್ಥ್ಯವುಳ್ಳ ವ್ಯಕ್ತಿ ತನ್ನ ಸ್ವಂತ ಸ್ಮರಣೆಯಲ್ಲಿ ಹತ್ತು ಮಿಲಿಯನ್ ವರ್ಷಗಳವರೆಗಿನ ಕ್ಯಾಲೆಂಡರ್ ಅನ್ನು ನೆನಪಿನಲ್ಲಿ ಉಳಿಸಬಲ್ಲ ಎಂದರೆ ನಂಬುವುದು ಸಾಧ್ಯವೇ?. ತಂತ್ರಜ್ಞಾನಗಳನ್ನು ಸೋಲಿಸಬಲ್ಲ ಈ ಯುವಕನ ಹೆಸರು ಪ್ರಶಾಂತ್.

'ಮೆಮೊರಿ ಪ್ರಶಾಂತ್' ಎಂದು ಕೇರಳೀಯರು ಪ್ರೀತಿಯಿಂದ ಕರೆಯುವ ಈತನ ಇನ್ನಷ್ಟು ಸಾಮರ್ಥ್ಯಗಳ ಬಗ್ಗೆ ತಿಳಿದರೆ ಅಚ್ಚರಿಯ ಮೇಲೆ ಅಚ್ಚರಿ ಎನ್ನಲೇಬೇಕು. ವಿಪರ್ಯಾಸವೆಂದರೆ, ಸಾಮಾನ್ಯ ಮನುಷ್ಯನಿಗೆ ಇರಬೇಕಾಗುವಷ್ಟು ದೈಹಿಕ ಸಾಮರ್ಥ್ಯ ಪ್ರಶಾಂತ್‌ಗೆ ಇಲ್ಲ. ಆದರೆ, ಕ್ರಿ.ಶ. ಒಂದರಿಂದ ಹತ್ತು ಕೋಟಿ ವರ್ಷಗಳವರೆಗಿನ ಕ್ಯಾಲೆಂಡರ್‌ನಿಂದ ಯಾವ ದಿನಾಂಕದ ವಿಶೇಷತೆಗಳೇನು? ಅದು ಯಾವ ದಿನ ಬರುತ್ತದೆ ಎಂಬುದನ್ನು ಪ್ರಶಾಂತ್ ನಿಖರವಾಗಿ ಹೇಳಬಲ್ಲರು. ಹೀಗೆ ಪ್ರಶಾಂತ್ ಮೂವತ್ತಾರು ಸಾವಿರದ ಐನೂರ ಇಪ್ಪತ್ತೈದು ಕೋಟಿ ದಿನಗಳ ಬಗೆಗಿನ ಮಾಹಿತಿಯನ್ನು ಕಂಠಪಾಠ ಮಾಡಿದ್ದಾರೆ.

ಜನಿಸುವಾಗಲೇ ಮಾನಸಿಕವಾಗಿಯೂ, ದೈಹಿಕವಾಗಿಯೂ ವಿಕಲತೆ ಹೊಂದಿದ್ದ ಪ್ರಶಾಂತ್, ಮೂರು ತಿಂಗಳು ಮಾತ್ರ ಜೀವಿಸುವುದು ಸಾಧ್ಯ ಎಂದು ವೈದ್ಯರು ಹೇಳಿದ್ದರು. ಆರು ತಿಂಗಳು ಮೆಡಿಕಲ್ ಕಾಲೇಜಿನಲ್ಲಿ ಚಿಕಿತ್ಸೆ ಪಡೆದ ಬಳಿಕ ಮಗುವನ್ನು ನಮಗೆ ಹಸ್ತಾಂತರಿಸಿದ್ದರು. ಆ ಬಳಿಕ ಹಲವಾರು ಸರ್ಜರಿಗಳ ಮೂಲಕ ಮುಖವನ್ನು ಇಂದು ಕಾಣುವ ರೀತಿಗೆ ಬದಲಾಯಿಸಿದ್ದೆವು. ಸೊಂಡಿಲಿನಂತಹ ಮೂಗು, ಪುಟ್ಟ ಕಣ್ಣುಗಳು, ದೊಡ್ಡ ಕಿವಿಗಳನ್ನು ಮಗು ಹೊಂದಿದ್ದವು. ಚಿಕಿತ್ಸೆ ನೀಡಿದ ಡಾಕ್ಟರ್‌ಗಳು ಮುಂಚಿತವಾಗಿ ತಿಳಿಸಿದಂತೆ, ಅತ್ಯಂತ ಕಾಳಜಿಯಿಂದ ನೋಡಿಕೊಂಡೆವು. ಇದೀಗ ಇಪ್ಪತ್ತೈದರ ಹರೆಯದಲ್ಲಿ ಪ್ರಶಾಂತ್ ಇದ್ದು, ಹಲವಾರು ರೋಗಗಳು ಆತನನ್ನು ಕಾಡುತ್ತಿದ್ದು, ಆ ನೋವು ನಮ್ಮನ್ನೂ ಕಾಡುತ್ತಿದೆ. ॥ ಚಂದ್ರನ್ ಕೆ. (ಪ್ರಶಾಂತ್ ತಂದೆ) **(ವಾರ್ತಾಭಾರತಿ 17–01–2023)**

==========

## ಜನಸಂಖ್ಯೆ ಏರಿಸಲು ಸಿಕ್ಕಿಂ ಹರಸಾಹಸ!

**ಸಿಕ್ಕಿಂ:** ಭಾರತವೀಗ ಚೀನವನ್ನೇ ಜನಸಂಖ್ಯೆಯಲ್ಲಿ ಹಿಂದಿಕ್ಕಿ ಮುಂದೋಡುವ ನಿರೀಕ್ಷೆಯಲ್ಲಿದೆ. ಇನ್ನೊಂದು ಕಡೆ ತನ್ನ ಜನಸಂಖ್ಯೆ ಕುಸಿಯುತ್ತಿದೆ ಎಂದು ಚೀನ ದಿಗಿಲಾಗಿದೆ. ಈ ಹೊತ್ತಿನಲ್ಲಿ ಭಾರತದ ಸಣ್ಣ ರಾಜ್ಯ ಸಿಕ್ಕಿಂಗೆ ತನ್ನ ಜನಸಂಖ್ಯೆಯೂ ಕುಸಿಯುತ್ತಿದೆ ಎಂಬ ಆತಂಕ ಎದುರಾಗಿದೆ.

ಶೇ.80ರಷ್ಟು ಸ್ಥಳೀಯರಿಂದಲೇ ತುಂಬಿಕೊಂಡಿರುವ ಸಿಕ್ಕಿಂನಲ್ಲಿ ಜನನ ಪ್ರಮಾಣ ಗಣನೀಯವಾಗಿ ಕುಸಿದಿದೆ! ಒಂದು ವೇಳೆ ಜನರೇ ಇಲ್ಲವಾದರೆ ಈ ರಾಜ್ಯದ ವಿಶೇಷ ಸಂಸ್ಕೃತಿಯೇ ಇಲ್ಲವಾಗುತ್ತದೆ ಎಂದು ಸಿಕ್ಕಿಂ ಕಳವಳಕ್ಕೊಳಗಾಗಿದೆ. ಆದ್ದರಿಂದ ಜನಸಂಖ್ಯೆ ಏರಿಸುವುದರತ್ತ ಗಮನ ಹರಿಸಿದೆ. ವಿಶೇಷವೆಂದರೆ ಇನ್ನೊಂದು ಕಡೆ ಇಡೀ ದೇಶದಲ್ಲಿ ಜನಸಂಖ್ಯೆ ನಿಯಂತ್ರಿಸುವುದು ಹೇಗೆಂಬ ಚಿಂತೆಯಿದೆ! ಪ್ರಸ್ತುತ ಸಿಕ್ಕಿಂ ಜನಸಂಖ್ಯೆ 7 ಲಕ್ಷ. ಇಲ್ಲಿನ ಜನನಪ್ರಮಾಣ ಭಾರತದಲ್ಲೇ ಕಡಿಮೆಯಿದೆ. ಆದ್ದರಿಂದ ಒಬ್ಬ ಹೆಣ್ಣು 3 ಮಕ್ಕಳನ್ನು ಹೊಂದಬೇಕು ಎನ್ನುವುದು ಸರಕಾರದ ಬಯಕೆ. ಅದಕ್ಕಾಗಿ ಗರ್ಭಿಣಿಯರಿಗೆ ವರ್ಷಪೂರ್ತಿ ಹೆರಿಗೆ ರಜೆ, ಅಪ್ಪಂದಿರಿಗೆ ತಿಂಗಳು ಪೂರ್ಣ ಪಿತೃತ್ವ ರಜೆ ನೀಡಲಾಗುತ್ತದೆ.

ಇನ್ನು ಭ್ರೂಣವನ್ನು ಗರ್ಭದಲ್ಲಿಟ್ಟು ಬೆಳೆಸುವುದಕ್ಕೆ ಆರ್ಥಿಕ ನೆರವು ನೀಡಲಾಗುತ್ತದೆ. ಇಂತಹ ಕ್ರಮ ತೆಗೆದುಕೊಂಡ ದೇಶದ ಮೊದಲ ರಾಜ್ಯ ಎಂಬ ಹೆಗ್ಗಳಿಕೆ ಸಿಕ್ಕಿಂನದ್ದು! **(ಉದಯವಾಣಿ 20-01-2023)**

======================================================

## ಆರ್‌ಎಸ್‌ಎಸ್ – ನೇತಾಜಿ ಸಿದ್ಧಾಂತ ಭಿನ್ನ

**ಹೊಸದಿಲ್ಲಿ:** ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜಯಂತಿ ಆಚರಿಸಲು ಆರ್‌ಎಸ್ ಎಸ್ ಸಿದ್ಧತೆಗಳನ್ನು ನಡೆಸುತ್ತಿರುವ ನಡುವೆಯೇ ಬೋಸ್ ಅವರ ಪುತ್ರಿ ಅನಿತಾ ಬೋಸ್, ನಮ್ಮ ತಂದೆಯ ಸಿದ್ಧಾಂತ ಹಾಗೂ ಆರ್‌ಎಸ್‌ಎಸ್ ಸಿದ್ಧಾಂತ ಎರಡೂ ಬೇರೆಯಾಗಿದ್ದು ಅವು ಹೊಂದಿಕೆಯಾಗುವುದಿಲ್ಲ ಎಂದಿದ್ದಾರೆ. ತಮ್ಮ ತಂದೆಯ ಜಯಂತಿ ಸಿದ್ಧತೆ ಕುರಿತಂತೆ ಪ್ರತಿಕ್ರಿಯಿಸಿದ ಅವರು, ನಮ್ಮ ತಂದೆ ಓರ್ವ ನಿಷ್ಠಾವಂತ ಹಿಂದೂ, ಆದರೆ ಇತರೆ ಧರ್ಮಗಳನ್ನು ಗೌರವಿಸುವಂಥ ಮನೋಭಾವ ಹೊಂದಿದ್ದರು. ಸರ್ವಧರ್ಮದ ಸಹಕಾರವನ್ನು ಅವರು ಬಯಸಿದ್ದರು ಎಂದು ಹೇಳಿದ್ದಾರೆ. **(ಉದಯವಾಣಿ 22-1-2023)**

======================================================

## ಚೀನದಲ್ಲೀಗ ಮಾನವ ಸಂಪನ್ಮೂಲದ ಕೊರತೆ
## ಸೃಷ್ಟಿಸಿದೆ ಸಾಮಾಜಿಕ, ಆರ್ಥಿಕ ತಲ್ಲಣ!

**ಚೀನದ** ಉದ್ಯೋಗ ರಂಗವೀಗ ಯುವ ಪೀಳಿಗೆಯ ಕೊರತೆಯನ್ನು ಎದುರಿಸುತ್ತಿದೆ. ಬಹುತೇಕ ಕ್ಷೇತ್ರಗಳಲ್ಲಿ ಹಿರಿಯರೇ ತುಂಬಿಕೊಂಡಿದ್ದಾರೆ. ಸಾರ್ವಜನಿಕ ಸೇವೆಗೆ ಕಾರ್ಮಿಕರ ಕೊರತೆ ಎದುರಾಗುತ್ತಿದೆ. ಉತ್ಪಾದನೆಯಲ್ಲಿ ಕುಂಠಿತ, ಅಭಿವೃದ್ಧಿಯಲ್ಲಿ ಹಿನ್ನಡೆಗೆ ಇದು ಕಾರಣವಾಗುತ್ತಿದೆ. ಒಟ್ಟಿನಲ್ಲಿ ಮಾನವ ಸಂಪನ್ಮೂಲದ ಕೊರತೆ ಚೀನದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ತಲ್ಲಣವನ್ನುಂಟುಮಾಡಿದ್ದು ಜಾಗತಿಕ ಆರ್ಥವ್ಯವಸ್ಥೆಯ ಮೇಲೂ ಇದು ಗಂಭೀರ ಪರಿಣಾಮ ಬೀರಲಿದೆ. **(ಉದಯವಾಣಿ 29-01-2023)**

======================================================

## ಅಸಾರಾಂ ಬಾಪುಗೆ ಜೀವಾವಧಿ ಶಿಕ್ಷೆ

**ಅಹ್ಮದಾಬಾದ್:** 2013ರಲ್ಲಿ ಮಹಿಳಾ ಅನುಯಾಯಿಯೊಬ್ಬರ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಸ್ವಯಂಘೋಷಿತ ದೇವಮಾನವ ಅಸಾರಾಂ ಬಾಪು(81)ಗೆ ಗುಜರಾತ್‌ನ ಗಾಂಧಿ ನಗರದ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಸೋಮವಾರವಷ್ಟೇ ಅಸಾರಾಂನನ್ನು ದೋಷಿ ಎಂದು ಕೋರ್ಟ್ ತೀರ್ಪು ನೀಡಿತ್ತು. ಸೂರತ್ ಮೂಲದ ಮಹಿಳೆಯು ತಾನು ಅಸಾರಾಂ ಆಶ್ರಮದಲ್ಲಿದ್ದಾಗ 2001ರಿಂದ 2006ರ ವರೆಗೆ ಹಲವು ಬಾರಿ ತನ್ನ ಮೇಲೆ ಅಸಾರಾಂ ಬಾಪು ಅತ್ಯಾಚಾರ ವೆಸಗಿದ್ದ ಎಂದು ದೂರು ನೀಡಿದ್ದರು.

ಸದ್ಯ ಅಸಾರಾಂ ಜೋಧಪುರ ಜೈಲಿನಲ್ಲಿದ್ದು, ರಾಜಸ್ಥಾನದ ತನ್ನ ಆಶ್ರಮದಲ್ಲಿ ಅಪ್ರಾಪ್ತ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರವೆಸಗಿದ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಯನ್ನು ಎದುರಿಸುತ್ತಿದ್ದಾನೆ. ಈಗ ಮತ್ತೊಂದು ಪ್ರಕರಣದಲ್ಲೂ ಆತನಿಗೆ ಜೀವಾವಧಿ ಶಿಕ್ಷೆಯಾದಂತಾಗಿದೆ.

**(ಉದಯವಾಣಿ 01-02-2023)**

======================================================

## ಬಾಲಕನಿಂದ 58 ವರ್ಷದ ಮಹಿಳೆ ಮೇಲೆ ಅತ್ಯಾಚಾರ, ಕೊಲೆ

**ರೇವಾ:** ದ್ವೇಷದಿಂದ 16 ವರ್ಷದ ಬಾಲಕನೊಬ್ಬ 58 ವರ್ಷದ ಮಹಿಳೆಯನ್ನು ಅತ್ಯಾಚಾರ ಮಾಡಿ ಕ್ರೂರವಾಗಿ ಹತ್ಯೆ ಮಾಡಿದ ಘಟನೆ ಮಧ್ಯಪ್ರದೇಶದ ರೇವಾ ಜಿಲ್ಲೆಯ ಕೈಲಾಶಪುರಿ ಗ್ರಾಮದಲ್ಲಿ ನಡೆದಿದೆ.

ಬಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಬಾಲಾಪರಾಧಿ ಗೃಹಕ್ಕೆ ಕಳುಹಿಸಿದ್ದಾರೆ. ಎರಡು ವರ್ಷಗಳ ಹಿಂದೆ ಬಾಲಕ, ಮೊಬೈಲ್ ಕಳ್ಳತನ ಮಾಡಿದ್ದಾನೆ ಎಂದು ಮೃತ ಮಹಿಳೆಯ ಕುಟುಂಬದವರು ಆರೋಪಿಸಿದ್ದರು. ಇದರಿಂದ ಗ್ರಾಮದಲ್ಲಿ ತನಗೆ ಅವಮಾನವಾಗಿದೆ ಎಂಬ ದ್ವೇಷದಿಂದ ಜ.30ರಂದು ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಮನೆಗೆ ನುಗ್ಗಿ ಮಹಿಳೆಯನ್ನು ಥಳಿಸಿ, ಬಾಯಿಗೆ ಪಾಲಿಥಿನ್ ತುರುಕಿ ಅತ್ಯಾಚಾರ ಮಾಡಿದ್ದಾನೆ. ಅನಂತರ ಕುಡುಗೋಲಿನಿಂದ ಕೊಚ್ಚಿ ಕ್ರೂರವಾಗಿ ಹತ್ಯೆ ಮಾಡಿದ್ದಾನೆ. ಬಳಿಕ ಮನೆಯಲ್ಲಿದ್ದ ಚಿನ್ನ, ನಗದುನೊಂದಿಗೆ ಅಲ್ಲಿಂದ ಪರಾರಿಯಾಗಿದ್ದ. ಪೊಲೀಸರು ಆತನನ್ನು ಪತ್ತೆಹಚ್ಚಿದ್ದಾರೆ. **(ಉದಯವಾಣಿ 06-02-2023)**

======================================================

## 200 ವರ್ಷಗಳ ಬಳಿಕ ದೇಗುಲಕ್ಕೆ ದಲಿತರ ಪ್ರವೇಶ
## ಭದ್ರತೆಗಾಗಿ 400 ಪೊಲೀಸರ ನಿಯೋಜನೆ!

**ಚೆನ್ನೈ:** ತಮಿಳುನಾಡಿನ ಕಲ್ಲಕುರುಚಿ ಜಿಲ್ಲೆಯ ದೇವಾಲಯವೊಂದಕ್ಕೆ 200 ವರ್ಷಗಳ ಬಳಿಕ ಇದೇ ಮೊದಲಬಾರಿಗೆ ದಲಿತ ಸಮುದಾಯದ ಜನರು ಪ್ರವೇಶಿಸಿದ್ದು, ಅವರ ಭದ್ರತೆಗಾಗಿ 400ಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗಿತ್ತು!

ವೈಕುಂಠ ಏಕಾದಶಿ ಪ್ರಯುಕ್ತ ಎಡುಥೈವನಾಥಂ ಗ್ರಾಮದ ದಲಿತ ಭಕ್ತಾದಿಗಳು ದೇವರಿಗೆ ಕಾಣಿಕೆ ಸಮರ್ಪಿಸಲು ವರದರಾಜ ಪೆರುಮಾಳ್ ದೇವಾಲಯಕ್ಕೆ ಮೆರವಣಿಗೆ ನಡೆಸಿದ್ದಾರೆ. ಹಣ್ಣು, ರೇಷ್ಮೆವಸ್ತ್ರ, ಮಾಲೆಗಳನ್ನು ಕೊಂಡೊಯ್ಯುತ್ತಿದ್ದ ಮೆರವಣಿಗೆಯಲ್ಲಿ 300ಕ್ಕೂ

ಅಧಿಕ ಪರಿಶಿಷ್ಟ ಜಾತಿಯ ಭಕ್ತರು ಭಾಗಿಯಾಗಿದ್ದರು.

200 ವರ್ಷಗಳಿಂದ ಈ ದೇಗುಲಕ್ಕೆ ದಲಿತ ಭಕ್ತಾದಿಗಳಿಗೆ ಪ್ರವೇಶ ನಿರ್ಬಂಧಿಸಲಾಗಿದ್ದು, 2008ರಲ್ಲಿ ನಡೆದ ವಿವಾದದಿಂದಾಗಿ ದೇಗುಲದ ಹಬ್ಬಗಳಲ್ಲಿಯೂ ಭಾಗಿಯಾಗದಂತೆ ನಿರ್ಬಂಧ ವಿಧಿಸಲಾಗಿತ್ತು. ಇಷ್ಟು ವರ್ಷ ಈ ಉತ್ಸವ ದೇಗುಲದ ಆವರಣದ ಹೊರಗೆ ನಡೆಯುತ್ತಿದ್ದು, ಇದೇ ಮೊದಲ ಬಾರಿಗೆ ದಲಿತ ಭಕ್ತಾದಿಗಳು ದೇಗುಲ ಪ್ರವೇಶಿಸಿದ್ದಾರೆ.

ದೇವಾಲಯ ಖಾಸಗಿ ಒಡೆತನದಲ್ಲಿದೆ ಎಂದುಕೊಂಡಿದ್ದ ಹಿನ್ನೆಲೆ ಈವರೆಗೆ ಯಾವುದೇ ದಲಿತರು ಈ ವಿಚಾರ ಸಂಬಂಧಿಸಿದಂತೆ ಧ್ವನಿ ಎತ್ತಿರಲಿಲ್ಲ. ಆದರೆ ದೇಗುಲ ತಮಿಳುನಾಡು ಸರಕಾರದ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿದ್ದು ಎಂದು ತಿಳಿದ ಬಳಿಕ, ಅಸ್ಪೃಶ್ಯತೆ, ಅಸಮಾನತೆಯನ್ನು ತೊಡೆದುಹಾಕಲು ನಿರ್ಧರಿಸಿ ಗ್ರಾಮದ ಎಲ್ಲ ದಲಿತ ಭಕ್ತಾದಿಗಳು ದೇಗುಲ ಪ್ರವೇಶಿಸಲು ನಿರ್ಧರಿಸಿದರು ಎನ್ನಲಾಗಿದೆ.

**(ಉದಯವಾಣಿ 04-01-2023)**

================================================================

## 500 ಹುಡುಗಿಯರು ಒಬ್ಬ ಹುಡುಗ ಹುಡುಗಿಯರನ್ನು ಕಂಡು ಮೂರ್ಛೆ! 12ನೇ ತರಗತಿ ಪರೀಕ್ಷೆಗೆ ತೆರಳಿದ್ದಾಗ ನಡೆದ ಘಟನೆ

**ಪಾಟ್ನಾ:** ಪರೀಕ್ಷೆ ಎನ್ನುವ ಹೆಸರು ಕೇಳುತ್ತಿದ್ದಂತೆ ಪ್ರಶ್ನೆ ಪತ್ರಿಕೆಯನ್ನು ನೋಡನೋಡುತ್ತಿದ್ದಂತೆಯೇ ಗಾಬರಿಗೊಂಡು ಕೆಲವರು ಮೂರ್ಛೆ ಹೋಗುವುದನ್ನು ನೋಡಿರುತ್ತೀರಿ ಅಲ್ಲವೇ? ಇಲ್ಲೊಬ್ಬ ವಿದ್ಯಾರ್ಥಿ ಕೂಡ ಪರೀಕ್ಷೆ ಹಾಲ್‌ನಲ್ಲಿಯೇ ಮೂರ್ಛೆ ಹೋಗಿದ್ದಾನೆ. ಆದರೆ ಅದಕ್ಕೆ ಕಾರಣ ಪ್ರಶ್ನೆ ಪತ್ರಿಕೆಯಲ್ಲ, ಬದಲಿಗೆ ಹೆಣ್ಣುಮಕ್ಕಳು !

ಹೌದು. ಶರೀಫ್ ಅಲ್ಲಮ ಇಟ್ಬಾಲ್ ಕಾಲೇಜಿನ 12ನೇ ತರಗತಿ ವಿದ್ಯಾರ್ಥಿಯಾಗಿರುವ ಮಣಿ ಶಂಕರ್ ಪರೀಕ್ಷೆ ಬರೆಯುವುದಕ್ಕೆಂದು ಬ್ರಿಲಿಯಂಟ್ ಸ್ಕೂಲ್ ಪರೀಕ್ಷಾ ಕೇಂದ್ರಕ್ಕೆ ತೆರಳಿದ್ದಾನೆ. ಈ ವೇಳೆ 500 ವಿದ್ಯಾರ್ಥಿನಿಯರು ಇರುವ ಹಾಲ್‌ನಲ್ಲಿ ತಾನೊಬ್ಬನೇ ಹುಡುಗ ಕುಳಿತು ಪರೀಕ್ಷೆ ಬರೆಯಬೇಕು ಎಂಬುದು ಆತನಿಗೆ ಗೊತ್ತಾಯಿತು. ಈ ವಿಚಾರ ತಿಳಿಯುತ್ತಿದ್ದಂತೆ ಇದಕ್ಕಿದ್ದಂತೆ ಮೂರ್ಛೆ ಹೋಗಿದ್ದಾನೆ. ಅಷ್ಟೇ ಅಲ್ಲ ಗಾಬರಿಗೊಂಡ ಯುವಕನಿಗೆ ಜತೆಗೆ ಚಳಿ-ಜ್ವರವೂ ಬಂದಿದೆ. ಈ ವಿಚಾರ ಜಾಲತಾಣದಲ್ಲೂ ಭಾರೀ ವೈರಲ್ ಆಗಿದೆ.

**(ಉದಯವಾಣಿ 03-02-2023)**

================================================================

## 88.23 ಕೋಟಿ ರೂ.ಗೆ ಬುಗಾಟ್ಟಿ ಕಾರು ಹರಾಜು

**ಪ್ಯಾರಿಸ್:** ಬುಗಾಟ್ಟಿ ಕಂಪೆನಿ ಕೊನೆಯ ಸಂಪೂರ್ಣ ಪೆಟ್ರೋಲ್ ಆಧಾರಿತ ಕಾರನ್ನು ದಾಖಲೆಯ ಬೆಲೆಗೆ ಮಾರಾಟ ಮಾಡಿದೆ. ಸೋಮವಾರ ನಡೆದ ಕಾರು ಹರಾಜಿನಲ್ಲಿ 88.23 ಕೋಟಿ ರೂ.ಗಳಿಗೆ ಬುಗಾಟ್ಟಿ ಕಾರು ಹರಾಜು ಆಗಿದೆ. ಅಲ್ಲದೇ ಇದು ಅತ್ಯಂತ ದುಬಾರಿ ಕಾರು ಎನ್ನುವ ವಿಶ್ವ ದಾಖಲೆಯನ್ನು ನಿರ್ಮಿಸಿದೆ. ಆರ್‌ಎಂ ಪ್ಯಾರಿಸ್ ಕಲೆಕ್ಟರ್ ವತಿಯಿಂದ ನಡೆದ ಕಾರು ಹರಾಜು ಪ್ರಕ್ರಿಯೆಯಲ್ಲಿ ಬುಗಾಟ್ಟಿ ಚಿರಾನ್ ಪ್ರೊಫೈಲ್ ಕಾರು ಆರಂಭದಲ್ಲಿ 9.5 ಮಿಲಿಯನ್ ಡಾಲರ್‌ಗೆ ಬಿಡ್ ಆಯಿತು. ಅಂತಿಮವಾಗಿ 10.7 ಮಿಲಿಯನ್ ಡಾಲರ್ (88.23 ಕೋಟಿ ರೂ.)ಗಳಿಗೆ ಮಾರಾಟವಾಯಿತು. ಬುಗಾಟ್ಟಿ ಚಿರಾನ್ ಕಾರು 2.3 ಸೆಕೆಂಡ್‌ಗಳಲ್ಲಿ ಗಂಟೆಗೆ 100 ಕಿ.ಮೀ. ವೇಗ ಪಡೆಯಲಿದೆ. ಜತೆಗೆ ಅತ್ಯಾಧುನಿಕ ಎಂಜಿನ್ ಹಾಗೂ ಇಂಟೀರಿಯರ್ ಸೌಲಭ್ಯಗಳನ್ನು ಹೊಂದಿದೆ. **(ಉದಯವಾಣಿ 07-02-2023)**

================================================================

## 2011 ರಿಂದೀಚೆಗೆ 16 ಲಕ್ಷಕ್ಕೂ ಅಧಿಕ ಭಾರತೀಯರಿಂದ ಪೌರತ್ವ ತ್ಯಾಗ

**ಹೊಸದಿಲ್ಲಿ, ಫೆ.9:** ಕಳೆದ ವರ್ಷ 2,25,620 ಮಂದಿ ಸೇರಿದಂತೆ 2011ರಿಂದೀಚೆಗೆ 16 ಲಕ್ಷಕ್ಕೂ ಅಧಿಕ ಭಾರತೀಯರು ತಮ್ಮ ಭಾರತೀಯ ಪೌರತ್ವವನ್ನು ತ್ಯಜಿಸಿದ್ದಾರೆಂದು ಕೇಂದ್ರ ಸರಕಾರವು ಗುರುವಾರ ರಾಜ್ಯಸಭೆಗೆ ತಿಳಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್ ಜೈಶಂಕರ್ ಅವರು ಈ ಬಗ್ಗೆ ಕೇಳಲಾದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ, ಕಳೆದ 11 ವರ್ಷಗಳಲ್ಲಿ ಭಾರತೀಯ ಪೌರತ್ವವನ್ನು ತ್ಯಜಿಸಿದವರ ವಿವರಗಳನ್ನು ನೀಡಿದರು. **(ವಾರ್ತಾಭಾರತಿ 10-02-2023)**

================================================================

## ಮಗುವಿನ ಚಿಕಿತ್ಸೆಗೆ 11 ಕೋ.ರೂ. ನೆರವು ನೀಡಿದ ಅನಾಮಿಕ

**ಮುಂಬೈ, ಫೆ. 23:** ಮುಂಬೈಯಲ್ಲಿ ನೆಲೆಸಿರುವ ಕೇರಳ ಮೂಲದ ದಂಪತಿ ತಮ್ಮ 16 ತಿಂಗಳ ಮಗುವಿನ ಚಿಕಿತ್ಸೆಗೆ ಜೀವ ರಕ್ಷಕ ಔಷಧ ಖರೀದಿಸಲು ದೇಣಿಗೆ ಸಂಗ್ರಹಿಸುತ್ತಿದ್ದು, ಅನಾಮಿಕರೊಬ್ಬರು 11 ಕೋ.ರೂ. ನೆರವು ನೀಡಿ ಅಚ್ಚರಿ ಮೂಡಿಸಿದ್ದಾರೆ.

ಸಾರಂಗ್ ಮೆನನ್ ಹಾಗೂ ಅದಿತಿ ಅವರ ಪುತ್ರ ನಿರ್ವಾಣ್ ಸ್ಪೈನಲ್ ಮಸ್ಕ್ಯುಲರ್ ಅಟ್ರೋಫಿ (ಎಸ್‌ಎಂಎ) ರೋಗದಿಂದ ಬಳಲುತ್ತಿದ್ದಾನೆ. ಇದು ಮೆದುಳಿನ ಅಪರೂಪದ ಕಾಯಿಲೆಯಾಗಿದ್ದು, ಇದರ ಚಿಕಿತ್ಸೆಗೆ ಔಷಧದ ಬೆಲೆ ಸುಮಾರು 17.5 ಕೋ.ರೂ. ಆಗಿದ್ದು, ಆರ್ಡರ್ ನೀಡಿದ ಬಳಿಕ ಈ ಔಷಧ ಭಾರತಕ್ಕೆ ತಲುಪಲು 20 ದಿನಗಳನ್ನು ತೆಗೆದುಕೊಳ್ಳುತ್ತದೆ.

ಈ 17.5 ಕೋ. ರೂ. ಸಂಗ್ರಹಿಸಲು ಸಾರಂಗ್ ಹಾಗೂ ಅದಿತಿ ಕೂಡಲೇ ಕ್ರೌಡ್ ಫಂಡಿಂಗ್ ವೇದಿಕೆಗಳಾದ ಮಿಲ್ ???ಪ್ ಹಾಗೂ ಇಂಪ್ಯಾಕ್ಟ್ ಗುರುವಿನಲ್ಲಿ ಖಾತೆ ತೆರೆದಿದ್ದರು. ಅನಾಮಿಕ ವ್ಯಕ್ತಿಯೋರ್ವ ಅವರ ಮಿಲ್ ???ಪ್ ಖಾತೆಗೆ 1.4 ಮಿಲಿಯನ್ ಡಾಲರ್ (ಸುಮಾರು 11 ಕೋ.ರೂ.) ನೆರವು ನೀಡಿದ್ದಾರೆ.

"ನಾವು ಕ್ರೌಡ್ ಫಂಡಿಂಗ್ ಖಾತೆ ಆರಂಭಿಸಿದ ಬಳಿಕ ದಿನನಿತ್ಯ ಪರಿಶೀಲಿಸುತ್ತಿದ್ದೆವು. ಫೆಬ್ರವರಿ 19ರ ವರೆಗೆ ನಾವು 5.5 ಕೋ.ರೂ ಸ್ವೀಕರಿಸಿದ್ದೆವು. ಫೆಬ್ರವರಿ 20ರಂದು ಮೊತ್ತದಲ್ಲಿ ಅತಿ ಹೆಚ್ಚು ಏರಿಕೆಯಾಗಿರುವುದನ್ನು ಗಮನಿಸಿದೆವು. ಈ ಮೊತ್ತ ತಾಂತ್ರಿಕ ತೊಂದರೆಯಿಂದ ಬಂದಿರಬಹುದೇ ಎಂದು ಮಿಲ್ ???ಪ್ ನಿರ್ವಾಹಕರನ್ನು ಸಂಪರ್ಕಿಸಿ ಕೇಳಿದೆವು. ಅದಕ್ಕೆ ಅವರು ಯಾರೋ ಒಬ್ಬರು ಈ ಮೊತ್ತ ನೀಡಿದ್ದಾರೆ ಎಂದು ತಿಳಿಸಿದರು" ಎಂದು ವಾಣಿಜ್ಯ ಹಡಗಿನ ಅಧಿಕಾರಿ ಸಾರಂಗ್ ತಿಳಿಸಿದ್ದಾರೆ.

ಕ್ರೌಡ್ ಫಂಡಿಂಗ್ ಪುಟ ಆರಂಭಿಸಿದಾಗ ಮೆನನ್ ನಿಗದಿ ಪಡಿಸಿದ ಗುರಿ 17.50 ಕೋ.ರೂ. "ಈ ಬೃಹತ್ ದೇಣಿಗೆ ನಮ್ಮನ್ನು ಗುರಿಯ ಹತ್ತಿರಕ್ಕೆ ಕೊಂಡೊಯ್ದಿದೆ ಎಂದು ಹೇಳಲು ಖುಷಿ ಆಗುತ್ತದೆ. ಉಳಿದ ಮೊತ್ತವನ್ನು ನಾವು ಸಂಬಂಧಿಕರು ಹಾಗೂ ಗೆಳೆಯರಿಂದ ಸಂಗ್ರಹಿಸುತ್ತೇವೆ" ಎಂದು ಅವರು ಹೇಳಿದ್ದಾರೆ.

ಔಷಧ ತರಿಸಿಕೊಳ್ಳಲು ಅಗತ್ಯದ ಅನುಮತಿಗಾಗಿ ನಾಯರ್ ಕುಟುಂಬ ಕೇಂದ್ರ ಹಣಕಾಸು ಸಚಿವಾಲಯ ಮತ್ತು ಆಮದು ರಫ್ತು ಇಲಾಖೆಯನ್ನು ಸಂಪರ್ಕಿಸಿದೆ. ಹಿಂದೂಜಾ ಆಸ್ಪತ್ರೆಯ ಮಕ್ಕಳ ನರರೋಗ ತಜ್ಞ ಡಾ. ನೀಲು ದೇಸಾಯಿ ಅವರು ನಿರ್ವಾಣ್‌ಗೆ ಚಿಕಿತ್ಸೆ ನೀಡಲಿದ್ದಾರೆ. **(ವಾರ್ತಾಭಾರತಿ 24-02-2023)**

===

## ಕೋಟಿ ಗಳಿಸುತ್ತಿದ್ದ ಬಾಲಕಿ ನಿವೃತ್ತಿ

**ಕ್ಯಾನ್‌ಬೆರಾ:** 11ನೇ ವಯಸ್ಸಿನಲ್ಲೇ ತಿಂಗಳಿಗೆ 1.1 ಕೋಟಿ ರೂ. ದುಡಿಯುತ್ತಿದ್ದ ಆಸ್ಟ್ರೇಲಿಯಾ ಮೂಲದ ಬಾಲಕಿ ಪಿಕ್ಸಿ, ತನ್ನ ವೃತ್ತಿಯಿಂದ ಅರೆಕಾಲಿಕ ನಿವೃತ್ತಿ ಘೋಷಿಸಿದ್ದಾಳೆ. ಕೊರೊನಾ ಸಂದರ್ಭದಲ್ಲಿ ಅಂದರೆ 3 ವರ್ಷಗಳ ಹಿಂದೆ ಗೊಂಬೆಗಳು, ಹೇರ್ ಆ್ಯಕ್ಸೆಸರೀಸ್‌ಗಳನ್ನು ಮಾರಾಟ ಮಾಡುವ ಹಂಬಲದಿಂದ ತಾಯಿಯ ಸಹಾಯ ಪಡೆದು, ಪಿಕ್ಸಿ ಆನ್‌ಲೈನ್ ಮಳಿಗೆ ಆರಂಭಿಸಿದ್ದಳು. ಆಕೆಯ ಉದ್ಯಮಕ್ಕೆ ಬಹುದೊಡ್ಡ ಬೇಡಿಕೆ ಸೃಷ್ಟಿಯಾಗಿದ್ದಲ್ಲದೇ, ತಿಂಗಳಿಗೆ 1.1 ಕೋಟಿ ರೂ.ವರೆಗಿನ ಆದಾಯ ಗಳಿಸುತ್ತಿದ್ದಳು. ಈಗ ತಾನು ಪ್ರೌಢಶಾಲೆಗೆ ಸೇರ್ಪಡೆಗೊಂಡಿರುವ ಹಿನ್ನೆಲೆ ಶಿಕ್ಷಣದತ್ತ ಗಮನಹರಿಸಿ, ಆನ್‌ಲೈನ್ ಮಳಿಗೆಯ ವೃತ್ತಿಯಿಂದ ಅಲ್ಪ ಸಮಯದ ನಿವೃತ್ತಿ ಪಡೆಯುತ್ತಿರುವುದಾಗಿ ಹೇಳಿದ್ದಾಳೆ. ತನ್ನ ಆದಾಯದಿಂದಲೇ ಪಿಕ್ಸಿ ಮರ್ಸಿಡೀಸ್ ಕಾರು ಕೂಡ ಖರೀದಿಸಿದ್ದಾಳೆ. **(ಉದಯವಾಣಿ 24-02-2023)**

===

## 5 ಬಾರಿ ನಮಾಜ್‌ಗೆ ಕೋರ್ಟ್ ಸೂಚನೆ

**ಮುಂಬಯಿ:** ರಸ್ತೆ ಅಪಘಾತ ಪ್ರಕರಣವೊಂದರಲ್ಲಿ ಆಟೋರಿಕ್ಷಾ ಚಾಲಕನಿಗೆ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೇಗಾಂವ್ ಮಾಜಿಸ್ಟ್ರೇಟ್ ನ್ಯಾಯಾಲಯವು ಶಿಕ್ಷೆಯಾಗಿ ಎರಡು ಗಿಡಗಳನ್ನು ನೆಡುವಂತೆ ಹಾಗೂ ದಿನಕ್ಕೆ ಐದು ಬಾರಿ ನಮಾಜ್ ಮಾಡುವಂತೆ ತಿಳಿಸಿದೆ. 2010ರಲ್ಲಿ ಮಾಲೇಗಾಂವ್‌ನ ಕಿರಿದಾದ ರಸ್ತೆಯಲ್ಲಿ ಆಟೋ ಚಲಾಯಿಸುತ್ತಿದ್ದ ರೌಫ್ ಖಾನ್ (30) ರಸ್ತೆ ಬದಿಯಲ್ಲಿ ನಿಂತಿದ್ದ ಬೈಕ್‌ಗೆ ಢಿಕ್ಕಿ ಹೊಡೆದಿದ್ದಾರೆ. ವಿಚಾರಣೆ ವೇಳೆ ಮುಸ್ಲಿಂ ಸಮುದಾಯಕ್ಕೆ ಸೇರಿದವನಾಗಿದ್ದರೂ ನಮಾಜ್ ಮಾಡುತ್ತಿರಲಿಲ್ಲ ಎಂದು ರೌಫ್ ಖಾನ್ ಹೇಳಿದ್ದಾನೆ. ಈ ಸಂದರ್ಭದಲ್ಲಿ ನ್ಯಾಯಾಧೀಶ ತೇಜ್‌ವಂತ್ ಸಂಧು ಪ್ರತೀ ದಿನಕ್ಕೆ ಐದು ಬಾರಿ ನಮಾಜ್ ಮಾಡುವಂತೆ ಆದೇಶ ನೀಡಿದ್ದಾರೆ. **(ಉದಯವಾಣಿ 02-03-2023)**

===

## ಬೆಂಕಿಯಿಂದ ನಾಶವಾಗಿದ್ದ ಬ್ರಿಟನ್‌ನ ಅತೀದೊಡ್ಡ ಮಸೀದಿ ಪುನರಾರಂಭ

**ಲಂಡನ್, ಮಾ.4:** 2015ರಲ್ಲಿ ಭೀಕರ ಅಗ್ನಿದುರಂತದಲ್ಲಿ ಹಾನಿಗೊಂಡಿದ್ದ ಬ್ರಿಟನ್‌ನ ಅತೀ ದೊಡ್ಡಮಸೀದಿಯನ್ನು ಮರುನಿರ್ಮಾಣ ಮಾಡಲಾಗಿದ್ದು ನವೀಕೃತ ಮಸೀದಿಯನ್ನು ಶನಿವಾರದಿಂದ ಪೂರ್ಣಪ್ರಮಾಣದಲ್ಲಿ ಮತ್ತೆ ತೆರೆಯಲಾಗಿದೆ ಎಂದು ವರದಿಯಾಗಿದೆ.

ದಕ್ಷಿಣ ಲಂಡನ್‌ನ ಮಾರ್ಡನ್‌ಫಿ ಜಿಲ್ಲೆಯಲ್ಲಿರುವ ಅಹ್ಮದೀಯ ಸಮುದಾಯದ ಬೈತುಲ್ ಫುತುಹ್ ಮಸೀದಿಯಲ್ಲಿನ ಬೃಹತ್ ಪ್ರಾರ್ಥನಾ ಸಭಾಂಗಣದಲ್ಲಿ ಏಕಕಾಲಕ್ಕೆ 13,000 ಮಂದಿ ಪ್ರಾರ್ಥನೆ ಸಲ್ಲಿಸಲು ಅವಕಾಶವಿದೆ.

ಬೆಂಕಿ ಅನಾಹುತದಲ್ಲಿ ಪ್ರಾರ್ಥನಾ ಸಭಾಂಗಣಕ್ಕೆ ಹಾನಿಯಾಗಿರದಿದ್ದರೂ ಆಡಳಿತಾತ್ಮಕ ಕಚೇರಿ ಇರುವ ಕಟ್ಟಡ ಹಾನಿಗೊಂಡಿತ್ತು. ಪೋರ್ಚುಗಲ್‌ನಿಂದ ಆಮದು ಮಾಡಿಕೊಂಡ ತಿಳಿಬಣ್ಣದ ಕಲ್ಲುಗಳನ್ನು ಬಳಸಿ 24 ದಶಲಕ್ಷಡಾಲರ್ ವೆಚ್ಚದಲ್ಲಿ ಮಸೀದಿಯನ್ನು ಮರು ನಿರ್ಮಾಣ ಮಾಡಿದ್ದು ಇದರ ವೆಚ್ಚವನ್ನು ಸಮುದಾಯದ ಸದಸ್ಯರೇ ಭರಿಸಿದ್ದಾರೆ ಎಂದು ಮಸೀದಿಯ ಆಡಳಿತ ಸಮಿತಿ ಹೇಳಿದೆ.

**(ವಾರ್ತಾಭಾರತಿ 05-03-2023)**

===

## ಅಮೆರಿಕದಲ್ಲಿ ಗರ್ಭಪಾತ ಮಾತ್ರೆ ನಿಷೇಧ

**ವಾಷಿಂಗ್ಟನ್:** ಗರ್ಭಪಾತ ಮಾತ್ರೆಗಳನ್ನು ಕಾನೂನು ಬದ್ಧಗೊಳಿಸಿರುವ ನಿರ್ಣಯವನ್ನು ತೆಗೆದುಹಾಕುವಂತೆ ಅಮೆರಿಕದಲ್ಲಿ ನಡೆಯುತ್ತಿದ್ದ

ಹೋರಾಟದ ಫಲವಾಗಿ ವ್ಯೋಮಿಂಗ್ ಪ್ರಾಂತದಲ್ಲಿ ಗರ್ಭಪಾತ ಮಾತ್ರೆಗಳನ್ನು ನಿಷೇಧಿಸಲಾಗಿದೆ. ಈ ಮೂಲಕ ಗರ್ಭಪಾತದ ವಿರುದ್ಧದ ಗೆಲುವು ಸಾಧಿಸಿದ ದೇಶದ ಮೊದಲ ಪ್ರಾಂತವೆಂಬ ಖ್ಯಾತಿಗೆ ವ್ಯೋಮಿಂಗ್ ಪಾತ್ರವಾಗಿದೆ. ದೇಶದಲ್ಲಿ ಗರ್ಭಪಾತ ಪ್ರಕರಣಗಳ ಸಂಖ್ಯೆ ಹೆಚ್ಚಿರುವ ಹಿನ್ನೆಲೆ ಸಂಪೂರ್ಣ ಗರ್ಭಪಾತ ನಿಷೇಧಕ್ಕೆ ಆಗ್ರಹಿಸಿ ಹೋರಾಟಗಳು ನಡೆಯುತ್ತಿವೆ. ಅದರ ಮೊದಲ ಹಂತವಾಗಿ ವ್ಯೋಮಿಂಗ್ ಪ್ರಾಂತದಲ್ಲಿ ಗರ್ಭಪಾತ ಮಾತ್ರೆಗಳನ್ನು ನಿಷೇಧಿಸಲಾಗಿದೆ. ಸಂಪೂರ್ಣ ಗರ್ಭಪಾತ ನಿಷೇಧ ನಿರ್ಣಯಕ್ಕೆ ಜನರಿಂದಲೇ ಮತಪಡೆದು ಆ ನಿರ್ಣಯವನ್ನೂ ಶೀಘ್ರವೇ ಜಾರಿಗೊಳಿಸಲಾಗುತ್ತದೆ ಎಂದು ವ್ಯೋಮಿಂಗ್‌ನ ರಿಪಬ್ಲಿಕನ್ ಗವರ್ನರ್ ಮಾರ್ಕ್ ಗಾರ್ಡನ್ ಹೇಳಿದ್ದಾರೆ.
**(ಉದಯವಾಣಿ 20-03-2023)**

==========================================================

## ಸಲಿಂಗರತಿ ಕಿರುಕುಳ ನೀಡಿದ ಪ್ರಕರಣ
## ಮದ್ರಸಾ ಅಧ್ಯಾಪಕನಿಗೆ 53 ವರ್ಷ ಕಠಿನ ಸಜೆ, ದಂಡ

**ಕಾಸರಗೋಡು, ಮಾ. 31:** ಇಬ್ಬರು ಮದ್ರಸಾ ವಿದ್ಯಾರ್ಥಿಗಳಿಗೆ ಸಲಿಂಗರತಿ ಲೈಂಗಿಕ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿ ಮದ್ರಸಾ ಅಧ್ಯಾಪಕ ಬಂಟ್ವಾಳದ ವಿಟ್ಲಪಡ್ನೂರು ಗ್ರಾಮದ ಬದ್ರಕಡಂಬು ನಿವಾಸಿ ಅಬ್ದುಲ್ ಹನೀಫ್ ಮದನಿ (44)ಗೆ ಕಾಸರಗೋಡು ಹೆಚ್ಚುವರಿ ಜಿಲ್ಲಾ ಸೆಶನ್ಸ್ ನ್ಯಾಯಾಲಯ (ಪ್ರಥಮ) ಫೋಕ್ಸೋ ಕಾನೂನು ಹಾಗೂ ಇತರ ಸೆಕ್ಷನ್‌ನಡಿ ಒಟ್ಟು 53 ವರ್ಷ ಕಠಿನ ಸಜೆ ಮತ್ತು 3.25 ಲಕ್ಷ ರೂ. ದಂಡ ವಿಧಿಸಿ ತೀರ್ಪು ನೀಡಿದೆ. ದಂಡ ಪಾವತಿಸದಿದ್ದಲ್ಲಿ ಮೂರೂವರೆ ವರ್ಷ ಹೆಚ್ಚುವರಿ ಸಜೆ ಅನುಭವಿಸುವಂತೆ ತೀರ್ಪಿನಲ್ಲಿ ತಿಳಿಸಿದೆ. ಫೋಕ್ಸೊದ ಎರಡು ಸೆಕ್ಷನ್‌ಗಳಡಿ ನ್ಯಾಯಾಲಯ ತಲಾ 20 ವರ್ಷ ಸಜೆ, ಐಪಿಸಿಯ ಎರಡು ಸೆಕ್ಷನ್‌ಗಳಡಿ 13 ವರ್ಷ ಸಹಿತ ಒಟ್ಟು 53 ವರ್ಷ ಸಜೆ ವಿಧಿಸಿದೆ. ದಂಡದ ಹಣವನ್ನು ಇಬ್ಬರು ಬಾಲಕರಿಗೆ ನೀಡುವಂತೆಯೂ ತೀರ್ಪಿನಲ್ಲಿ ತಿಳಿಸಿದೆ. ಶಿಕ್ಷೆಯನ್ನು ಒಟ್ಟಿಗೆ ಅನುಭವಿಸಿದರೆ ಸಾಕೆಂದು ತೀರ್ಪಿನಲ್ಲಿ ತಿಳಿಸಿದೆ. ಅಂಬಲತ್ತರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. 2016ರಲ್ಲಿ ಹಲವು ದಿನಗಳಲ್ಲಿ 10 ಮತ್ತು 11 ವರ್ಷದ ಇಬ್ಬರು ಮದ್ರಸಾ ವಿದ್ಯಾರ್ಥಿಗಳಿಗೆ ಸಲಿಂಗರತಿ ಕಿರುಕುಳ ನೀಡಿರುವುದಾಗಿ ನೀಡಲಾದ ದೂರಿನಂತೆ ಪೊಲೀಸರು ಕೇಸು ದಾಖಲಿಸಿದ್ದರು. ಇದೇ ರೀತಿಯ ಇನ್ನೊಂದು ಪ್ರಕರಣವೊಂದರಲ್ಲಿ ಎರಡು ವರ್ಷಗಳ ಹಿಂದೆ ಈತನಿಗೆ ನ್ಯಾಯಾಲಯ 20 ವರ್ಷ ಸಜೆ ವಿಧಿಸಿತ್ತು. **(ಉದಯವಾಣಿ 01-04-2023)**

==========================================================

## ಗರ್ಭಿಣಿಗೆ ಮರಣದಂಡನೆ ಶಿಕ್ಷೆ

**ಉ.ಕೊರಿಯಾ. ಪ್ಯೋಂಗ್ಯಾಂಗ್, ಎ.1:** ಉತ್ತರ ಕೊರಿಯಾದ ಸಂಸ್ಥಾಪಕ ಕಿಮ್ ಸುಂಗ್‌ರ ಭಾವಚಿತ್ರದತ್ತ ಬೆರಳು ತೋರಿಸಿ ಅಪರಾಧ ಎಸಗಿದ್ದಾರೆ ಎಂಬ ಕಾರಣಕ್ಕೆ 6 ತಿಂಗಳ ಗರ್ಭಿಣಿಗೆ ಅಲ್ಲಿನ ಸರಕಾರ ಮರಣದಂಡನೆ ಶಿಕ್ಷೆ ವಿಧಿಸಿದೆ ಎಂದು ದಕ್ಷಿಣ ಕೊರಿಯಾ ವರದಿ ಮಾಡಿದೆ.

ಉತ್ತರ ಕೊರಿಯಾದಲ್ಲಿ ನಡೆಯುತ್ತಿರುವ ವ್ಯಾಪಕ ಮಾನವಹಕ್ಕುಗಳ ಉಲ್ಲಂಘನೆಗೆ ಇದೊಂದು ಸ್ಪಷ್ಟ ಉದಾಹರಣೆಯಾಗಿದೆ ಎಂದು ಕೊರಿಯಾದ ಆಂತರಿಕ ವ್ಯವಹಾರಗಳನ್ನು ನಿರ್ವಹಿಸುವ ಸಚಿವಾಲಯದ 450 ಪುಟಗಳ ವರದಿಯಲ್ಲಿ ಉಲ್ಲೇಖಿಸಲಾಗಿದೆ. 2017ರಿಂದ 2022ರ ಅವಧಿಯಲ್ಲಿ ದೇಶದಿಂದ ಪಲಾಯನ ಮಾಡಿರುವ 500ಕ್ಕೂ ಅಧಿಕ ಉತ್ತರ ಕೊರಿಯಾ ನಾಗರಿಕರ ಹೇಳಿಕೆಯನ್ನು ಆಧರಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ. ಉತ್ತರ ಕೊರಿಯಾದ ನಾಗರಿಕರ ಬದುಕುವ ಹಕ್ಕಿಗೆ ಹೆಚ್ಚಿನ ಬೆದರಿಕೆ ಇರುವುದನ್ನು ಇದು ಸ್ಪಷ್ಟಪಡಿಸಿದೆ ಎಂದು ಸಚಿವಾಲಯ ಹೇಳಿದೆ.

ಮಾದಕ ವಸ್ತುಗಳಿಗೆ ಸಂಬಂಧಿಸಿದ ಅಪರಾಧ, ದಕ್ಷಿಣ ಕೊರಿಯಾದ ವೀಡಿಯೊಗಳನ್ನು ಪ್ರಸಾರ ಮಾಡಿರುವುದು, ಧಾರ್ಮಿಕ ಮತ್ತು ಮೂಢನಂಬಿಕೆ ಚಟುವಟಿಕೆಗಳಿಗೂ ಉತ್ತರ ಕೊರಿಯಾದಲ್ಲಿ ಮರಣದಂಡನೆ ಶಿಕ್ಷೆ ನೀಡಲಾಗುತ್ತದೆ. 6 ತಿಂಗಳ ಗರ್ಭಿಣಿಯೊಬ್ಬಳು ತನ್ನ ಮನೆಯಲ್ಲಿ ನೃತ್ಯ ಮಾಡುತ್ತಿದ್ದಾಗ ಉತ್ತರ ಕೊರಿಯಾದ ಸಂಸ್ಥಾಪಕರ ಭಾವಚಿತ್ರದತ್ತ ಬೆರಳು ತೋರಿಸಿದಳು ಎಂಬ ಕಾರಣಕ್ಕೆ ಆಕೆಗೆ ಮರಣದಂಡನೆ ಶಿಕ್ಷೆ ನೀಡಲಾಗಿದೆ. 16 ವರ್ಷದ 6 ಯುವಕರು ತಮ್ಮ ಮನೆಯಲ್ಲಿ ದಕ್ಷಿಣ ಕೊರಿಯಾದ ವೀಡಿಯೊ ವೀಕ್ಷಿಸುತ್ತಿದ್ದರು ಎಂಬ ಕಾರಣಕ್ಕೆ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಕೆಲವು ಕುಟುಂಬಗಳನ್ನು ಬೆದರಿಸಿ ಅಥವಾ ಬ್ಲ್ಯಾಕ್‌ಮೇಲ್ ಮಾಡಿ ಸದಸ್ಯರನ್ನು ವೈದ್ಯಕೀಯ ಪ್ರಯೋಗಕ್ಕೆ ಬಳಸಿಕೊಳ್ಳಲಾಗುತ್ತಿದೆ. ಕೆಲವು ಮಹಿಳೆಯರ ಗರ್ಭಕೋಶಗಳನ್ನು ಬಲವಂತ ಶಸ್ತ್ರಚಿಕಿತ್ಸೆಯ ಮೂಲಕ ತೆಗೆಯಲಾಗುತ್ತಿದೆ ಎಂದು ವರದಿ ಹೇಳಿದೆ. **(ವಾರ್ತಾಭಾರತಿ 02-04-2023)**

==========================================================

## ಗುಜರಾತ್ ಹತ್ಯಾಕಾಂಡ, ಸಾಮೂಹಿಕ ಅತ್ಯಾಚಾರ, ಹತ್ಯೆ ಪ್ರಕರಣ
## ಎಲ್ಲ 26 ಆರೋಪಿಗಳ ಖುಲಾಸೆ

**ಗೋದ್ರಾ, ಎ.2:** 2002ರ ಗುಜರಾತ್ ಕೋಮು ಗಲಭೆ ಸಂದರ್ಭ ಕಲೋಲ್‌ನಲ್ಲಿ ಸಂಭವಿಸಿದ್ದ ಪ್ರತ್ಯೇಕ ಘಟನೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ 12ಕ್ಕೂ ಅಧಿಕ ಜನರ ಹತ್ಯೆ ಹಾಗೂ ಸಾಮೂಹಿಕ ಅತ್ಯಾಚಾರ ಪ್ರಕರಣದ ಎಲ್ಲ 26 ಆರೋಪಿಗಳನ್ನು ಗುಜರಾತ್ ನ್ಯಾಯಾಲಯ ಖುಲಾಸೆಗೊಳಿಸಿದೆ.

ಪಂಚಮಹಲ್ ಜಿಲ್ಲೆಯ ಹಲೋಲ್‌ನಲ್ಲಿರುವ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಲೀಲಾಭ್ಯಾ ಚೂಡಾಸಮಾ ಅವರು ಹತ್ಯೆ, ಸಾಮೂಹಿಕ ಅತ್ಯಾಚಾರ ಹಾಗೂ ಗಲಭೆ ಪ್ರಕರಣದ 26 ಆರೋಪಿಗಳನ್ನು ಸಾಕ್ಷ್ಯಾಧಾರದ ಕೊರತೆಯಿಂದ ಶುಕ್ರವಾರ ಖುಲಾಸೆಗೊಳಿಸಿದರು.

"ಪ್ರಕರಣದ ಒಟ್ಟು 39 ಆರೋಪಿಗಳಲ್ಲಿ 13 ಮಂದಿ ವಿಚಾರಣೆ ಸಂದರ್ಭ ಸಾವನ್ನಪ್ಪಿದ್ದರು. ಅವರ ವಿರುದ್ಧದ ವಿಚಾರಣೆಯನ್ನು ಕೈಬಿಡಲಾಗಿದೆ" ಎಂದು ನ್ಯಾಯಾಲಯ ಆದೇಶದಲ್ಲಿ ಹೇಳಿದೆ. **(ವಾರ್ತಾಭಾರತಿ 03–04–2023)**

===========================================================================

## ಮತ್ತೊಂದು ಭೂಮಿಯ ಸುಳಿವು!

**ನ್ಯೂಯಾರ್ಕ್:** ನಾವಿರುವ ಭೂಮಿಯಂತೆ ಬ್ರಹ್ಮಾಂಡದಲ್ಲಿ ಇನ್ನೊಂದು ಭೂಮಿಯಿರಬಹುದಾ ಎಂಬ ಪ್ರಶ್ನೆಗೆ ಅಮೆರಿಕದ ವಿಜ್ಞಾನಿಗಳಿಗೆ ಅಚ್ಚರಿಯ ಸುಳಿವೊಂದು ಸಿಕ್ಕಿದೆ. ಭೂಮಿಯಿಂದ 12 ಜ್ಯೋತಿವರ್ಷಗಳಷ್ಟು (72 ಟ್ರಿಲಿಯನ್ ಮೈಲ್ಸ್) ದೂರವಿರುವ 'ವೈಜೆಡ್ ಸೆಟಿ ಬಿ' ಎಂದು ಗ್ರಹವು ಖಗೋಳಶಾಸ್ತ್ರಜ್ಞರ ಕುತೂಹಲವನ್ನು ಕೆರಳಿಸಿದೆ. ಅಮೆರಿಕ ರಾಷ್ಟ್ರೀಯ ವಿಜ್ಞಾನ ಫೌಂಡೇಶನ್ ವತಿಯಿಂದ ಕಾರ್ಯನಿರ್ವಹಿಸುವ ರೇಡಿಯೊ ದೂರದರ್ಶಕ 'ಕಾರ್ಲ್ ಜಿ. ಜಾನ್ಸ್ಕಿ ವೆರಿ ಲಾರ್ಜ್ ಅರೆ' ಮೂಲಕ ವೈಜೆಡ್ ಸೆಟಿ ಬಿ ಗ್ರಹ ಮತ್ತು ಇದರ ನಕ್ಷತ್ರ 'ವೈಜೆಡ್ ಸೆಟಿ' ಅನ್ನು ಖಗೋಳಶಾಸ್ತ್ರಜ್ಞರು ಅಧ್ಯಯನ ನಡೆಸಿದ್ದಾರೆ. ವೈಜೆಡ್ ಸೆಟಿ ನಕ್ಷತ್ರದ ಮೂಲಕ ಪದೇ ಪದೇ ಸಿಗ್ನಲ್‌ಗಳು ಹೊರಹೊಮ್ಮುತ್ತಿರುವುದನ್ನು ಖಗೋಳಶಾಸ್ತ್ರಜ್ಞರು ಗಮನಿಸಿದ್ದಾರೆ. ಈ ಸಿಗ್ನಲ್‌ಗಳು ಗ್ರಹದ ಕಾಂತಕ್ಷೇತ್ರ ಮತ್ತು ಅದು ಪರಿಭ್ರಮಿಸುವ ನಕ್ಷತ್ರದ ನಡುವಿನ ಪರಸ್ಪರ ಕ್ರಿಯೆಗಳಿಂದ ಉತ್ಪತ್ತಿಯಾಗಿದೆ. ಇದರ ಸಿಗ್ನಲ್‌ಗಳು ಶಕ್ತಿಯುತವಾಗಿವೆ. ಭೂಮಿಯಂತೆ ಈ ಗ್ರಹದ ಮೇಲೆ ವಾಸಯೋಗ್ಯ ಸ್ಥಳ ಇರುವ ಬಗ್ಗೆ ಈ ಸಿಗ್ನಲ್‌ಗಳು ಸುಳಿವು ನೀಡುತ್ತಿವೆ ಎಂದು ಖಗೋಳಶಾಸ್ತ್ರಜ್ಞರು ತಿಳಿಸಿದ್ದಾರೆ. **(ಉದಯವಾಣಿ 07–04–2023)**

===========================================================================

## ಕೋಮು ಗಲಭೆ ಪ್ರಚೋದಿಸಲು ಹಿಂದೂ ಮಹಾಸಭಾ ಕಾರ್ಯಕರ್ತರಿಂದ ಗೋಹತ್ಯೆ

### * ಉತ್ತರ ಪ್ರದೇಶ ಪೊಲೀಸರಿಂದ ಇಬ್ಬರ ಬಂಧನ

### * ರಾಷ್ಟ್ರೀಯ ಅಧ್ಯಕ್ಷ ಸಂಜಯ್ ಜಾಟ್ ಪ್ರಧಾನ ಪಿತೂರಿಗಾರ

**ಆಗ್ರಾ, ಏ.8:** ರಾಮನವಮಿ ಮೆರವಣಿಗೆ ಸಂದರ್ಭ ಆಗ್ರಾದಲ್ಲಿ ಕೋಮು ಗಲಭೆಗೆ ಪ್ರಚೋದಿಸಲು ಅಖಿಲ ಭಾರತ್ ಹಿಂದೂ ಮಹಾಸಭಾದ ಕೆಲವು ಕಾರ್ಯಕರ್ತರು ಗೋವುಗಳನ್ನು ಹತ್ಯೆಗೈದಿದ್ದಾರೆ ಎಂದು ಉತ್ತರಪ್ರದೇಶ ಪೊಲೀಸರು ಶನಿವಾರ ಬಹಿರಂಗಪಡಿಸಿದ್ದಾರೆ.

ರಾಮನವಮಿಯ ಸಂದರ್ಭ ಗೋಹತ್ಯೆ ನಡೆಸಿದ ಆರೋಪದಲ್ಲಿ ಇಬ್ಬರು ಯುವಕರನ್ನು ಆಗ್ರಾ ಪೊಲೀಸರು ಬಂಧಿಸಿದ್ದಾರೆ. ಈ ಗೋಹತ್ಯೆ ಪ್ರಕರಣದಲ್ಲಿ ಅಖಿಲ ಭಾರತ್ ಹಿಂದೂ ಮಹಾಸಭಾದ ಹಲವು ಕಾರ್ಯಕರ್ತರ ಹೆಸರುಗಳು ಕೇಳಿ ಬಂದಿವೆ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ. **(ವಾರ್ತಾಭಾರತಿ 07–04–2023)**

===========================================================================

## ತ.ನಾ.: ದಲಿತರಿಗೆ ದೇವಾಲಯ ಪ್ರವೇಶ ನಿಷೇಧ

**ಚೆನ್ನೈ, ಏ.8:** ತಮಿಳುನಾಡಿನ ವಿಲ್ಲುಪುರಂ ಜಿಲ್ಲೆಯ ಕೊಲಿಯನೂರು ಸಮೀಪದ ಮೇಲ್ಪತಿ ಗ್ರಾಮದಲ್ಲಿರುವ ದ್ರೌಪದಿ ಅಮ್ಮನ್ ದೇವಾಲಯ ಪ್ರವೇಶಿಸಲು ದಲಿತರಿಗೆ ಪ್ರಬಲ ಸಮುದಾಯದವರು ತಡೆ ಒಡ್ಡಿದ ಘಟನೆ ನಡೆದಿದೆ.

ಪರಿಶಿಷ್ಟ ಜಾತಿಯಾದ ಕಂಧನ್, ಕದಿರವಾನ್ ಹಾಗೂ ಕುರ್ಪಗಂಗೆ ಸೇರಿದ ಜನರು ಉತ್ಸವದ ಹಿನ್ನೆಲೆಯಲ್ಲಿ ದ್ರೌಪದಿ ಅಮ್ಮನ್ ದೇವಾಲಯಕ್ಕೆ ಪ್ರವೇಶಿಸಲು ಪ್ರಯತ್ನಿಸಿದರು. ಆದರೆ, ಪ್ರಬಲ ಜಾತಿಗಳ ಜನರು ಅವರ ಪ್ರವೇಶಕ್ಕೆ ತಡೆ ಒಡ್ಡಿದರು. ಅಲ್ಲದೆ, ದೇವಾಲಯದಿಂದ ಹೊರಗೆ ಹೋಗುವಂತೆ ಹಾಗೂ ಹೊರಗಡೆ ಪ್ರಾರ್ಥಿಸುವಂತೆ ಸೂಚಿಸಿದರು ಎನ್ನಲಾಗಿದೆ. **(ವಾರ್ತಾಭಾರತಿ 07–04–2023)**

===========================================================================

## *11 ಆದಿವಾಸಿ ಮಹಿಳೆಯರ ಸಾಮೂಹಿಕ ಅತ್ಯಾಚಾರ ಪ್ರಕರಣ*

## *ಎಲ್ಲ 13 ಮಂದಿ ಆರೋಪಿಗಳ ಖುಲಾಸೆ*

**ವಿಶಾಖಪಟ್ಟಣ, ಏ.8:** ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮ ರಾಜು ಜಿಲ್ಲೆಯಲ್ಲಿ 11 ಆದಿವಾಸಿ ಮಹಿಳೆಯರ ಮೇಲೆ ಪೊಲೀಸ್ ಸಿಬ್ಬಂದಿಯ ಗುಂಪೊಂದು ಸಾಮೂಹಿಕ ಅತ್ಯಾಚಾರ ನಡೆಸಿದ ಪ್ರಕರಣದ ತೀರ್ಪು 16 ವರ್ಷಗಳ ಬಳಿಕ ಕೊನೆಗೂ ಪ್ರಕಟವಾಗಿದ್ದು, ನ್ಯಾಯಾಲಯ ಎಲ್ಲ 13 ಆರೋಪಿಗಳನ್ನು ಖುಲಾಸೆಗೊಳಿಸಿದೆ.

ನ್ಯಾಯಯುತ ಹಾಗೂ ನಿಷ್ಪಕ್ಷ ತನಿಖೆ ನಡೆಸುವಲ್ಲಿ ತನಿಖಾಧಿಕಾರಿಗಳ ವೈಫಲ್ಯವೇ ಆರೋಪಿಗಳ ಖುಲಾಸೆಗೆ ಪ್ರಮುಖ ಕಾರಣ ಎಂದು ನ್ಯಾಯಾಲಯ ಉಲ್ಲೇಖಿಸಿದೆ.

ವಿಶಾಖಪಟ್ಟಣದಲ್ಲಿರುವ 11ನೇ ಹೆಚ್ಚುವರಿ ಜಿಲ್ಲಾ ಸೆಷನ್ಸ್ ನ್ಯಾಯಾಧೀಶ ಹಾಗೂ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಎಪ್ರಿಲ್ 6ರಂದು ತೀರ್ಪು ಘೋಷಿಸಿದರು.

**(ವಾರ್ತಾಭಾರತಿ 09–04–2023)**

## ಇ.ಡಿ.ಯಿಂದ ಬಿಷಪ್ ಬಂಧನ

**ಭೋಪಾಲ್:** ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಮಧ್ಯಪ್ರದೇಶದ ಪದಚ್ಯುತ ಬಿಷಪ್ ಒಬ್ಬರನ್ನು ಜಾರಿ ನಿರ್ದೇಶನಾಲಯ (ಇ.ಡಿ.) ಬಂಧಿಸಿದೆ. ಜಬಲ್ಪುರ್‌ನ ಸಿಎನ್‌ಐನಿಂದ (ಚರ್ಚ್ ಆಫ್ ನಾರ್ಥ್ ಇಂಡಿಯಾ) ವಜಾಗೊಂಡಿರುವ ಬಿಷಪ್ ಪಿ.ಸಿ. ಸಿಂಗ್ ಅವರನ್ನು ಬುಧವಾರ ರಾತ್ರಿ ಇ.ಡಿ. ಅಧಿಕಾರಿಗಳು ಬಂಧಿಸಿದ್ದಾರೆ. ಆರೋಪಿಯನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಕೋರ್ಟ್‌ಗೆ ಗುರುವಾರ ಹಾಜರುಪಡಿಸಲಾಗುವುದು. ಅಲ್ಲದೇ ಇ.ಡಿ ವಶಕ್ಕೆ ನೀಡುವಂತೆ ಮನವಿ ಮಾಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಳೆದ ತಿಂಗಳು ಸಿಂಗ್ ಅವರ ಮನೆ ಮೇಲೆ ದಾಳಿ ನಡೆಸಿದ್ದ ಇ.ಡಿ ಅಧಿಕಾರಿಗಳು, ಅನೇಕ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು. ಜಾರ್ಖಂಡ್‌ನ ರಾಂಚಿಯಲ್ಲಿ ಅಕ್ರಮವಾಗಿ ಭೂಮಿ ಖರೀದಿಸಿರುವ ಆರೋಪವಿದೆ. ಚರ್ಚ್ ನಡೆಸುತ್ತಿದ್ದ ವಿವಿಧ ಶಾಲೆಗಳಲ್ಲಿ 2004–05ರಿಂದ 2011–12ರ ನಡುವೆ ವಿದ್ಯಾರ್ಥಿಗಳಿಂದ ಸಂಗ್ರಹಿಸಿದ್ದ 2.70 ಕೋಟಿ ರೂ.ಗಳಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಇವರ ಮೇಲಿದೆ. **(ಉದಯವಾಣಿ 14–04–2023)**

==========================================================================

## ಇಷ್ಟದೇವತೆಯ ಮೆಚ್ಚಿಸಲು ತಲೆಯನ್ನೇ ಕತ್ತರಿಸಿಕೊಂಡ ದಂಪತಿ
## ಅಗ್ನಿಕುಂಡಕ್ಕೆ ರುಂಡ ಸಮರ್ಪಿಸಿದರು!

**ಅಹ್ಮದಾಬಾದ್:** ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಧಾರ್ಮಿಕ ಮೌಢ್ಯಕ್ಕೊಳಗಾದ ದಂಪತಿ ಇಷ್ಟದೇವತೆಯನ್ನು ಮೆಚ್ಚಿಸುವ ಸಲುವಾಗಿ ತಮ್ಮ ರುಂಡವನ್ನೇ ಕತ್ತರಿಸಿಕೊಂಡು ಅಗ್ನಿಕುಂಡಕ್ಕೆ ಸಮರ್ಪಿಸಿರುವ ಭೀಕರ ಘಟನೆ ವರದಿಯಾಗಿದೆ. ಹೇಮು ಭಾಯ್ ಮಕ್ವಾನಾ ಹಾಗೂ ಹಂಸಾಬೇನ್ ಎನ್ನುವ ದಂಪತಿ ಅಪಾರ ದೈವಭಕ್ತರಾಗಿದ್ದು, ಇಷ್ಟಾರ್ಥ ಸಿದ್ಧಿಗಾಗಿ ಭಕ್ತಿಯ ಪರಾಕಷ್ಠೆಯಿಂದ ಇಂಥ ಮೌಢ್ಯಕೃತ್ಯಕ್ಕೆ ಬಲಿಯಾಗಿದ್ದಾರೆ. ತಮ್ಮ ತಲೆ ಕತ್ತರಿಸಿಕೊಳ್ಳುವ ಮುನ್ನ ಆತ್ಮಹತ್ಯೆ ಪತ್ರವನ್ನೂ ಬರೆದಿಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಚಿತ್ರವೆಂದರೆ ಒಂದೇ ಸಮಯದಲ್ಲಿ ರುಂಡ ಕತ್ತರಿಸಿ ಅಗ್ನಿಕುಂಡಕ್ಕೆ ಹಾಕಬೇಕಿದ್ದ ಕಾರಣ, ತಲೆಗಳು ತಾವಾಗಿಯೇ ಅಗ್ನಿಕುಂಡಕ್ಕೆ ಉರುಳಿ ಬೀಳುವಂತೆ ಮೊದಲೇ ಸಾಧನಗಳನ್ನೂ ಸಿದ್ದಪಡಿಸಿದ್ದಾರೆ. ಹಗ್ಗದಿಂದ ಕಟ್ಟಿದ್ದ ಹರಿತವಾದ ಕಬ್ಬಿಣದ ಗರಗಸದ ರೀತಿಯ ಬ್ಲೇಡ್ ಸಿದ್ಧಪಡಿಸಿ, ಅದರ ಕೆಳಗೆ ಕುತ್ತಿಗೆ ಇಟ್ಟು ಹಗ್ಗ ಎಳೆದಿದ್ದಾರೆ. ಇದರಿಂದ ಕುತ್ತಿಗೆ ಕತ್ತರಿಸಿಕೊಂಡು, ಅಗ್ನಿ ಕುಂಡಕ್ಕೆ ಬೀಳುವಂತೆ ಸಿದ್ಧತೆ ನಡೆಸಿದ್ದಾರೆಂದು ಗೊತ್ತಾಗಿದೆ.

ಇಬ್ಬರು ಮಕ್ಕಳು ಹಾಗೂ ತಂದೆ–ತಾಯಿಯ ಜತೆಗೆ ವಾಸವಾಗಿದ್ದ ದಂಪತಿ ಕಳೆದ ಒಂದು ವರ್ಷದಿಂದ ನಿತ್ಯವೂ ಪೂಜೆ ಸಲ್ಲಿಸುತ್ತಿದ್ದರು. ಶನಿವಾರ ಯಾರೂ ಇಲ್ಲದ ಸಂದರ್ಭದಲ್ಲಿ ಇಷ್ಟದೇವತೆ ಮೆಚ್ಚಿಸಲು ಈ ರೀತಿ ರುಂಡವನ್ನೇ ಕತ್ತರಿಸಿಕೊಂಡಿದ್ದಾರೆ. ಮೃತದೇಹಗಳನ್ನು ಪೊಲೀಸರು ವಶಪಡಿಸಿಕೊಂಡು, ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ. **(ಉದಯವಾಣಿ 18–04–2023)**

==========================================================================

## ಅತ್ಯಾಚಾರಿಗಳ ಬಿಡುಗಡೆ ಕ್ರಮ ಸರಿಯಲ್ಲ
## * ಬಿಲ್ಕಿಸ್ ಪ್ರಕರಣದಲ್ಲಿ ಸುಪ್ರೀಂ ಟೀಕೆ

**ಹೊಸದಿಲ್ಲಿ:** ಬಿಲ್ಕಿಸ್ ಬಾನೋ ಅತ್ಯಾಚಾರ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗಿದ್ದ 11 ಮಂದಿಯನ್ನು ಬಿಡುಗಡೆ ಮಾಡಿದ ಕೇಂದ್ರ ಮತ್ತು ರಾಜ್ಯ ಸರಕಾರಗಳ ನಿಲುವಿನ ಬಗ್ಗೆ ಸುಪ್ರೀಂಕೋರ್ಟ್ ಕಟುವಾಗಿ ಆಕ್ಷೇಪ ಮಾಡಿದೆ. 'ಈಗ ಬಿಲ್ಕಿಸ್ ಬಾನೋ ವಿರುದ್ಧ ಅತ್ಯಾಚಾರ ಮಾಡಿದವರನ್ನು ಬಿಡುಗಡೆ ಮಾಡುತ್ತೀರಿ. ಮುಂದೆ ಇನ್ನು ಯಾರನ್ನೋ' ಎಂದು ನ್ಯಾ| ಕೆ.ಎಂ. ಜೋಸೆಫ್ ಮತ್ತು ನ್ಯಾ| ಬಿ.ವಿ. ನಾಗರತ್ನಾ ಅವರನ್ನೊಳಗೊಂಡ ನ್ಯಾಯಪೀಠ ಕಟುವಾಗಿ ಪ್ರಶ್ನೆ ಮಾಡಿದೆ. ಅವಧಿಗಿಂತ ಮೊದಲೇ ಸನ್ನಡತೆಯ ಆಧಾರದಲ್ಲಿ ಅವರನ್ನು ಬಿಡುಗಡೆ ಮಾಡಲು ಕಾರಣವಾದ ನಿರ್ಧಾರಗಳು ಯಾವುವು ಎಂದೂ ನ್ಯಾಯಪೀಠ ಪ್ರಶ್ನೆ ಮಾಡಿದೆ. 3 ವರ್ಷಗಳ ಅವಧಿಯಲ್ಲಿ ಆರೋಪಿಗಳಿಗೆ 1 ಸಾವಿರ ದಿನಗಳ ಕಾಲ ಪರೋಲ್ ನೀಡಲಾಗಿದೆ. ಅವರಿಗೆ ನೀಡಲಾಗಿರುವ ಈ ಸವಲತ್ತೇ ಒಂದು ಅಪರಾಧದಂತೆ ಇದೆ ಎಂದು ನ್ಯಾಯಪೀಠ ಕಟು ಶಬ್ದಗಳಿಂದ ಆಕ್ಷೇಪಿಸಿತು. ಇದಕ್ಕೂ ಮುನ್ನ ಸುಪ್ರೀಂಕೋರ್ಟ್ ಮಾ. 27ರಂದು ಶಿಕ್ಷೆ ತಗ್ಗಿಸಲು ಕಾರಣವಾಗಿದ್ದ ಅಂಶಗಳ ಬಗೆಗಿನ ಕಡತ ಸಿದ್ಧಗೊಳಿಸಿ ಎಂಬ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲೂ ಅವಕಾಶ ಕಲ್ಪಿಸಿಕೊಡಲು ಪೀಠ ಒಪ್ಪಿತು.
**(ಉದಯವಾಣಿ 19–04–2023)**

==========================================================================

## ದಂಗೆ ಕೇಸಲ್ಲಿ ವಿಶೇಷ ಕೋರ್ಟ್ ತೀರ್ಪು
## ನರೋಡಾ: 67 ಮಂದಿ ಖುಲಾಸೆ
## ಮಾಯಾ ಕೊಡ್ನಾನಿ, ಬಾಬು ಬಜರಂಗಿ ದೋಷಮುಕ್ತಿ ಗೊಂಡ ಪ್ರಮುಖರು

**ಅಹ್ಮದಾಬಾದ್:** ಗುಜರಾತ್‌ನಲ್ಲಿ 2002ರಲ್ಲಿ ನಡೆದಿದ್ದ ಗಲಭೆ ಅವಧಿಯಲ್ಲಿ ನಡೆದಿದ್ದ ನರೋಡಾ ಗಾಮ್ ದಂಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲ 67 ಮಂದಿಯನ್ನು ಖುಲಾಸೆ ಮಾಡಲಾಗಿದೆ. ಅವರ ಪೈಕಿ ಬಿಜೆಪಿಯ ಹಿರಿಯ ನಾಯಕಿ, ಮಾಜಿ ಸಚಿವೆ ಮಾಯಾ

ಕೊಡ್ನಾನಿ, ಬಜರಂಗ ದಳದ ನಾಯಕ ಬಾಬು ಬಜರಂಗಿ ಪ್ರಮುಖರಾಗಿದ್ದಾರೆ. ಅಹ್ಮದಾಬಾದ್‌ನಲ್ಲಿ ಇರುವ ವಿಶೇಷ ಕೋರ್ಟ್ ಗುರುವಾರ ಈ ಮಹತ್ವದ ತೀರ್ಪು ನೀಡಿದೆ. ಈ ಬಗ್ಗೆ ಆಕ್ರೋಶ ವ್ಯಕ್ತಪಡಿಸಿರುವ ಅರ್ಜಿದಾರರ ಪರ ನ್ಯಾಯವಾದಿ ಸಂಶಾದ್ ಪಠಾಣ್ ತೀರ್ಪಿನ ವಿರುದ್ಧ ಗುಜರಾತ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವುದಾಗಿ ಹೇಳಿದ್ದಾರೆ. ಗುಜರಾತ್ ಗಲಭೆಯ ಅವಧಿಯಲ್ಲಿ ಅಂದರೆ 2002, ಫೆ.28ರಂದು ನಡೆದಿದ್ದ ಈ ಪ್ರಕರಣದಲ್ಲಿ ಮುಸ್ಲಿಂ ಸಮುದಾಯಕ್ಕೆ ಸೇರಿದ 11 ಮಂದಿ ಅಸುನೀಗಿದ್ದರು.

ಒಟ್ಟು 86 ಮಂದಿಯ ವಿರುದ್ಧ ಕೇಸು ದಾಖಲಿಸಲಾಗಿತ್ತು. ಈ ಪೈಕಿ 18 ಮಂದಿ ತನಿಖೆ ಮತ್ತು ವಿಚಾರಣೆ ಪ್ರಗತಿಯಲ್ಲಿ ಇರುವಾಗಲೇ ಅಸುನೀಗಿದ್ದರು. ಅವರೆಲ್ಲರ ವಿರುದ್ಧ ಕೊಲೆ, ಕ್ರಿಮಿನಲ್ ಸಂಚು, ನಿಯಮ ಮೀರಿ ಗುಂಪು ಸೇರುವುದು ಸೇರಿದಂತೆ ಹಲವು ಆರೋಪಗಳನ್ನು ಹೊರಿಸಲಾಗಿತ್ತು. 2010ರಲ್ಲಿ ಶುರುವಾಗಿದ್ದ ನ್ಯಾಯಾಂಗ ಕಲಾಪಗಳು 13 ವರ್ಷಗಳ ಕಾಲ ನಡೆದಿದ್ದವು.

ಸಾಕ್ಷ್ಯ ನುಡಿದಿದ್ದ ಅಮಿತ್ ಶಾ: ಮಾಜಿ ಸಚಿವೆ ಮಾಯಾ ಕೊಡ್ನಾನಿ ಪರವಾಗಿ ಸದ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾಗಿರುವ ಅಮಿತ್ ಶಾ ಅವರು 2017ರ ಸೆಪ್ಟಂಬರ್‌ನಲ್ಲಿ ಸಾಕ್ಷ್ಯ ನುಡಿದಿದ್ದರು. ಈ ಪ್ರಕರಣದಲ್ಲಿ ಕೊಡ್ನಾನಿಗೆ 28 ವರ್ಷಗಳ ಜೈಲು ಶಿಕ್ಷೆಯಾಗಿತ್ತು. ಆ ಅನಂತರ ಗುಜರಾತ್ ಹೈಕೋರ್ಟ್ ಅವರನ್ನು ದೋಷಮುಕ್ತಿಗೊಳಿಸಿತು. **(ಉದಯವಾಣಿ 21-04-2023)**

==========================================================================

## ಒಬ್ಬ ವ್ಯಕ್ತಿಗೆ 40 ಪತ್ನಿಯರು!

## ಬಿಹಾರದಲ್ಲಿ ಜಾತಿ ಜನಗಣತಿ ವೇಳೆ ವಿಚಿತ್ರ ಸಂಗತಿ ಬಹಿರಂಗ

**ಪಟ್ನಾ:** ಒಬ್ಬ ವ್ಯಕ್ತಿಗೆ ಎಷ್ಟು ಮಂದಿ ಪತ್ನಿಯರು ಇರಬಹುದು? ಇಬ್ಬರು, ನಾಲ್ವರು, ಹತ್ತು ಮಂದಿ? ಬಿಹಾರದ ಒಬ್ಬ ವ್ಯಕ್ತಿಗೆ ಬರೋಬ್ಬರಿ 40 ಪತ್ನಿಯರಿದ್ದಾರೆ. ಆ ರಾಜ್ಯದಲ್ಲಿ ನಡೆಯುತ್ತಿರುವ ಜಾತಿ ಜನಗಣತಿಯಿಂದ ಈ ಮಾಹಿತಿ ಹೊರಬಿದ್ದಿದೆ.

ರೂಪಚಂದ್ ಎಂಬಾತನೇ ಈ ಭೂಪ. ಬಿಹಾರದ ಅರ್ವಾಲ್ ಜಿಲ್ಲೆಯ ವೇಶ್ಯಾವಾಟಿಕೆ ಅಡ್ಡೆಯಲ್ಲಿ ಜಾತಿ ಜನಗಣತಿ ನಡೆಸುವಾಗ, 40 ಮಂದಿ ಮಹಿಳೆಯರು, ತಮ್ಮ ಪತಿಯ ಹೆಸರಿನ ಸ್ಥಳದಲ್ಲಿ ರೂಪಚಂದ್ ಹೆಸರು ಬರೆದಿದ್ದಾರೆ. ಈ ಬಗ್ಗೆ ಜನಗಣತಿ ಸಿಬಂದಿ ಮಹಿಳೆಯರ ಮಕ್ಕಳನ್ನು ಪ್ರಶ್ನಿಸಿದರೆ, ಅವರು ಕೂಡ ರೂಪಚಂದ್ ತಮ್ಮ ತಂದೆ ಎಂದು ಹೇಳಿದ್ದಾರೆ.

ಅರ್ವಾಲ್ ನಗರದ ವಾರ್ಡ್ ಸಂಖ್ಯೆ 7ರಲ್ಲಿರುವ ವೇಶ್ಯಾವಾಟಿಕೆಯ ಅಡ್ಡೆಯಲ್ಲಿ ಈ ಮಹಿಳೆಯರು ಹಾಡು ಮತ್ತು ನೃತ್ಯ ಮಾಡುವ ಮೂಲಕ ತಮ್ಮ ಜೀವನ ಸಾಗಿಸುತ್ತಾರೆ. ಇವರಿಗೆ ನಿಗದಿತ ವಿಳಾಸವಿಲ್ಲ. ಹೀಗಾಗಿ ಇವರೆಲ್ಲರೂ 'ರೂಪಚಂದ್'ನನ್ನು ತಮ್ಮ ಪತಿ ಎಂದು ಹೆಸರಿಸಿದ್ದಾರೆ ಎಂದು ವರದಿಗಳು ತಿಳಿಸಿವೆ.

ಸಿಎಂ ನಿತೀಶ್ ಕುಮಾರ್ ನೇತೃತ್ವದ ಬಿಹಾರ ಸರಕಾರ ಜ.7ರಿಂದ ಜಾತಿ ಜನಗಣತಿ ಆರಂಭಿಸಿದೆ. ಇದಕ್ಕಾಗಿ 500 ಕೋಟಿ ರೂ. ಮೀಸಲಿರಿಸಲಾಗಿದೆ. ಎರಡು ಹಂತದಲ್ಲಿ ಈ ಗಣತಿ ನಡೆಸಲಾಗುತ್ತದೆ. ಮೊದಲ ಹಂತದಲ್ಲಿ ಮನೆಗಳ ಗಣತಿ ನಡೆಸಲಾಗುತ್ತದೆ. ಎರಡನೇ ಹಂತದಲ್ಲಿ ಧರ್ಮ, ಜಾತಿ, ಉಪ ಜಾತಿ, ಹಣಕಾಸು ಪರಿಸ್ಥಿತಿ ಕುರಿತು ಗಣತಿ ನಡೆಸಲಾಗುತ್ತಿದೆ. **(ಉದಯವಾಣಿ 27-04-2023)**

==========================================================================

## ಇನ್ನು ವೀರ್ಯದಾನ ಬೇಡ; 600 ಮಕ್ಕಳ ತಂದೆಗೆ ಕೋರ್ಟ್ ತಡೆ!

**ಆ್ಯಮ್‌ಸ್ಟರ್‌ಡ್ಯಾಮ್:** ಜಗತ್ತಿನಾದ್ಯಂತ 500 ರಿಂದ 600 ಮಕ್ಕಳ ತಂದೆ ಎಂದು ಎನಿಸಿಕೊಂಡ ವ್ಯಕ್ತಿಗೆ ಮುಂದಿನ ದಿನಗಳಲ್ಲಿ ವೀರ್ಯದಾನ ಮಾಡಕೂಡದು ಎಂದು ನೆದರ್ಲೆಂಡ್‌ನ ಕೋರ್ಟ್ ಆದೇಶ ನೀಡಿದೆ. ಜತೆಗೆ ಆತನಿಗೆ 1 ಲಕ್ಷ ಯೂರೋ ದಂಡ ವಿಧಿಸುವ ಸಾಧ್ಯತೆಗಳೂ ಇವೆ. 2017ರಲ್ಲಿಯೇ ಜೋನಾಥನ್ ಎಂಬ ವ್ಯಕ್ತಿ ತಂತ್ರಜ್ಞಾನ ಆಧಾರಿತ ಸಂತಾನೋತ್ಪತ್ತಿ ಕೇಂದ್ರಗಳಲ್ಲಿ 100 ಮಕ್ಕಳಿಗೆ ತಂದೆಯಾಗಿದ್ದಾನೆ ಎಂಬ ಅಂಶ ಖಚಿತಪಟ್ಟಿದ್ದ ಸಂದರ್ಭದಲ್ಲಿಯೇ ಆತನ ಮೇಲೆ ನಿಷೇಧ ಹೇರಲಾಗಿತ್ತು. ಆದರೆ, ಆತ ಆನ್‌ಲೈನ್ ಮೂಲಕ ವೀರ್ಯದಾನ ಮಾಡುವುದನ್ನು ಮುಂದುವರಿಸಿದ್ದ. ಈ ಬಗ್ಗೆ ದ ಹೇಗ್‌ನಲ್ಲಿ ಇರುವ ಕೋರ್ಟೊಂದು ವಿಚಾರಣೆ ನಡೆಸಿ, ಯಾವ ಯಾವ ಕ್ಲಿನಿಕ್‌ಗಳಿಗೆ ಆತ ವೀರ್ಯದಾನ ಮಾಡಿದ್ದಾನೆ ಎಂಬುದರ ಪಟ್ಟಿ ನೀಡುವಂತೆ ಆದೇಶಿಸಿದೆ. ನೆದರ್ಲೆಂಡ್ ನಿಯಮಗಳ ಪ್ರಕಾರ 12 ಕುಟುಂಬಗಳಲ್ಲಿ 25 ಮಕ್ಕಳಾಗುವವರೆಗೆ ವೀರ್ಯದಾನ ಮಾಡಲು ಅವಕಾಶ ಇದೆ. ಆದರೆ, ಆತ 2007ರಿಂದಲೇ ಈ ಕೃತ್ಯದಲ್ಲಿ ತೊಡಗಿದ್ದು 500-600 ಮಂದಿಗೆ ವೀರ್ಯದಾನ ಮಾಡಿದ್ದಾನೆ. **(ಉದಯವಾಣಿ 30-04-2023)**

==========================================================================

## ಅಮೆರಿಕದ ವೈದ್ಯರಿಂದ ಅತ್ಯಪೂರ್ವ ಶಸ್ತ್ರಚಿಕಿತ್ಸೆ

### * ಗರ್ಭದಲ್ಲಿರುವ ಕಂದನ ಮೆದುಳಿಗೆ ಶಸ್ತ್ರಚಿಕಿತ್ಸೆ: ವಿಶ್ವದಲ್ಲೇ ಮೊದಲ ಪ್ರಯತ್ನ ಯಶಸ್ವಿ

**ವಾಷಿಂಗ್ಟನ್:** ತಾಯಿಯ ಗರ್ಭದಲ್ಲಿರುವ ಕಂದಮ್ಮನ ಮೆದುಳನ್ನೇ ಅಮೆರಿಕ ವೈದ್ಯರ ತಂಡವೊಂದು ಶಸ್ತ್ರಚಿಕಿತ್ಸೆ ನಡೆಸುವಲ್ಲಿ ಯಶಸ್ವಿಯಾಗಿದ್ದು, ವಿಶ್ವದಲ್ಲೇ ಇಂಥ ಪ್ರಯತ್ನ ಮೊದಲನೆಯದಾಗಿದೆ.

ಮಹಿಳೆಯೊಬ್ಬರ ಗರ್ಭದಲ್ಲಿದ್ದ7 ತಿಂಗಳ ಮಗುವಿಗೆ 'ವೆನಸ್ ಆಫ್ ಗ್ಯಾಲೆನ್ ಮಾಲ್ ಫಾರ್ಮೇಶನ್' ಎಂಬ ಸಮಸ್ಯೆ ಎದುರಾಗಿತ್ತು. ಹೀಗೆಂದರೆ ಮೆದುಳಿನಿಂದ ಹೃದಯಕ್ಕೆ ರಕ್ತವನ್ನು ತಲುಪಿಸುವ ನರವೊಂದು ಸರಿಯಾಗಿ ಬೆಳವಣಿಗೆ ಹೊಂದಿರಲಿಲ್ಲ. ಇದರಿಂದ ಮಗುವಿನ ಆರೋಗ್ಯದಲ್ಲಿ ಏರುಪೇರಾಗುತ್ತಿತ್ತು. ಅಲ್ಲದೇ ಮಗು ಹುಟ್ಟಿದ ತತ್‌ಕ್ಷಣವೇ ಮೆದುಳಿನ ಸಮಸ್ಯೆಗೆ ಗುರಿಯಾಗುವ ಅಥವಾ

ಹುಟ್ಟಿದ ಕೂಡಲೇ ಹೃದಯ ವೈಫಲ್ಯಕ್ಕೆ ತುತ್ತಾಗುವ ಸಾಧ್ಯತೆಗಳು ಹೇರಳವಾಗಿತ್ತು. ಈ ಹಿನ್ನೆಲೆ 34 ವಾರಗಳ ಗರ್ಭಾವಸ್ಥೆಯಲ್ಲಿರುವ ತಾಯಿಯ ಗರ್ಭದಲ್ಲಿರುವ ಮಗುವಿಗೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಅಲ್ಟ್ರಾಸೌಂಡ್ ಸಹಾಯದೊಂದಿಗೆ ಬ್ರಿಗಮ್ ವುಮೆನ್ಸ್ ಹಾಸ್ಪಿಟಲ್ ಹಾಗೂ ಬೋಸ್ಟನ್ ಚಿಲ್ಡ್ರನ್ಸ್ ಹಾಸ್ಪಿಟಲ್‌ನ ವೈದ್ಯರ ತಂಡ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿ, ಮಗುವಿನ ಮೆದುಳಿನ ಸಮಸ್ಯೆ ಸರಿಪಡಿಸಿದೆ ಎಂದು ಆಸ್ಪತ್ರೆಗಳು ತಿಳಿಸಿವೆ. **(ಉದಯವಾಣಿ 06–05–2023)**

==========================================================================

## ಸಂಸ್ಕೃತ ಪರೀಕ್ಷೆ: 13,000ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಹಿಂದಿಕ್ಕಿ ಪ್ರಥಮ ಸ್ಥಾನಿಯಾದ ಮುಹಮ್ಮದ್ ಇರ್ಫಾನ್

**ಲಕ್ನೋ ಮೇ 6:** ಉತ್ತರ ಪ್ರದೇಶ ಮಾಧ್ಯಮಿಕ ಸಂಸ್ಕೃತ ಶಿಕ್ಷಣ ಪರಿಷತ್ ಮಂಡಳಿಯ ಉತ್ತರ ಮಾಧ್ಯಮ–॥ (12ನೇ ತರಗತಿ) ಪರೀಕ್ಷೆಯಲ್ಲಿ ಶೇ. 82.71ರಷ್ಟು ಅಂಕ ಪಡೆಯುವ ಮೂಲಕ ಚಂದೌಲಿ ಜಿಲ್ಲೆಯ ಕೃಷಿ ಕಾರ್ಮಿಕ ಸಲಾಲುದ್ದೀನ್ ಎಂಬವರ 17 ವರ್ಷದ ಪುತ್ರ ಮುಹಮ್ಮದ್ ಇರ್ಫಾನ್ ಸಂಸ್ಕೃತ ಪರೀಕ್ಷೆಯಲ್ಲಿ ಮೊದಲಿಗನಾಗಿ ತೇರ್ಗಡೆ ಹೊಂದಿದ್ದಾನೆ ಎಂದು ವರದಿಯಾಗಿದೆ.

ಸಂಸ್ಕೃತ ಶಿಕ್ಷಣ ಮಂಡಳಿಯು ಇನ್ನಿತರ ವಿಷಯಗಳೊಂದಿಗೆ ಸಂಸ್ಕೃತ ಭಾಷೆ ಹಾಗೂ ಸಾಹಿತ್ಯವನ್ನು ಕಡ್ಡಾಯ ಪಠ್ಯಕ್ರಮವಾಗಿ ಹೊಂದಿದೆ.

ಮುಂದೊಂದು ದಿನ ಸಂಸ್ಕೃತ ಶಿಕ್ಷಕನಾಗುವ ಕನಸು ಹೊಂದಿರುವ ಇರ್ಫಾನ್, 10 ಮತ್ತು 12ನೇ ತರಗತಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿರುವ 20 ವಿದ್ಯಾರ್ಥಿಗಳ ಪೈಕಿ ಏಕೈಕ ಮುಸ್ಲಿಮ್ ವಿದ್ಯಾರ್ಥಿಯಾಗಿದ್ದಾನೆ.

ತನ್ನ ಮಗನ ಸಾಧನೆಯಿಂದ ಹೆಮ್ಮೆಯಿಂದ ಬೀಗುತ್ತಿರುವ ಇರ್ಫಾನ್ ತಂದೆಯು, ತಾನು ಶುಲ್ಕ ಭರಿಸಲು ಸಾಧ್ಯವಿದ್ದ ಸಂಪೂರ್ಣಾನಂದ ಸಂಸ್ಕೃತ ಶಾಲೆಗೆ ತನ್ನ ಪುತ್ರನನ್ನು ದಾಖಲಿಸಿದ ದಿನವನ್ನು ಸ್ಮರಿಸುತ್ತಾರೆ. ಈ ಕುರಿತು ಪ್ರತಿಕ್ರಿಯಿಸಿರುವ ಸಲಾಲುದ್ದೀನ್, ನಾನು ದಿನಗೂಲಿ ನೌಕರನಾಗಿದ್ದು, ದಿನವೊಂದಕ್ಕೆ ರೂ. 300 ಕೂಲಿ ಪಡೆಯುತ್ತೇನೆ. ತಿಂಗಳಲ್ಲಿ ಕೆಲವೇ ದಿನ ಮಾತ್ರ ನನಗೆ ಕೂಲಿ ದೊರೆಯುತ್ತದೆ ಎಂದು ತಿಳಿಸಿದ್ದಾರೆ.

ಇರ್ಫಾನ್ ಯಾವಾಗಲೂ ಉತ್ತಮವಾಗಿ ವ್ಯಾಸಂಗ ಮಾಡುತ್ತಿದ್ದ ಮತ್ತು ಶಾಲೆಗೆ ದಾಖಲಾದ ದಿನದಿಂದಲೇ ಸಂಸ್ಕೃತ ಕಲಿಕೆಯ ಬಗ್ಗೆ ತೀವ್ರ ಆಸಕ್ತಿ ಹೊಂದಿದ್ದ ಎಂದೂ ತಿಳಿಸಿದ್ದಾರೆ.

ಆತನೀಗ ಶಾಸ್ತ್ರಿ (ಬಿಎ ಪದವಿಗೆ ಸಮಾನಾಂತರ) ಹಾಗೂ ಆಚಾರ್ಯ (ಎಂಎ ಪದವಿಗೆ ಸಮಾನಾಂತರ) ವ್ಯಾಸಂಗ ಮಾಡಲು ಉದ್ದೇಶಿಸಿದ್ದು, ಅವು ಪೂರ್ಣಗೊಂಡ ನಂತರ ಸಂಸ್ಕೃತ ಶಿಕ್ಷಕನಾಗಿ ಉದ್ಯೋಗ ಮಾಡುವ ಹಂಬಲ ಹೊಂದಿದ್ದಾನೆ ಎಂದು ಸಲಾಲುದ್ದೀನ್ ತಿಳಿಸಿದ್ದಾರೆ. **(ವಾರ್ತಾಭಾರತಿ 07–05–2023)**

==========================================================================

## ಬೆಂಗಳೂರು: 'ಹೋಟೇಲ್‌ನಲ್ಲಿ ನೀರು ಕುಡಿದ ವಿಚಾರ'ಕ್ಕೆ ದಲಿತರಿಬ್ಬರ ಹತ್ಯೆ; ಆರೋಪ ಠಾಣೆ ಮುಂದೆ ಶವವಿಟ್ಟು ಪ್ರತಿಭಟನೆ: ಆಕ್ರೋಶ

**ಬೆಂಗಳೂರು, ಮೇ 11:** ಇತ್ತೀಚೆಗೆ ಹೋಟೇಲ್‌ವೊಂದರಲ್ಲಿ ನೀರು ಕುಡಿದ ವಿಚಾರಕ್ಕೆ ನಡೆದ ಗಲಾಟೆಯನ್ನೇ ಮುಂದಿಟ್ಟುಕೊಂಡು ಇಪ್ಪತ್ತು ದಿನಗಳ ಬಳಿಕ ಕಾರು ಹರಿಸಿ ಇಬ್ಬರು ದಲಿತರನ್ನು ಹತ್ಯೆಗೈದಿರುವ ಆರೋಪ ಕೇಳಿಬಂದಿದ್ದು, ಈ ಸಂಬಂಧ ದುಷ್ಕರ್ಮಿಗಳನ್ನು ಬಂಧಿಸುವಂತೆ ಆಗ್ರಹಿಸಿ ರಾಜಾನಕುಂಟೆ ಪೊಲೀಸ್ ಠಾಣೆ ಎದುರು ಶವವಿಟ್ಟು ಬೃಹತ್ ಪ್ರತಿಭಟನೆ ನಡೆಸಿ ಆಕ್ರೋಶ ಹೊರಹಾಕಲಾಯಿತು.

ಹೆಸರಘಟ್ಟ ಹೋಬಳಿಯ ಚಲ್ಲಹಳ್ಳಿ ನಿವಾಸಿಗಳಾದ ನಾಗರಾಜ್ ಹಾಗೂ ರಾಮಯ್ಯ ಎಂಬವರನ್ನು ಉದ್ದೇಶ ಪೂರ್ವಕವಾಗಿ ಜಾತಿಯ ವಿಚಾರಕ್ಕೆ ಕಾರು ಹತ್ತಿಸಿ ಹಾಡಹಗಲೇ ಹತ್ಯೆ ಮಾಡಲಾಗಿದ್ದು, ಈ ಸಂಬಂಧ ಕೃತ್ಯವೆಸಗಿದ ವ್ಯಕ್ತಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಗುರುವಾರ ಇಲ್ಲಿನ ಪ್ರತಿಭಟನಾ ನಿರತ ಮೃತರ ಸಂಬಂಧಿಕರು, ಬಿಎಸ್ಪಿ ನಾಯಕರು ಆಗ್ರಹಿಸಿದರು.

**(ವಾರ್ತಾಭಾರತಿ 12–05–2023)**

==========================================================================

## ಸೌಲಭ್ಯಕ್ಕಾಗಿ ಮಕ್ಕಳನ್ನು ಹಡೆಯಿರಿ ಜನಸಂಖ್ಯೆ ಹೆಚ್ಚಿಸಲು ಚೀನದಿಂದ ಹಲವು ಕಸರತ್ತು 20ಕ್ಕೂ ಹೆಚ್ಚು ನಗರಗಳಲ್ಲಿ ಹೊಸ ಯೋಜನೆ ಜಾರಿ

**ಬೀಜಿಂಗ್:** ಒಂದು ಕಾಲದಲ್ಲಿ ಜನಸಂಖ್ಯಾ ಸ್ಫೋಟಕ್ಕೆ ಕಡಿವಾಣ ಹಾಕಲು ಹರಸಾಹಸ ಪಟ್ಟಿದ್ದ ಚೀನ ಇತ್ತೀಚಿನ ದಿನಗಳಲ್ಲಿ ಜನಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ಕಸರತ್ತು ನಡೆಸುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅದಕ್ಕೆ ಹೊಸ ಸೇರ್ಪಡೆಯೆಂಬಂತೆ ಮದುವೆಯಾಗಲು ಮತ್ತು ಮಕ್ಕಳನ್ನು ಹಡೆಯಲು ಮಹಿಳೆಯರಿಗೆ ಉತ್ತೇಜನ ನೀಡುವಂಥ ಪ್ರಾಯೋಗಿಕ ಯೋಜನೆಯೊಂದನ್ನು ಚೀನದ ಉತ್ಪಾದನಾ ಹಬ್ ಗುವಾಂಗ್‌ಝೌ, ಹೆಬೆ ಪ್ರಾಂತದ ಹಂಡನ್ ಸಹಿತ ಹಲವಾರು ನಗರಗಳಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿ ಮಾಡಲು ಚಿಂತನೆ

ನಡೆಸಲಾಗಿದೆ. 20ಕ್ಕೂ ಹೆಚ್ಚು ನಗರಗಳಲ್ಲಿ ಅನುಷ್ಠಾನ ಮಾಡಲು ಸಿದ್ಧತೆ ನಡೆಸಿದೆ. ಚೀನ ಸರಕಾರದ ಜನಸಂಖ್ಯೆ ಮತ್ತು ಫಲವತ್ತತೆಗೆ ಸಂಬಂಧಿಸಿ ಕ್ರಮ ಕೈಗೊಳ್ಳುವಂಥ ರಾಷ್ಟ್ರೀಯ ಕುಟುಂಬ ಯೋಜನೆ ಸಂಘವು ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ.

**ಏನೇನು ಕ್ರಮ?:** ಸೂಕ್ತ ವಯಸ್ಸಿನಲ್ಲಿ ಮದುವೆಯಾಗುವುದು, ಮಕ್ಕಳನ್ನು ಹೊಂದುವುದು, ಹುಟ್ಟುವ ಮಕ್ಕಳ ಪೋಷಣೆಯ ಜವಾಬ್ದಾರಿಯನ್ನು ಪತಿ–ಪತ್ನಿಯಿಬ್ಬರೂ ಹಂಚಿ ಕೊಳ್ಳುವುದು, ವಧುದಕ್ಷಿಣೆ ಪ್ರಮಾಣವನ್ನು ತಗ್ಗಿಸುವುದು ಸಹಿತ ವಿವಿಧ ಕ್ರಮಗಳನ್ನು ಈ ಯೋಜನೆಯಡಿ ಕೈಗೊಳ್ಳಲಾಗುತ್ತದೆ.

ಉಡುಗೊರೆಯ ಆಮಿಷ: ವಿಶೇಷವೆಂದರೆ ಸರಕಾರದ ಕರೆಗೆ ಸ್ಪಂದಿಸಿದವರಿಗೆ ತೆರಿಗೆ ವಿನಾಯಿತಿ, ಮನೆ ನಿರ್ಮಾಣಕ್ಕೆ ಸಬ್ಸಿಡಿ, ಮೂರನೇ ಮಗುವನ್ನು ಹೊಂದಿದರೆ ಆ ಮಗುವಿಗೆ ಉಚಿತ ಅಥವಾ ಸಬ್ಸಿಡಿಯುಕ್ತ ಶಿಕ್ಷಣ ಮುಂತಾದ ಹಲವು ಸೌಲಭ್ಯಗಳನ್ನೂ ಘೋಷಿಸಲಾಗಿದೆ. **(ಉದಯವಾಣಿ 16–05–2023)**

==========================================================================

## 138 ದಂಪತಿಗಳ ವಿಚ್ಛೇದನ ತಪ್ಪಿಸಿದ್ದ ವಕೀಲನಿಗೇ ವಿಚ್ಛೇದನ !

**ಗಾಂಧೀನಗರ:** ಬದುಕಲ್ಲಿ ಯಾವುದು ಘಟಿಸಬಾರದು ಎಂದುಕೊಳ್ಳುತ್ತೇವೋ, ಅದೇ ಘಟಿಸುತ್ತದೆ! ಇದಕ್ಕೆ ಗುಜರಾತ್ ವಕೀಲರೊಬ್ಬರ ಬದುಕೇ ನಿದರ್ಶನ. ಜೀವನದುದ್ದಕ್ಕೂ 138 ದಂಪತಿಗಳ ಜೀವನ ಉಳಿಸಲು ಸೆಣಸಾಡಿ, ಒಂದುಗೂಡಿಸಿದ ವಕೀಲರ ಬದುಕೇ ಈಗ ವಿಚ್ಛೇದನದ ಘಟ್ಟಕ್ಕೆ ತಲುಪಿದ್ದು, ವಿಧಿ ವಿಪರ್ಯಾಸ ಜನರ ಮನಮಿಡಿದಿದೆ.

ಅಹ್ಮದಾಬಾದ್‌ನ ಹೈಕೋರ್ಟ್‌ನ ವಕೀಲರೊಬ್ಬರು ಸತತ 16 ವರ್ಷಗಳಿಂದ ತಮ್ಮ ವೃತ್ತಿ ಜೀವನದಲ್ಲಿದ್ದು, ಹಲವಾರು ಪ್ರಕರಣಗಳನ್ನು ನೋಡಿದ್ದಾರೆ. ವಿಚ್ಛೇದನ ಪ್ರಕರಣಗಳಲ್ಲಿ ದಂಪತಿಗಳಿಗೆ ತಿಳಿಹೇಳಿ, ಕೌಟುಂಬಿಕ ಕಲಹಗಳನ್ನು ಬಗೆಹರಿಸಿ ವಿಚ್ಛೇದನ ಹಿಂಪಡೆಯುವಂತೆ ಮಾಡಿದ್ದಾರೆ. ಅವರ ಕಳಕಳಿಗೆ ಬದಲಾಗಿ ಮತ್ತೆ ಕುಟುಂಬವನ್ನು ಕಟ್ಟಿಕೊಂಡಿದ್ದು ಬರೋಬ್ಬರಿ 138 ಜೋಡಿಗಳು!

ಹೀಗೆ ಹಲವು ಜೋಡಿಗಳನ್ನು ಒಂದು ಮಾಡಿದ್ದೇ ವಕೀಲರ ಪಾಲಿಗೆ ಕಂಟಕವಾಗಿದೆ. ಇವರ ಕಾಳಜಿಯಿಂದ ಜೋಡಿ ಒಂದಾಗಿ ಪ್ರಕರಣ ಕೈತಪ್ಪುವುದು ಒಂದೆಡೆಯಾದರೆ, ಕೌನ್ಸೆಲಿಂಗ್ ನೀಡಿಯೂ ಶುಲ್ಕ ಪಡೆಯದ ಅವರ ಔದಾರ್ಯ ಮತ್ತೊಂದಡೆ. ಇದರ ಪರಿಣಾಮ, ವಕೀಲರ ಕುಟುಂಬದಲ್ಲೇ ಆರ್ಥಿಕ ಸಂಕಷ್ಟ ಎದುರಾಗಿ, ವಕೀಲರ ಪತ್ನಿ ವಿಚ್ಛೇದನ ನೀಡಿದ್ದಾರೆ. ಅವರ ಕತೆ ಈಗ ವೈರಲ್ ಆಗಿದೆ.

**(ಉದಯವಾಣಿ 17–06–2023)**

==========================================================================

## ಹಿಂದಿನ ಸಿದ್ಧಾಂತಗಳು ಹೇಳುವಂತೆ 5–10 ಕೋಟಿ ವರ್ಷಗಳಲ್ಲ ಕೆಲವು ಲಕ್ಷ ವರ್ಷಗಳಲ್ಲಿ ಭೂಮಿ ರಚನೆ!

**ಹೊಸದಿಲ್ಲಿ:** ಭೂಮಿ ಹುಟ್ಟಿದ್ದು ಹೇಗೆ? ಯಾವಾಗ? ಈ ಪ್ರಶ್ನೆಗಳಿಗೂ ಅಂದಿನಿಂದ ಇಂದಿನವರೆಗೆ ಸಂಶೋಧನೆಗಳು ನಡೆಯುತ್ತಲೇ ಇವೆ. ಇದೀಗ ವಿಜ್ಞಾನಿಗಳ ತಂಡವೊಂದು ಮಾಡಿದ ನೂತನ ಸಂಶೋಧನೆಯ ಪ್ರಕಾರ, ಭೂಮಿಯ ನಿರ್ಮಾಣಕ್ಕೆ ಕೆಲವೇ ಲಕ್ಷ ವರ್ಷಗಳು ಮಾತ್ರ ತಗುಲಿವೆ. ಹಿಂದೆ ಇದೇ ಭೂಮಿಯ ರಚನೆಗೆ 5ರಿಂದ 10 ಕೋಟಿ ವರ್ಷಗಳಾಗಿರಬಹುದು ಎಂದು ಹೇಳಲಾಗಿತ್ತು. ಎಲ್ಲಕ್ಕಿಂತ ಮುಖ್ಯ ಸಂಗತಿಯೆಂದರೆ ಭೂಮಿಯಲ್ಲಿನ ನೀರೂ ಕೂಡ ಬಾಹ್ಯಾಕಾಶದಿಂದಲೇ ಬಂದಿದ್ದು, ಭೂಮಿಯಲ್ಲೇ ಹುಟ್ಟಿದ್ದಲ್ಲ!

ಹೀಗೆಂದು ನೇಚರ್ ನಿಯತ ಕಾಲಿಕೆಯಲ್ಲಿ ಪ್ರಕಟವಾದ ಲೇಖನವೊಂದರಲ್ಲಿ ಹೇಳಲಾಗಿದೆ. ಈ ಸಂಶೋಧನೆಯಲ್ಲಿ ಪಾಲ್ಗೊಂಡ ಮಾರ್ಟಿನ್ ಬಿಜಾರೊ ಎಂಬ ವಿಜ್ಞಾನಿ ಹಲವು ಸಂಗತಿಗಳನ್ನು ವಿವರಿಸಿದ್ದಾರೆ. 450 ಕೋಟಿ ವರ್ಷಗಳ ಹಿಂದೆ ಸೂರ್ಯ ಇನ್ನೂ ತಾರುಣ್ಯಾವಸ್ಥೆಯಲ್ಲಿದ್ದಾಗ ಅವನ ಸುತ್ತ ಅನಿಲ ಮತ್ತು ಧೂಳಿನ ಒಂದು ವೃತ್ತಾಕಾರದ ಪದರವಿತ್ತು. ಇಲ್ಲಿನ ಸಣ್ಣ ಸಣ್ಣ ಭಾಗಗಳು ಪರಸ್ಪರ ಡಿಕ್ಕಿ ಹೊಡೆಯುತ್ತ ಭೂಮಿಯ ರಚನೆಯಾಗಿದೆ. ಈ ಸಣ್ಣ ಸಣ್ಣ ಕಣಗಳಲ್ಲೇ ನೀರಿನಂಶವೂ ಇತ್ತು. ಭೂಮಿಯ ರಚನೆಯಾಗುವಾಗಲೇ ನೀರೂ ಅದರೊಂದಿಗೆ ಸೇರಿಕೊಂಡಿತ್ತು. ಹಿಂದಿನ ಸಿದ್ಧಾಂತಗಳ ಪ್ರಕಾರ ಭೂಮಿಯ ಸೃಷ್ಟಿಯಾಗಿ ಅಂದಾಜು 10 ಕೋಟಿ ವರ್ಷಗಳ ಅನಂತರ ನೀರು ಸೃಷ್ಟಿಯಾಯಿತು ಎಂಬುದು ತಪ್ಪು ಎಂಬ ಹೊಸ ತರ್ಕವನ್ನು ಮಾರ್ಟಿನ್ ಬಿಜಾರೊ ತಂಡ ಮುಂದಿಟ್ಟಿದೆ.

ಹೀಗೆ ನೋಡಿದಾಗ ನಮ್ಮ ತಾರಾಮಂಡಲದಲ್ಲಿ ಭೂಮಿಯಂತಹ ಇನ್ನೂ ಹಲವು ಗ್ರಹಗಳಿವೆ. ಅಲ್ಲೂ ಜೀವಜಗತ್ತು ಇರುವುದೂ ಖಚಿತ ಎಂದು ವಿಜ್ಞಾನಿಗಳು ಹೇಳುತ್ತಾರೆ. ಭೂಮಿಯ ಮಾದರಿಯಲ್ಲೇ ಇನ್ನೂ ಬೇಕಾದಷ್ಟು ಗ್ರಹಗಳು ರಚನೆಯಾಗಿರುವ ಒಂದು ಸುಳಿವನ್ನು ಹೊಸ ಶೋಧ ನೀಡಿದೆ. **(ಉದಯವಾಣಿ 20–06–2023)**

==========================================================================

## ವಿದ್ಯೆ ನೀಡಿದ ಸಂಸ್ಥೆಗೆ ನಂದನ್ ನಿಲೇಕಣಿ 315 ಕೋಟಿ ದೇಣಿಗೆ!

**ಮುಂಬಯಿ:** ಏರಿದ ಏಣಿಯನ್ನೇ ಮರೆತು ಮುನ್ನಡೆಯುವವರ ನಡುವೆ ತಮ್ಮ ಬದುಕಿಗೆ ಬುನಾದಿಯಾಗಿ, ವಿದ್ಯೆ ನೀಡಿದ ಸಂಸ್ಥೆಯನ್ನು ಸ್ಮರಿಸುವವರ ಸಂಖ್ಯೆ ಬೆರಳಣಿಕೆಯಷ್ಟು ಮಾತ್ರ. ಆ ಪೈಕಿ ಇನ್ಫೋಸಿಸ್ ಸಹಸಂಸ್ಥಾಪಕರಾದ ನಂದನ್ ನಿಲೇಕಣಿಯವರೂ ಒಬ್ಬರಾಗಿದ್ದು, ತಾವು ಎಂಜಿನಿಯರಿಂಗ್ ಕಲಿತ ಸಂಸ್ಥೆ ಐಐಟಿ ಬಾಂಬೆಗೆ ಬರೋಬ್ಬರಿ 315 ಕೋಟಿ ರೂ.ಗಳ ದೇಣಿಗೆ ನೀಡಿದ್ದಾರೆ! ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ ವ್ಯಾಸಂಗಕ್ಕಾಗಿ ನಿಲೇಕಣಿ 1973ರಲ್ಲಿ ಐಐಟಿ ಬಾಂಬೆಗೆ ಸೇರ್ಪಡೆಗೊಂಡಿದ್ದರು. ಇದೀಗ ಈ ವಿದ್ಯಾಸಂಸ್ಥೆ ಜತೆಗಿನ

ಅವರ ನಂಟಿಗೆ 50 ವರ್ಷಗಳ ಅವಿನಾಭಾವ ಸಂಬಂಧ ಬೆಸೆದುಕೊಂಡಿದೆ. ಅದರ ಪ್ರಯುಕ್ತ ದೇಣಿಗೆ ನೀಡಿರುವ ಅವರು ಈ ಸಂಸ್ಥೆ ನನ್ನ ಬದುಕಿಗೆ ಬಹಳಷ್ಟು ನೀಡಿದೆ. ಹಾಗಾಗಿ ಇದೀಗ ದೇಣಿಗೆ ನೀಡಿರುವುದಾಗಿ ತಿಳಿಸಿದ್ದಾರೆ. **(ಉದಯವಾಣಿ 21–06–2023)**

==========================================================

## ಲಾಲಾರಸದಿಂದಲೇ ಗರ್ಭಧಾರಣೆ ಪತ್ತೆ!

**ಲಂಡನ್:** ವಿಶ್ವದಲ್ಲೇ ಮೊದಲ ಬಾರಿಗೆ ಮಹಿಳೆಯರ ಲಾಲಾರಸದಿಂದ ಗರ್ಭಧಾರಣೆಯನ್ನು ಪತ್ತೆಹಚ್ಚುವ ಕಿಟ್ ಅಭಿವೃದ್ಧಿ ಪಡಿಸಲಾಗಿದ್ದು, ಸ್ಯಾಲಿಸ್ಟಿಕ್ ಹೆಸರಿನ ಈ ಕಿಟ್ ಅನ್ನು ಬ್ರಿಟನ್‌ನಲ್ಲಿ ಬಿಡುಗಡೆಗೊಳಿಸಲಾಗಿದೆ. ವಿಶೇಷವೆಂದರೆ ಕೊರೊನಾ ಸಂದರ್ಭದಲ್ಲಿ ಸೋಂಕು ಪತ್ತೆಗೆ ಬಳಸಿದ ಕೋವಿಡ್ ಟೆಸ್ಟ್‌ಕಿಟ್ ತಂತ್ರಜ್ಞಾನವನ್ನು ಆಧರಿಸಿಯೇ ಈ ಗರ್ಭಧಾರಣೆ ಪರೀಕ್ಷೆ ಕಿಟ್‌ಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ಇಸ್ರೇಲ್‌ನ ಬಯೋಟೆಕ್ ಕಂಪೆನಿ ಸ್ಯಾಲಿಗ್ನೋಸ್ಟಿಕ್ ಕಿಟ್ ಅಭಿವೃದ್ಧಿ ಪಡಿಸಿದೆ. ಇದರಿಂದ ಮಹಿಳೆಯರು ಮೂತ್ರ ಪರೀಕ್ಷೆ ನಡೆಸಿ ಗರ್ಭಧಾರಣೆ ಪತ್ತೆಹಚ್ಚುವ ಬದಲು, ಕೇವಲ ಲಾಲಾರಸ ಬಳಸಿಯೇ ಪತ್ತೆ ಹಚ್ಚಬಹುದಾಗಿದೆ. ಮೂತ್ರಕ್ಕಿಂತಲೂ ನಿಖರವಾದ ಫಲಿತಾಂಶವನ್ನು ಲಾಲಾರಸ ನೀಡುತ್ತದೆ. ಬ್ರಿಟನ್‌ನ ಐರ್ಲೆಂಡ್‌ನಲ್ಲಿ ಈಗಾಗಲೇ ಈ ಕಿಟ್‌ಗಳು ಬಳಕೆಗೆ ಲಭ್ಯವಾಗಿವೆ. **(ಉದಯವಾಣಿ 21–06–2023)**

==========================================================

## ಮಠದಲ್ಲಿ ಅತ್ಯಾಚಾರ: ಸ್ವಾಮೀಜಿ ಸೆರೆ

**ಹೈದರಾಬಾದ್:** ಆಂಧ್ರಪ್ರದೇಶದ ಆಶ್ರಮವೊಂದರಲ್ಲಿ 15 ವರ್ಷದ ಅನಾಥ ಬಾಲಕಿಯ ಮೇಲೆ ಕಳೆದ ಕೆಲವು ತಿಂಗಳುಗಳಿಂದ ಆಶ್ರಮದ ಸ್ವಾಮೀಜಿಯೇ ಅತ್ಯಾಚಾರವೆಸಗಿರುವ ಆರೋಪದಲ್ಲಿ ಸೋಮವಾರ ತಡರಾತ್ರಿ ಸ್ವಾಮೀಜಿಯನ್ನು ಪೊಲೀಸರು ಬಂಧಿಸಿದ್ದಾರೆ. ವಿಶಾಖಪಟ್ಟಣದ ವೆಂಕೋಜಿಯಲ್ಲಿನ ಜ್ಞಾನಾನಂದ ಆಶ್ರಮದ ಆಡಳಿತಾಧಿಕಾರಿಯಾಗಿರುವ ಪೂರ್ಣಾನಂದ ಸಾಮೀಜಿ ಬಾಲಕಿ ಮೇಲೆ ಅತ್ಯಾಚಾರವೆಸಗಿದ್ದು, ಅಪ್ರಾಪ್ತೆಯು ಆಶ್ರಮದಿಂದ ತಪ್ಪಿಸಿಕೊಂಡು ಬಂದು ವಿಜಯವಾಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾಳೆ. ದೂರಿನ ಆಧಾರದ ಮೇಲೆ ಕೇಸು ದಾಖಲಿಸಿ, ಸ್ವಾಮೀಜಿಯನ್ನು ಬಂಧಿಸಲಾಗಿದೆ. **(ಉದಯವಾಣಿ 21–06–2023)**

==========================================================

## ಭೂಮಿಯಂತಿರುವ ಮತ್ತೊಂದು ಗ್ರಹ ಪತ್ತೆ

**ಹೊಸದಿಲ್ಲಿ:** ಭೂಮಿಯ ಗಾತ್ರ ಇರುವ ಗ್ರಹವೊಂದನ್ನು ಖಗೋಳಶಾಸ್ತ್ರಜ್ಞರು ಪತ್ತೆಹಚ್ಚಿದ್ದಾರೆ. ಇದಕ್ಕೆ 'ಎಲ್‌ಪಿ 791–18ಡಿ' ಎಂದು ನಾಮಕರಣ ಮಾಡಿದ್ದಾರೆ.

ಈ ಗ್ರಹವು ಜ್ವಾಲಾಮುಖಿಗಳಿಂದ ಕೂಡಿದ್ದು, ಇಲ್ಲಿ ಮಾನವರು ಜೀವನ ನಡೆಸಲು ಅನುಕೂಲವಾಗಿರುವ ವಾತಾವರಣ ಇರಬಹುದು ಎಂದು ಖಗೋಳಶಾಸ್ತ್ರಜ್ಞರು ಅಂದಾಜಿಸಿದ್ದಾರೆ. ಈ ಗ್ರಹವು ತನ್ನಿಂದ 90 ಜ್ಯೋತಿರ್ವರ್ಷ ದೂರವಿರುವ ಕೆಂಪು ಕುಬ್ಜ ನಕ್ಷತ್ರವನ್ನು ಸುತ್ತುತ್ತಿದೆ. ಈ ನಕ್ಷತ್ರದ ಹೆಸರು 'ಕ್ರೇಟರ್'. ಈ ಗ್ರಹದಲ್ಲಿ ಅಗ್ನಿಂದಾಗೆ ಜ್ವಾಲಾಮುಖಿಗಳು ಸ್ಫೋಟಗೊಳ್ಳುತ್ತಿವೆ ಎಂದು ಅಮೆರಿಕದ ಹಾರ್ವರ್ಡ್ ವಿವಿ ಮತ್ತು ಸ್ಮಿತ್ ಸೋನಿಯನ್ ಸಂಸ್ಥೆಯ ಖಗೋಳ ಭೌತಶಾಸ್ತ್ರ ವಿಭಾಗದ ಸಂಶೋಧಕರ ತಂಡ ತಿಳಿಸಿದೆ.

ಅಮೆರಿಕದ ನಾಸಾದ ಟ್ರಾನ್ಸಿಟಿಂಗ್ ಎಕ್ಸೋಪ್ಲಾನೆಟ್ ಸರ್ವೆ ಸ್ಯಾಟಲೈಟ್ (ಟಿಇಎಸ್‌ಎಸ್) ಮತ್ತು ಸ್ಪಿಟ್ಜರ್ ಬಾಹ್ಯಾಕಾಶ ದೂರದರ್ಶಕ ಬಳಸಿ ಖಗೋಳಶಾಸ್ತ್ರಜ್ಞರು ಈ ಸಂಶೋಧನೆ ನಡೆಸಿದ್ದಾರೆ. ಅಲ್ಲದೇ ಈ ಸಂಶೋಧನಾತ್ಮಕ ಅಧ್ಯಯನವನ್ನು ನೇಚರ್ ನಿಯತಕಾಲಿಕೆಯಲ್ಲಿ ಪಕಟಿಸಿದ್ದಾರೆ. **(ಉದಯವಾಣಿ 19–05–2023)**

==========================================================

## ಲೈಂಗಿಕ ದೌರ್ಜನ್ಯ ಆರೋಪ
## 35 ಕ್ರೈಸ್ತ ಪಾದ್ರಿಗಳ ವಿರುದ್ಧ ತನಿಖೆಗೆ ಆದೇಶ

**ಲಾ ಪರ್ಝ್, ಜೂ.28:** ಬೊಲಿವಿಯಾದ ಕೆಥೊಲಿಕ್ ಚರ್ಚ್‌ನ 35 ಪಾದ್ರಿಗಳ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ತನಿಖೆ ನಡೆಸುವಂತೆ ಆದೇಶಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. 17 ಸಂತ್ರಸ್ತರು ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ್ದಾರೆ. ಆದರೆ ಅವರ ವಿವರವನ್ನು ಬಹಿರಂಗಗೊಳಿಸಲು ಸಾಧ್ಯವಿಲ್ಲ. ಪ್ರಸ್ತುತ 35 ಪಾದ್ರಿಗಳ ವಿರುದ್ಧ ಆರೋಪ ಕೇಳಿಬಂದಿರುವುದರಿಂದ ಪ್ರಕರಣ ದಾಖಲಿಸಲಾಗಿದೆ ಎಂದು ಬೊಲಿವಿಯಾ ಅಟಾರ್ನಿ ಜನರಲ್ ಕಚೇರಿಯ ಮುಖ್ಯಸ್ಥೆ ಡೇನಿಯೆಲಾ ಕ್ಯಾಸೆರೆಸ್ ಹೇಳಿದ್ದಾರೆ.

ಬೊಲಿವಿಯಾದಲ್ಲಿ 1970ರಿಂದ ಕಾರ್ಯನಿರ್ವಹಿಸಿದ್ದ ಸ್ಪೇನ್ ಮೂಲದ ಪಾದ್ರಿ ಅಲ್ಫೋನ್ಸೋ ಪೆದ್ರಾಜಸ್ 2009ರಲ್ಲಿ ಮೃತಪಟ್ಟಿದ್ದರು. ಅವರ ವೈಯಕ್ತಿಕ ಡೈರಿಯಲ್ಲಿ 'ತಾನು 80ಕ್ಕೂ ಅಧಿಕ ಅಪ್ರಾಪ್ತ ವಯಸ್ಸಿನವರಿಗೆ ಲೈಂಗಿಕ ದೌರ್ಜನ್ಯ ಎಸಗಿರುವುದಾಗಿ' ತಪ್ಪೊಪ್ಪಿಕೊಂಡಿದ್ದರು. ಇದು ಹಿರಿಯ ಪಾದ್ರಿಗಳಿಗೆ ತಿಳಿದಿದ್ದರೂ ಸುಮ್ಮನಿದ್ದರು ಎಂದೂ ಡೈರಿಯಲ್ಲಿ ಉಲ್ಲೇಖಿಸಿದ್ದರು. **(ವಾರ್ತಾಭಾರತಿ 29–06–2023)**

==========================================================

## ಆದಿವಾಸಿ ಯುವಕನ ಪಾದತೊಳೆದ ಮಧ್ಯಪ್ರದೇಶ ಸಿಎಂ ಚೌಹಾಣ್

**ಭೋಪಾಲ, ಜು.6:** ಆದಿವಾಸಿ ಯುವಕನ ಮೇಲೆ ಬಿಜೆಪಿ ನಾಯಕರೊಬ್ಬರು ಮೂತ್ರ ವಿಸರ್ಜನೆ ಮಾಡಿದ ಘಟನೆ ಮಧ್ಯಪ್ರದೇಶದಲ್ಲಿ

ವ್ಯಾಪಕ ಟೀಕೆಗೆ ಗುರಿಯಾಗಿದೆ. ಇದೀಗ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ದೌರ್ಜನ್ಯಕ್ಕೆ ಒಳಗಾದ ಆದಿವಾಸಿ ಯುವಕನನ್ನು ಕರೆಸಿ ಅವರ ಪಾದ ತೊಳೆದಿದ್ದಾರೆ.

ಆದಿವಾಸಿ ಯುವಕ ದಶ್ಮತ್ ರಾವತ್ ಅವರನ್ನು ಚೌಹಾಣ್ ಅವರು ಗುರುವಾರ ಭೋಪಾಲದಲ್ಲಿರುವ ತನ್ನ ನಿವಾಸಕ್ಕೆ ಕರೆಸಿಕೊಂಡರು ಹಾಗೂ ನೆಲದಲ್ಲಿ ಕುಳಿತುಕೊಂಡು ಅವರ ಪಾದ ತೊಳೆದರು. "ನಿಮ್ಮ ವೀಡಿಯೊ ನೋಡಿ ನನಗೆ ಬೇಸರವಾಯಿತು. ನಾನು ನಿಮ್ಮಲ್ಲಿ ಕ್ಷಮೆ ಕೋರುತ್ತೇನೆ" ಎಂದು ಅವರು ಹೇಳಿದರು.

ಅವರು ದಶ್ಮತ್ ಅವರನ್ನು 'ಸುಧಾಮ' ಎಂದು ಕರೆದರು ಹಾಗೂ "ದಶ್ಮತ್ ಈಗ ನೀನು ನನ್ನ ಗೆಳೆಯ" ಎಂದು ಹೇಳಿದರು.

ಈ ಸಂದರ್ಭ ಅವರು ದಶ್ಮತ್‌ರೊಂದಿಗೆ ಹಲವು ವಿಷಯಗಳ ಕುರಿತು, ಮುಖ್ಯವಾಗಿ ವಿವಿಧ ಕಲ್ಯಾಣ ಕಾರ್ಯಕ್ರಮಗಳು ತಮಗೆ ತಲುಪುತ್ತಿದೆಯೇ ಎಂಬ ಬಗ್ಗೆ ಚರ್ಚೆ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆನಂತರ ದಶ್ಮತ್ ಹಾಗೂ ಚೌಹಾಣ್ ಒಟ್ಟಾಗಿ ಇಲ್ಲಿನ ಸ್ಮಾರ್ಟ್ ಸಿಟಿ ಪಾರ್ಕ್‌ನಲ್ಲಿ ಗಿಡವೊಂದನ್ನು ನೆಟ್ಟರು.

ಸಿಧಿ ಜಿಲ್ಲೆಯಲ್ಲಿ ಆದಿವಾಸಿ ಯುವಕ ದಶ್ಮತ್ ರಾವತ್ ಮೇಲೆ ಮೂತ್ರ ವಿಸರ್ಜನೆ ಮಾಡಿದ ಆರೋಪದಲ್ಲಿ ಪೊಲೀಸರು ಬುಧವಾರ ಬಿಜೆಪಿ ನಾಯಕ ಪ್ರವೇಶ್ ಶುಕ್ಲಾ ಅವರನ್ನು ಬಂಧಿಸಿದ್ದರು. ಅವರ ವಿರುದ್ಧ ಕಠಿಣ ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು. **(ವಾರ್ತಾಭಾರತಿ 07–07–2023)**

====================================================================

## ಬ್ರಹ್ಮೋಸ್, ಅಗ್ನಿ ಕ್ಷಿಪಣಿ ವ್ಯವಸ್ಥೆ ಕುರಿತ ಮಾಹಿತಿಯೂ ಹಂಚಿಕೊಂಡಿದ್ದರು! ಪಾಕ್ ಗುಪ್ತಚಾರಿಣಿ ಅಶ್ಲೀಲ ಸಂದೇಶಕ್ಕೆ ಆಕರ್ಷಿತರಾಗಿದ್ದ ಡಿಆರ್‌ಡಿಒ ವಿಜ್ಞಾನಿ!

**ಪುಣೆ:** ಪಾಕಿಸ್ಥಾನದ ಗುಪ್ತಚಾರಿಣಿಯಿಂದ ಆಕರ್ಷಿತರಾಗಿ ಆಕೆಯೊಂದಿಗೆ ಭಾರತದ ಕ್ಷಿಪಣಿ ರಹಸ್ಯಗಳನ್ನು ಹಂಚಿಕೊಂಡಿದ್ದಾರೆ...

ಹೀಗೆಂದು ಡಿಆರ್‌ಡಿಒ ಮಾಜಿ ವಿಜ್ಞಾನಿ ಪ್ರದೀಪ್ ಕುರುಲ್ಕರ್ ವಿರುದ್ಧ ಸಲ್ಲಿಕೆಯಾಗಿರುವ ಆರೋಪಪಟ್ಟಿಯಲ್ಲಿ ಮಹಾರಾಷ್ಟ್ರ ಉಗ್ರ ನಿಗ್ರಹ ದಳ(ಎಟಿಎಸ್) ಹೇಳಿದೆ. ಝುರಾ ದಾಸ್‌ಗುಪ್ತಾ ಎಂದು ತನ್ನನ್ನು ಪರಿಚಯಿಸಿಕೊಂಡ ಪಾಕ್ ಗುಪ್ತಚಾರಿಣಿ, ತಾನು ಇಂಗ್ಲೆಂಡ್‌ನಲ್ಲಿ ಎಂಜಿನಿಯರ್ ಆಗಿದ್ದೇನೆಂದು ಹೇಳಿಕೊಂಡಿದ್ದರು. ಅವರೊಂದಿಗೆ ಪ್ರದೀಪ್ ವಾಟ್ಸ್‌ಆಪ್‌ನಲ್ಲಿ ಚಾಟ್ ಮಾಡಿದ್ದಾರೆ, ವೀಡಿಯೋ ಕರೆ ಮಾಡಿದ್ದಾರೆ. ಆಕೆ ಪ್ರದೀಪ್‌ಗೆ ಅಶ್ಲೀಲ ವೀಡಿಯೋ ಸಂದೇಶಗಳನ್ನು ಕಳುಹಿಸಿ ಸೆಳೆದುಕೊಂಡಿದ್ದಾಳೆ.

ಇದರ ಪರಿಣಾಮ ಆಕೆಗೆ ಭಾರತದ ಬ್ರಹ್ಮೋಸ್ ಕ್ಷಿಪಣಿ ಉಡಾವಣೆ, ಡ್ರೋನ್, ಯುಸಿವಿ, ಅಗ್ನಿ ಕ್ಷಿಪಣಿ ಉಡಾವಣ ವಾಹಕ, ಸೇನಾ ಸಂಯೋಜನ ವ್ಯವಸ್ಥೆ ಸೇರಿದಂತೆ ಇತರೆ ಮಾಹಿತಿಗಳನ್ನು ನೀಡಿದ್ದರು. ಇದು ಅತ್ಯಂತ ಸೂಕ್ಷ್ಮವಾದ, ಮಹತ್ವದ ಮಾಹಿತಿ. ಇದು ಭಾರತದ ಭದ್ರತೆಗೆ ದೊಡ್ಡ ಆಪತ್ತು ತರುವಂತಹ ವಿಚಾರ ಎಂದು ಆರೋಪಪಟ್ಟಿಯಲ್ಲಿ ಹೇಳಲಾಗಿದೆ. ಕುರುಲ್ಕರ್‌ರನ್ನು ಮೇ 3ರಂದು ಬಂಧಿಸಲಾಗಿತ್ತು. ಅದುವರೆಗೆ ಅವರು ಡಿಆರ್‌ಡಿಒ ಪುಣೆಯ ಪ್ರಯೋಗಾಲಯವೊಂದರ ನಿರ್ದೇಶಕರಾಗಿದ್ದರು.

### ಹನಿಟ್ರ್ಯಾಪ್: ಬಿಎಸ್‌ಎಫ್ ಉದ್ಯೋಗಿ ಬಂಧನ

**ಅಹ್ಮದಾಬಾದ್:** ಪಾಕಿಸ್ಥಾನಿ ಗುಪ್ತಚರ ಏಜೆಂಟ್ ಆಗಿರುವ ಮಹಿಳೆಯೊಂದಿಗೆ ಸೂಕ್ಷ್ಮ ಮಾಹಿತಿಗಳನ್ನು ಹಂಚಿಕೊಂಡ ಆರೋಪದಲ್ಲಿ ಗುಜರಾತ್‌ನ ಭುಜ್‌ನಲ್ಲಿನ ಗಡಿ ಭದ್ರತಾ ಪಡೆ (ಬಿಎಸ್‌ಎಫ್)ಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ವ್ಯಕ್ತಿಯೊಬ್ಬರನ್ನು ಶನಿವಾರ ಬಂಧಿಸಲಾಗಿದೆ. 12ನೇ ತರಗತಿವರೆಗೆ ಓದಿರುವ ಆರೋಪಿ ನೀಲೇಶ್ ಬಾಲಿಯಾ ಎಂಬವರು ಬಿಎಸ್‌ಎಫ್ ಪ್ರಧಾನ ಕಚೇರಿಯಲ್ಲಿನ ಎಲೆಕ್ಟ್ರಿಕಲ್ ವಿಭಾಗದಲ್ಲಿ ಕಚೇರಿ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದರು. ವಾಟ್ಸ್‌ಆ್ಯಪ್ ಮೂಲಕ ನೀಲೇಶ್‌ರನ್ನು ಸಂಪರ್ಕಿಸಿ ಹನಿಟ್ರ್ಯಾಪ್ ಮಾಡಿದ್ದ ಪಾಕ್ ಗುಪ್ತಚರೆ, ಬಿಎಸ್‌ಎಫ್‌ಗೆ ಸಂಬಂಧಿಸಿದ ಹಲವು ಮಾಹಿತಿಗಳನ್ನು ಪಡೆದುಕೊಂಡಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ. **(ಉದಯವಾಣಿ 09–07–2023)**

====================================================================

## ಅಂಗಾಲು ನೆಕ್ಕುವಂತೆ ಬಲವಂತ ಇಬ್ಬರ ಬಂಧನ – ಮ.ಪ್ರ.ದಲ್ಲಿ ಮತ್ತೊಂದು ಅಮಾನವೀಯ ಕೃತ್ಯ

**ಗ್ವಾಲಿಯರ್ (ಮ.ಪ್ರ), ಜು.8:** ಚಲಿಸುತ್ತಿದ್ದ ವಾಹನದಲ್ಲಿ ಇನ್ನೋರ್ವ ವ್ಯಕ್ತಿಯ ಅಂಗಾಲುಗಳನ್ನು ನೆಕ್ಕುವಂತೆ ಯುವಕನೋರ್ವನನ್ನು ಬಲವಂತಗೊಳಿಸಿದ ವೀಡಿಯೊವೊಂದು ಇಲ್ಲಿ ಹೊರಹೊಮ್ಮಿದ್ದು, ಈ ಘಟನೆಯಲ್ಲಿ ಭಾಗಿಯಾಗಿದ್ದ ಪ್ರಮುಖ ಆರೋಪಿಯಾದ ಹದಿಹರೆಯದ ತರುಣ ಹಾಗೂ ಆತನ ಸಹವರ್ತಿ ಸುದೀಪ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಇತರ ಇಬ್ಬರು ಆರೋಪಿಗಳಾದ ಅಮಿತ್ ಗುರ್ಜರ್ ಹಾಗೂ ತೇಜಿಂದರ್ ಗುರ್ಜರ್‌ನನ್ನು ಬಂಧಿಸಲು ಪೊಲೀಸರು ಬಲೆ ಬೀಸಿದ್ದಾರೆ.

ಎರಡು ದಿನಗಳ ಹಿಂದಷ್ಟೇ ಸಿಧಿಯಲ್ಲಿ ವ್ಯಕ್ತಿಯೋರ್ವ ಬುಡಕಟ್ಟು ಯುವಕನೋರ್ವನ ಮೇಲೆ ಮೂತ್ರ ವಿಸರ್ಜಿಸಿದ್ದ ಘಟನೆಯು ಮಧ್ಯಪ್ರದೇಶದಲ್ಲಿ ಕೋಲಾಹಲವನ್ನು ಸೃಷ್ಟಿಸಿತ್ತು.

ಯುವಕ ಇನ್ನೋರ್ವ ವ್ಯಕ್ತಿಯ ಪಾದಗಳನ್ನು ನೆಕ್ಕುತ್ತಿರುವ ವೀಡಿಯೊ ಶುಕ್ರವಾರ ಸಂಜೆಯಿಂದ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್

ಆಗಿದೆ.

ಸಂಂತ್ರಸ್ತ ಯುವಕ ಮತ್ತು ಇಬ್ಬರು ಆರೋಪಿಗಳು ಗ್ವಾಲಿಯರ್ ಜಿಲ್ಲೆಯ ದಾಬ್ರಾ ಪಟ್ಟಣದ ನಿವಾಸಿಗಳಾಗಿದ್ದಾರೆ ಎಂದು ವರದಿಗಳು ತಿಳಿಸಿವೆ. ಸಂತ್ರಸ್ತ ಯುವಕ ಮೊಹ್ಸಿನ್ ಆಲಿಯಾಸ್ ಮಂತ್ರಿ ಖಾನ್ ಇನ್ನೋರ್ವ ವ್ಯಕ್ತಿಯ ಪಾದಗಳನ್ನು ನೆಕ್ಕುವುದನ್ನು ಮಾತ್ರವಲ್ಲ, ಆತನಿಗೆ ಕಪಾಳಮೋಕ್ಷ ಮಾಡಿ 'ಗೋಲು ಗುರ್ಜರ್ ಬಾಪ್ ಹೈ' ಎಂದು ಬಲವಂತದಿಂದ ಹೇಳಿಸಿದ್ದನ್ನೂ ವೀಡಿಯೊ ತೋರಿಸಿದೆ. ವೀಡಿಯೊದಲ್ಲಿ ಸಂತ್ರಸ್ತನಿಗೆ ಹಲವಾರು ಬಾರಿ ಥಳಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಲಾಗಿದೆ.

ಇದೇ ಘಟನೆಯ ಇನ್ನೊಂದು ವೀಡಿಯೊ ಸಂತ್ರಸ್ತನ ಮುಖಕ್ಕೆ ಚಪ್ಪಲಿಯಿಂದ ಹಲವಾರು ಸಲ ಬಾರಿಸುತ್ತಿರುವುದನ್ನು ತೋರಿಸಿದೆ ಎಂದೂ ವರದಿಗಳು ತಿಳಿಸಿವೆ.

ಘಟನೆಗೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಿರುವುದನ್ನು ಮಧ್ಯಪ್ರದೇಶದ ಗೃಹಸಚಿವ ನರೋತ್ತಮ ಮಿಶ್ರಾ ದೃಢಪಡಿಸಿದ್ದಾರೆ. ವೀಡಿಯೊ ತುಣುಕನ್ನು ವಿಧಿವಿಜ್ಞಾನ ಪರೀಕ್ಷೆಗಾಗಿ ಕಳುಹಿಸಲಾಗಿದೆ. ಸಂತ್ರಸ್ತನ ಕುಟುಂಬದ ದೂರಿನಂತೆ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, ತನಿಖೆಯು ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. **(ವಾರ್ತಾಭಾರತಿ 09–07–2023)**

==========================================================================

## ಪಾಕ್ ನಿರ್ಣಯಕ್ಕೆ ಭಾರತ ಬೆಂಬಲ!

**ನ್ಯೂಯಾರ್ಕ್:** ಸ್ವೀಡನ್‌ನಲ್ಲಿ ಕುರಾನ್ ಸುಟ್ಟಿರುವುದನ್ನು ಖಂಡಿಸಿ, 57 ಮುಸ್ಲಿಂ ರಾಷ್ಟ್ರಗಳ ಪರವಾಗಿ ಪಾಕಿಸ್ತಾನವು ವಿಶ್ವಸಂಸ್ಥೆಯಲ್ಲಿ ಮಂಡಿಸಿರುವ ನಿರ್ಣಯವನ್ನು ಭಾರತ ಬೆಂಬಲಿಸಿದೆ. ಸದಾ ಭಾರತಕ್ಕೆ ಅಹಿತವನ್ನೇ ಉಂಟು ಮಾಡುವ ಪಾಕಿಸ್ತಾನವನ್ನು ಅಪರೂಪದ ಸಂದರ್ಭದಲ್ಲಿ ಭಾರತ ಬೆಂಬಲಿಸಿದೆ. ಧಾರ್ಮಿಕ ದ್ವೇಷದ ವಿರುದ್ಧ ಮಂಡಿಸಿರುವ ನಿರ್ಣಯಕ್ಕೆ ಬುಧವಾರ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿ ಅನುಮೋದನೆ ನೀಡಿದೆ. ಈ ನಿರ್ಣಯದ ಪರವಾಗಿ ಭಾರತ, ಚೀನ, ಅರ್ಜೆಂಟೀನಾ, ಕ್ಯೂಬಾ, ದಕ್ಷಿಣ ಆಫ್ರಿಕಾ, ಉಕ್ರೇನ್ ಮತ್ತು ವಿಯೆಟ್ನಾಂ ಮತ ಹಾಕಿವೆ. ವಿಶೇಷವೆಂದರೆ ಈ ನಿರ್ಣಯದ ವಿರುದ್ಧ ಅಮೆರಿಕ ಮತ ಚಲಾಯಿಸಿದೆ. ಧಾರ್ಮಿಕ ಹಕ್ಕುಗಳ ತನ್ನ ನಿಲುವೇ ಬೇರೆ ಎಂದು ಅದು ಹೇಳಿದೆ. ಕಳೆದ ತಿಂಗಳು ಸ್ವೀಡನ್‌ನ ಸ್ಟಾಕ್‌ಹೋಮ್ ಮುಖ್ಯ ಮಸೀದಿ ಹೊರಗೆ ಇರಾಕಿ ನಿರಾಶ್ರಿತನೊಬ್ಬ ಮುಸ್ಲಿಮರ ಪವಿತ್ರ ಗ್ರಂಥ 'ಕುರಾನ್' ಸುಟ್ಟು ಹಾಕಿದ್ದಾನೆ. ಈ ಘಟನೆಯನ್ನು ಪ್ರಪಂಚದಾದ್ಯಂತ ಇರುವ ಮುಸ್ಲಿಂ ರಾಷ್ಟ್ರಗಳು ಖಂಡಿಸಿವೆ. **(ಉದಯವಾಣಿ 13–07–2023)**

==========================================================================

## ಸಂಪಾದಕರಿಗೆ ಪತ್ರ

ಮಾನ್ಯರೇ,

ಫೆಬ್ರವರಿ 2023ರ ತ್ರೈಮಾಸಿಕ ಪತ್ರಿಕೆ "ಯುಗರಶ್ಮಿ" ತಲುಪಿತು. ಧನ್ಯವಾದಗಳು.

ಕೂಲಿ ಆಗಿದ್ದಾತ ಅಮೆರಿಕದಲ್ಲಿ ಜಡ್ಜ್ ಆಗಿರುವುದು ಹೆಮ್ಮೆಯ ವಿಷಯ. ಮಕ್ಕಳ ಊಟಕ್ಕಾಗಿ ಕೇಶಮುಂಡನ ಮಾಡಿಸಿದ ಮಹಿಳೆಯ ಕತೆ ಕರುಣಾಜನಕವಾಗಿದೆ. ಮಂಗಳೂರಿನ ಲೇಡಿಗೋಶನ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಣೆಯ ಚಿತ್ರಗಳು, ಸುಧಾಮೂರ್ತಿ, ಯದುವೀರ ಒಡೆಯರ್ ಮುಂತಾದ ಚಿತ್ರಗಳು ಚೆನ್ನಾಗಿವೆ.

ಶಾಂತಿ ಸ್ಥಾಪನೆಗೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಪೈಗಂಬರರ ಉಪದೇಶಗಳು ಮತ್ತು ಅವರ ಉತ್ತಮ ಮಾದರಿ, ನೀನು ಮಾಡು – ಮಾಡಬೇಡ ಮುಂತಾದ ವಿಚಾರಗಳಿಂದೊಳಗೊಂಡ "ಯುಗರಶ್ಮಿ" ಪತ್ರಿಕೆಗೆ ಧನ್ಯವಾದಗಳು.

**ತಮ್ಮ ಸೋದರಿ.**
**ಬಿ.ಎಸ್. ಶಾಂತಾ ಬಾಯಿ, ಪ್ರಧಾನ ಕಾರ್ಯದರ್ಶಿ,**
**ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ,**
**ಬೆಂಗಳೂರು.**

ಪತ್ರಿಕಾ ಪ್ರಕಟಣೆ

ದಿನಾಂಕ: 07–07–2023

# ಮುಸ್ಲಿಮರ ಭಿನ್ನಾಭಿಪ್ರಾಯ ಮತ್ತು ಅನೈಕ್ಯತೆಯೇ ಮುಸ್ಲಿಮರನ್ನು ದಮನಿಸಲು ಮತ್ತು ಇಸ್ಲಾಮನ್ನು ಗುರಿಯಾಗಿಸಲು ಇತರರಿಗೆ ಅವಕಾಶ ನೀಡುತ್ತದೆ ಎಂದು ಜಾಗತಿಕ ಮುಸ್ಲಿಂ ನಾಯಕ ಹೇಳುತ್ತಾರೆ.

**ಅಹ್ಮದಿಯಾ ಮುಸ್ಲಿಂ ಸಂಘಟನೆಯ ಮುಖ್ಯಸ್ಥ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಅವರು, ಪ್ಯಾಲೆಸ್ತೀನಿಯರ ವಿರುದ್ಧದ ಕ್ರೌರ್ಯವನ್ನೂ ಸ್ವೀಡನ್‌ನಲ್ಲಿ ಖುರ್‌ಆನನ್ನು ಸುಡುವ ಹೇಯ ಕೃತ್ಯ ಮತ್ತು ಫ್ರಾನ್ಸ್‌ನಲ್ಲಿನ ಗಲಭೆಗಳನ್ನು ತೀವ್ರವಾಗಿ ಖಂಡಿಸಿ ಅದರ ಬಗ್ಗೆ ಪ್ರತಿಕ್ರಿಯಿಸಿದ್ದಾರೆ.**

ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಸರ್ವೋಚ್ಚ ನಾಯಕ (ಖಲೀಫ) ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಅವರು ಮುಸ್ಲಿಂ ಲೋಕದ ನಡುವಿನ ಏಕತೆಯ ಕೊರತೆಯ ಬಗ್ಗೆ ತಮ್ಮ ದುಃಖ ಮತ್ತು ವಿಷಾದವನ್ನು ವ್ಯಕ್ತಪಡಿಸಿದರು ಮತ್ತು ಮುಸ್ಲಿಂ ಉಮ್ಮಾದ ದೌರ್ಬಲ್ಯವು ಇಸ್ಲಾಂ ವಿರೋಧಿಗಳನ್ನು, ಮುಸ್ಲಿಮರನ್ನು ಗುರಿಯಾಗಿಸಲು ಶಕ್ತಗೊಳಿಸುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಜುಲೈ 7, 2023ರಂದು ಟಿಲ್‌ಫೋರ್ಡ್‌ನ (U.K) ಇಸ್ಲಾಮಾಬಾದ್‌ನಲ್ಲಿರುವ ಮುಬಾರಕ್ ಮಸೀದಿಯಲ್ಲಿ ಶುಕ್ರವಾರದ ಧರ್ಮೋಪದೇಶದ ಸಮಯದಲ್ಲಿ ಅವರು, ಪ್ಯಾಲೇಸ್ತೀನಿಯನ್ ಮುಸ್ಲಿಮರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ, ಸ್ವೀಡನ್‌ನಲ್ಲಿ ನಡೆದ ಖುರ್‌ಆನ್ ದಹನ ಮತ್ತು ಫ್ರಾನ್ಸಿನಲ್ಲಿ ನಹೆಲ್ ಮೆರ್ಝೂಕ್ ಎಂಬ ಯುವಕನನ್ನು ಪೋಲೀಸರು ಹತ್ಯೆಗೈದ ನಂತರದ ಫ್ರೆಂಚ್ ಗಲಭೆಗಳ ಬಗ್ಗೆ ಚರ್ಚಿಸಿದರು.

ಈ ಘಟನೆಗಳಿಗೆ ಸಂಬಂಧಿಸಿದಂತೆ, ಎಲ್ಲ ರೀತಿಯ ಪಂಥೀಯ ದ್ವೇಷ ಮತ್ತು ವಿಭಜನೆಯನ್ನು ಕೊನೆಗೊಳಿಸಲು ವಿಶ್ವಾದ್ಯಂತ ಮುಸ್ಲಿಂ ಸಮುದಾಯವು ಒಂದಾಗಬೇಕು. ಇದು ಮಾತ್ರವೇ ಇಸ್ಲಾಂ ವಿರುದ್ಧ ನಡೆಯುತ್ತಿರುವ ಅನ್ಯಾಯದ ಹಿಂಸಾಚಾರವನ್ನು ಕೊನೆಗೊಳಿಸಲು ಮುಸ್ಲಿಮರಿಗೆ ಇರುವ ಏಕೈಕ ಮಾರ್ಗವಾಗಿದೆ ಎಂದು ಅವರು ಹೇಳಿದರು.

ಪ್ಯಾಲೇಸ್ತೀನ್‌ನಲ್ಲಿನ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪಿಸುತ್ತಾ, ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಹೇಳಿದರು: **"ನಾವು ಪ್ಯಾಲೇಸ್ತೀನಿಯರಿಗಾಗಿ ಪ್ರಾರ್ಥಿಸಬೇಕು. ಅಲ್ಲಾಹನು ತುಳಿತಕ್ಕೊಳಗಾದ ಜನರಿಗೆ ನೆಮ್ಮದಿ ಮತ್ತು ಶಾಂತಿಯನ್ನು ನೀಡಲಿ. ಅವರ ಹಕ್ಕುಗಳನ್ನು ಪೂರೈಸುವ, ಅವರಿಗೆ ಸರಿಯಾದ ಮಾರ್ಗದರ್ಶನ ನೀಡುವ ಮತ್ತು ಅವರ ವಿರುದ್ಧ ಆಗುತ್ತಿರುವ ಅನ್ಯಾಯಗಳಿಂದ ಅವರನ್ನು ಮುಕ್ತಗೊಳಿಸುವ ನಾಯಕರನ್ನು ಅವನು ಅವರಿಗೆ ನೀಡಲಿ. ಅವರು ಎದುರಿಸುತ್ತಿರುವ ದೌರ್ಜನ್ಯಗಳು ವಿಪರೀತ ಮಟ್ಟವನ್ನು ತಲುಪಿವೆ. ಆದರೆ ಅವರನ್ನು ರಕ್ಷಿಸಲು ಅಥವಾ ಮಾರ್ಗದರ್ಶನ ಮಾಡಲು ಯಾರೂ ಇಲ್ಲ. ಲೋಕದ ಮುಸ್ಲಿಮರು ಒಂದಾದರೆ ಮಾತ್ರ ಅವರು ಈ ಪರೀಕ್ಷೆ ಮತ್ತು ಕ್ಲೇಶಗಳಿಂದ ಮುಕ್ತರಾಗುತ್ತಾರೆ."**

ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಅವರು ಕಳೆದ ವಾರ ಸ್ವೀಡನ್‌ನಲ್ಲಿ ಪವಿತ್ರ ಖುರ್‌ಆನನ್ನು ದಹಿಸಿದ ಘಟನೆಯನ್ನು ತೀವ್ರವಾಗಿ ಖಂಡಿಸಿದರು: **"ಸ್ವೀಡನ್ ಮತ್ತು ಇತರ ದೇಶಗಳಲ್ಲಿ, ಜನರು ವಾಕ್ ಸ್ವಾತಂತ್ರ್ಯದ ಹೆಸರಿನಲ್ಲಿ (ಇಸ್ಲಾಂ ವಿರುದ್ಧ) ಏನು ಬೇಕಾದರೂ ಹೇಳಲು ಸಂಪೂರ್ಣವಾಗಿ ಸ್ವತಂತ್ರರಾಗಿದ್ದಾರೆ! ಇದರ ನೆಪದಲ್ಲಿ ಅವರು ಮುಸ್ಲಿಮರ ಭಾವನೆಗಳೊಂದಿಗೆ ಕ್ರೂರವಾಗಿ ಆಟವಾಡುತ್ತಿದ್ದಾರೆ ಮತ್ತು ಅವರಿಗೆ ತೀವ್ರವಾಗಿ ನೋವುಂಟುಮಾಡುತ್ತಾರೆ. ಅವರ ವರ್ತನೆಗಳು ಕ್ರೂರ ಮತ್ತು ಅಸಹ್ಯಕರವಾಗಿದ್ದು, ಆ ಮೂಲಕ ಅವರು ಪವಿತ್ರ ಖುರ್‌ಆನನ್ನು ಅಪವಿತ್ರಗೊಳಿಸುತ್ತಾರೆ, ಅಥವಾ ಪ್ರವಾದಿ ಮುಹಮ್ಮದ್(ಸ) ಬಗ್ಗೆ ಅಶ್ಲೀಲ ಪದಗಳನ್ನು ಬಳಸುತ್ತಾರೆ. ಈ ನಿಟ್ಟಿನಲ್ಲಿ, ಮುಸ್ಲಿಮರು ಎದುರಿಸುತ್ತಿರುವ ಭೀಕರ ಪರಿಸ್ಥಿತಿಗೆ ಮುಸ್ಲಿಂ ಸರ್ಕಾರಗಳೂ ಜವಾಬ್ದಾರರಾಗಿರುತ್ತಾರೆ. ಏಕೆಂದರೆ ಅವರ ಅನೈಕ್ಯತೆಯು ಇಸ್ಲಾಮ್ ವಿರೋಧಿ ಶಕ್ತಿಗಳಿಗೆ ಈ ಹೇಯ ಮಾರ್ಗವನ್ನು ಆಶ್ರಯಿಸಲು ಅವಕಾಶ ಮಾಡಿಕೊಟ್ಟಿದೆ. ಮುಸ್ಲಿಮರು ಒಂದು ನಿಲುವು ತೆಗೆದುಕೊಂಡರೆ ಅಥವಾ ಪ್ರತಿಕ್ರಿಯಿಸಿದರೆ ಕೂಡ (ಖುರ್‌ಆನ್ ಸುಡುವಿಕೆಯ ವಿರುದ್ಧ) ಅದು ಕೇವಲ ತಾತ್ಕಾಲಿಕ ಪ್ರತಿಕ್ರಿಯೆಯಾಗಿದೆ ಹಾಗೂ ಯಾವುದೇ ಶಾಶ್ವತ ಪರಿಣಾಮ ಬೀರುವುದಿಲ್ಲ. ಆದ್ದರಿಂದ, ನಾವು ಮುಸ್ಲಿಂ ನಾಯಕರು ಮತ್ತು ಉಮ್ಮಾಕ್ಕಾಗಿ ಪ್ರಾಮಾಣಿಕವಾಗಿ ಪ್ರಾರ್ಥಿಸಬೇಕು. ಪ್ರಾರ್ಥನೆಯ ಅವಶ್ಯಕತೆ ಬಹಳವಾಗಿದೆ."**

ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಅವರು, ಹದಿಹರೆಯದ ನಹೇಲ್ ಮೆರ್ಝೂಕ್ ಅವರ ಹತ್ಯೆಯ ಪರಿಣಾಮವಾಗಿ ಫ್ರಾನ್ಸ್‌ನಲ್ಲಿ ಇತ್ತೀಚಿನ ಗಲಭೆಗಳ ಬಗ್ಗೆ ಹೇಳಿದರು: **"ಫ್ರಾನ್ಸ್‌ನಲ್ಲಿಯೂ ಮುಸ್ಲಿಮರನ್ನು ಗುರಿಯಾಗಿಸಲಾಗುತ್ತಿದೆ. ಆದಾಗ್ಯೂ, ಕೆಲವು ಮುಸ್ಲಿಮರ (ನಹೆಲ್ ಮೆರ್ಝೂಕ್ ಹತ್ಯೆಯ ನಂತರ) ಮತ್ತು ಇತ್ತೀಚಿನ ದಿನಗಳಲ್ಲಿ ಅವರೊಂದಿಗೆ ಸೇರಿಕೊಂಡವರ ಹಿಂಸಾತ್ಮಕ ಪ್ರತಿಕ್ರಿಯೆಯು ಸಹ ಸರಿಯಾದ ವಿಧಾನವಲ್ಲ. ವಿನಾಶವನ್ನು ಉಂಟುಮಾಡುವುದರಿಂದ ಏನನ್ನೂ ಪಡೆಯಲಾಗುವುದಿಲ್ಲ. ಬದಲಿಗೆ, ಮುಸ್ಲಿಮರು ತಮ್ಮ ಕಾರ್ಯಗಳು ಪ್ರತಿ ಹಂತದಲ್ಲೂ ಇಸ್ಲಾಂನ ಬೋಧನೆಗಳಿಗೆ ಅನುಗುಣವಾಗಿ ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ಮುಸ್ಲಿಮರ ಮಾತು ಮತ್ತು ಕಾರ್ಯಗಳು ಇಸ್ಲಾಮಿನ ಬೋಧನೆಗಳಿಗೆ ಹೊಂದಿಕೆಯಾದಾಗ ಮಾತ್ರ ಅವರು ಶಾಂತಿ ಮತ್ತು ಯಶಸ್ಸನ್ನು ಪಡೆಯಬಹುದು. ಅಂತೂ, ಸರ್ವಶಕ್ತನಾದ ಅಲ್ಲಾಹನು ಎಲ್ಲ ಜನರನ್ನು ಅನ್ಯಾಯದಿಂದ ರಕ್ಷಿಸಲಿ ಎಂದೂ ಜಗತ್ತಿನಲ್ಲಿ ಶಾಂತಿ ನೆಲೆಸಲಿಕ್ಕೂ ಪ್ರತಿಯೊಬ್ಬರೂ ಪರಸ್ಪರರ ಜವಾಬ್ದಾರಿಗಳನ್ನು ಪೂರೈಸುವ ನಿರ್ಣಾಯಕ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವಂತಾಗಲಿ ಎಂದೂ ನಾವು ಮುಸ್ಲಿಮರಿಗಾಗಿಯೂ ಮತ್ತು ವಿಶಾಲ ಜಗತ್ತಿಗಾಗಿಯೂ ವಿಶೇಷವಾಗಿ ಪ್ರಾರ್ಥಿಸಬೇಕು. ಇಲ್ಲದಿದ್ದರೆ, ಜಗತ್ತು ವೇಗವಾಗಿ ದೊಡ್ಡ ದುರಂತದತ್ತ ಸಾಗಲಿದೆ.**

ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಹೇಳಿದರು: "(ಫ್ರಾನ್ಸ್)ನಲ್ಲಿ ಬಲಿಪಶುವನ್ನು ಬೆಂಬಲಿಸಲು ಬಹಳಷ್ಟು ಮಾಡಲಾಗುತ್ತಿದೆ ಎಂದು **ಹೇಳಲ್ಪಡುತ್ತದೆ. ಆದಾಗ್ಯೂ, ಸಾರ್ವಜನಿಕ ಪ್ರತಿಕ್ರಿಯೆಯು ಭಿನ್ನ ಕಥೆಯನ್ನು ಹೇಳುತ್ತದೆ. ಕೊಲ್ಲಲ್ಪಟ್ಟ ಹುಡುಗ ಮತ್ತು ಪೊಲೀಸ್ ಅಧಿಕಾರಿಗಾಗಿ ಬೇರೆ** ಬೇರೆ ಆನ್‌ಲೈನ್ ನಿಧಿಸಂಗ್ರಹಣೆಯನ್ನು ನಡೆಸಲಾಗಿದೆ ಎಂದು ವರದಿಯಾಗಿದೆ. **ಆ ವರದಿಗಳ ಪ್ರಕಾರ, ಹುಡುಗನಿಗೆ ಸಂಗ್ರಹಿಸಿದ ನಿಧಿಯು ಪೋಲೀಸ್ ಅಧಿಕಾರಿಯ ಬೆಂಬಲಕ್ಕಾಗಿ ಸಂಗ್ರಹಿಸಿದ ನಿಧಿಯ ಒಂದು ಭಾಗ ಮಾತ್ರ. ಅಲ್ಲಾಹನು ಕರುಣಿಸಲಿ, ಈ ಜನರಿಗೆ ನ್ಯಾಯಪಾಲನೆಯ ಬುದ್ಧಿಯನ್ನು ನೀಡಲಿ. ಮುಸ್ಲಿಮರು ಒಂದಾಗಲಿ.."**

**ಪತ್ರಿಕಾ ಪ್ರಕಟಣೆ** ದಿನಾಂಕ: 27–07–2023

**ಪ್ರತಿಯೊಬ್ಬ ವ್ಯಕ್ತಿಯು ತನ್ನ ಆಯ್ಕೆಯ ಯಾವುದೇ ಧರ್ಮದೊಂದಿಗೆ ಗುರುತಿಸಿಕೊಳ್ಳುವ ಹಕ್ಕನ್ನು ಹೊಂದಿರುತ್ತಾನೆ. ಯಾವುದೇ ಸಂಘಟನೆ ಅಥವಾ ಸಂಸ್ಥೆಯು ಈ ಮೂಲಭೂತ ಹಕ್ಕನ್ನು ಕಸಿದುಕೊಳ್ಳಲು ಸಾಧ್ಯವಿಲ್ಲ.**

**ಅಹ್ಮದಿಯರನ್ನು ಮುಸ್ಲಿಮೇತರರೆಂದು ಘೋಷಿಸಿದ ನಿರ್ಣಯವನ್ನು ಖಂಡಿಸಿದ್ದಕ್ಕಾಗಿ ಭಾರತದ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯಕ್ಕೆ ಭಾರತದ ಅಹ್ಮದಿಯಾ ಮುಸ್ಲಿಂ ಜಮಾಅತ್ ಕೃತಜ್ಞತೆ ಸಲ್ಲಿಸುತ್ತದೆ.**

**ಸಚಿವಾಲಯವು ನಮ್ಮ ಮನವಿಗೆ ತಕ್ಷಣವೇ ಸ್ಪಂದಿಸಿತು ಮತ್ತು ಸಂಬಂಧಪಟ್ಟ ನಿರ್ಣಯವು ಕಾನೂನಿಗೆ ವಿರುದ್ಧವಾಗಿದೆ ಮತ್ತು ಅಸಂವಿಧಾನಿಕವಾಗಿದೆ ಎಂದು ಹೇಳಿದೆ.**

ಮುಸ್ಲಿಂ ಸಂಘಟನೆಯೊಂದು ನೀಡಿದ ತೀರ್ಪಿನ (ಫತ್ವಾ) ಆಧಾರದ ಮೇಲೆ, ಅಹ್ಮದಿಯಾ ಮುಸ್ಲಿಂ ಜಮಾಅತನ್ನು ಭಾರತದ ಒಂದು ರಾಜ್ಯದ ವಕ್ಫ್ ಬೋರ್ಡ್ ಮುಸ್ಲಿಮೇತರರು ಎಂದು ಘೋಷಿಸಿತು. ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯವು ಈ ವಿಷಯದಲ್ಲಿ ಮಧ್ಯಪ್ರವೇಶಿಸಿತು ಮತ್ತು ನಿರ್ಣಯವು ಕಾನೂನಿಗೆ ವಿರುದ್ಧವಾಗಿದೆ ಮತ್ತು ಅಸಂವಿಧಾನಿಕವಾಗಿದೆ ಎಂದು ಪ್ರಸ್ತಾಪಿಸಿದೆ. ಇದಕ್ಕಾಗಿ ಅಹ್ಮದಿಯಾ ಮುಸ್ಲಿಂ ಜಮಾಅತ್ ಭಾರತವು ಸಚಿವಾಲಯಕ್ಕೆ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಇದು ವಿಭಿನ್ನ ಸಿದ್ಧಾಂತಗಳಿಗೆ ನೆಲೆಯಾಗಿದೆ. ಇಲ್ಲಿ ವಿವಿಧ ನಂಬಿಕೆಗಳು ಮತ್ತು ಧರ್ಮಗಳ ಜನರು ಪ್ರೀತಿ ಮತ್ತು ಸಹೋದರತೆಯಿಂದ ಒಟ್ಟಿಗೆ ವಾಸಿಸುತ್ತಾರೆ. ಭಾರತೀಯ ಸಂವಿಧಾನದ ಪ್ರಕಾರ, ಈ ದೇಶದ ಪ್ರತಿಯೊಬ್ಬ ಪ್ರಜೆಗೂ ತನ್ನ ಆಯ್ಕೆಯ ಯಾವುದೇ ಧರ್ಮದೊಂದಿಗೆ ಗುರುತಿಸಿಕೊಳ್ಳುವ ಹಕ್ಕು ಇದೆ. ಇದರ ಹೊರತಾಗಿಯೂ, ಕೆಲವು ಮುಸ್ಲಿಂ ಸಂಘಟನೆಗಳು ಮತ್ತು ವಕ್ಫ್ ಮಂಡಳಿಗಳು ಅಹ್ಮದಿಯಾ ಮುಸ್ಲಿಂ ಸಮುದಾಯದ ಧಾರ್ಮಿಕ ಹಕ್ಕುಗಳನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿವೆ.

ಇದು ದೇಶದ ಶಾಂತಿಯುತ ವಾತಾವರಣದಲ್ಲಿ ಅಶಾಂತಿ ಸೃಷ್ಟಿಸುವ ಮತ್ತು ಅಹ್ಮದಿಯಾ ಮುಸ್ಲಿಂ ಜಮಾಅತಿನ ವಿರುದ್ಧ ಜನರನ್ನು ಕೆರಳಿಸುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ.

ಮುಸ್ಲಿಂ ಎಂಬುದರ ಅರ್ಥಕ್ಕೆ ಸಂಬಂಧಿಸಿದಂತೆ, ಪವಿತ್ರ ಖುರ್‌ಆನಿನಲ್ಲಿ ಬಲವಾದ ಆಧಾರವನ್ನು ಹೊಂದಿರುವ, ಹಝ್ರತ್ ಪೈಗಂಬರರ(ಸ) ನುಡಿಗಳಿಗೆ ಅನುಗುಣವಾಗಿರುವ ಮತ್ತು ಪೈಗಂಬರರ(ಸ) ನಾಲ್ವರು ಖಲೀಫರ ಕಾಲದಲ್ಲಿ ಅನುಷ್ಠಾನಕ್ಕೆ ತರಲಾದಂತಹ ವ್ಯಾಖ್ಯಾನವನ್ನು ಮಾತ್ರ ಅಹ್ಮದಿಯಾ ಮುಸ್ಲಿಂ ಜಮಾಅತ್ ಸ್ವೀಕರಿಸುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳುತ್ತಾರೆ:

**"ಇಸ್ಲಾಂ ಧರ್ಮವನ್ನು ಐದು ಸ್ತಂಭಗಳ ಮೇಲೆ ನಿರ್ಮಿಸಲಾಗಿದೆ: 1. ಸರ್ವಶಕ್ತನಾದ ಅಲ್ಲಾಹನನ್ನು ಹೊರತುಪಡಿಸಿ ಯಾವುದೇ ಆರಾಧ್ಯನು ಇಲ್ಲ ಮತ್ತು ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂದು ಸಾಕ್ಷ್ಯವಹಿಸುವುದು. 2. ನಮಾಝನ್ನು ನಿರ್ವಹಿಸುವುದು. 3. ಝಕಾತ್ (ಕಡ್ಡಾಯ ದಾನ) ನೀಡುವುದು. 4. ಪವಿತ್ರ ರಮಝಾನ್ ಮಾಸದಲ್ಲಿ ಉಪವಾಸವನ್ನು ಅನುಷ್ಠಿಸುವುದು. 5. ಹಜ್ಜ್ ಮಾಡಲು ಸಾಧ್ಯವಿದ್ದರೆ ಹಜ್ಜ್ ಮಾಡುವುದು."**

**(ಸಹೀಹ್ ಮುಸ್ಲಿಂ, ಕಿತಾಬುಲ್ ಈಮಾನ್)**

ಇಸ್ಲಾಮಿನ ಈ ಮೂಲಭೂತ ನಂಬಿಕೆಯನ್ನು ಮನಸ್ಸಾರೆ ಮತ್ತು ಅತ್ಯಂತ ಪ್ರಾಮಾಣಿಕತೆಯಿಂದ ಅಹ್ಮದಿಯಾ ಮುಸ್ಲಿಂ ಸಮುದಾಯ ಸ್ವೀಕರಿಸುತ್ತದೆ ಮತ್ತು ಪಾಲಿಸುತ್ತದೆ. ನಾವು ಶಾಂತಿಪ್ರಿಯ ಸಮುದಾಯವಾಗಿದ್ದು, ದೇಶದ ಕಾನೂನುಗಳಿಗೆ ಸಂಪೂರ್ಣವಾಗಿ ಬದ್ಧರಾಗಿದ್ದೇವೆ. ಶಾಂತಿಸ್ಥಾಪನೆಗಾಗಿ ತನ್ನ ವಿವಿಧ ಪ್ರಯತ್ನಗಳ ಕಾರಣದಿಂದ ಈ ಸಂಘಟನೆ ದೇಶದಾದ್ಯಂತ ಪ್ರಸಿದ್ಧಿಯನ್ನು ಪಡೆದಿದೆ.

ಅಹ್ಮದಿಯಾ ಮುಸ್ಲಿಂ ಸಂಘಟನೆಯ ವಿರುದ್ಧ ಮೌಲವಿಯರು ಅನೇಕ ಸುಳ್ಳಾರೋಪಗಳನ್ನು ಮಾಡುತ್ತಾರೆ. ನಾವು ಹಝ್ರತ್ ಮುಹಮ್ಮದ್ ಪೈಗಂಬರರನ್ನು[ಸ] ನಂಬುವುದಿಲ್ಲ ಅಥವಾ ನಮಗೆ ಬೇರೆ ಧರ್ಮವಿದೆ ಎಂಬಿತ್ಯಾದಿ ಆರೋಪಗಳನ್ನು ಹೊರಿಸುತ್ತಾರೆ. ಈ ಎಲ್ಲ ಆರೋಪಗಳು ಸಂಪೂರ್ಣವಾಗಿ ಆಧಾರರಹಿತ ಮತ್ತು ಸುಳ್ಳಾಗಿವೆ. ಪ್ರವಾದಿ ಮುಹಮ್ಮದ್‌ರನ್ನು[ಸ] ಅಹ್ಮದಿಯಾ ಮುಸ್ಲಿಂ ಸಂಘಟನೆ ಸಂಪೂರ್ಣ ಪ್ರಾಮಾಣಿಕತೆಯಿಂದ ನಂಬುತ್ತದೆ ಮತ್ತು ಅವರನ್ನು ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಮುದ್ರೆ) ಎಂದು ಪರಿಗಣಿಸುತ್ತದೆ. ಅವರ ಗೌರವವನ್ನು ಸ್ಥಾಪಿಸಲು ಮತ್ತು ಎತ್ತಿಹಿಡಿಯಲು ನಾವು ಯಾವುದೇ ತ್ಯಾಗಕ್ಕೂ ಸಿದ್ಧರಿದ್ದೇವೆ. ನಾವು ಅದೇ **"ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್"** ಎಂಬ ಇಸ್ಲಾಮಿನ ಕಲಿಮ ವಚನವನ್ನು ಉಚ್ಚರಿಸುತ್ತೇವೆ ಮತ್ತು ಪವಿತ್ರ ಖುರ್‌ಆನ್ ಪರಿಪೂರ್ಣ ಮತ್ತು ಅಂತಿಮ ಕಾನೂನುಸಂಹಿತೆ (ಶರೀಯತ್) ಆಗಿದೆ ಎಂದು ನಂಬುತ್ತೇವೆ. ಪ್ರತಿಯೊಬ್ಬ ಅಹ್ಮದಿ ಮುಸ್ಲಿಂ ಇಸ್ಲಾಂ ಧರ್ಮದ ಐದು ಸ್ತಂಭಗಳಿಗೆ ಬದ್ಧನಾಗಿರುತ್ತಾನೆ ಮತ್ತು ವಿಶ್ವಾಸದ ಆರು ಸ್ತಂಬಗಳನ್ನು ಪ್ರಾಮಾಣಿಕವಾಗಿ ನಂಬುತ್ತಾನೆ.

2011ರ ಜನಗಣತಿ ವರದಿಯಲ್ಲಿ, ಭಾರತ ಸರ್ಕಾರವು ಅಹ್ಮದಿಯಾ ಮುಸ್ಲಿಂ ಸಂಘಟನೆಯನ್ನು ಇಸ್ಲಾಮಿನ ಪಂಥವೆಂದು ಗುರುತಿಸಿದೆ.

ಅಹ್ಮದಿಯಾ ಮುಸ್ಲಿಂ ಸಂಘಟನೆಯನ್ನು ಮುಸ್ಲಿಮೇತರ ಎಂದು ಘೋಷಿಸುವ ಹಕ್ಕು ಯಾರಿಗೂ ಇಲ್ಲ. ಹಾಗೆ ಮಾಡುವುದು ಸಂವಿಧಾನದ ಮತ್ತು ಧರ್ಮದ ಕಾನೂನುಗಳ ಉಲ್ಲಂಘನೆಯಾಗಿದೆ. ಅದೇ ರೀತಿಯಲ್ಲಿ ಸಂಘಟನೆಯ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸಲು ಪ್ರಚೋದಿಸುವುದು ರಾಷ್ಟ್ರದ ಜನರ ನಡುವೆ ಬಿರುಕು ಮೂಡಿಸಿ ದೇಶದ ಶಾಂತಿಯುತ ವಾತಾವರಣವನ್ನು ಕದಡುವುದಕ್ಕೆ ಸಮಾನವಾಗಿದೆ.

ಅಹ್ಮದಿಯರನ್ನು ಸಾಮಾಜಿಕವಾಗಿ ಬಹಿಷ್ಕರಿಸಲು ಸಾರ್ವಜನಿಕ ಪತ್ರಿಕಾ ಪ್ರಕಟಣೆಗಳನ್ನು ನೀಡುವುದು ದೇಶದಲ್ಲಿ ಅಶಾಂತಿ, ದ್ವೇಷ ಹರಡಲು ಮತ್ತು ಭಾರತೀಯರ ಐಕ್ಯತೆಯನ್ನು ಒಡೆಯಲು ಕಾರಣವಾಗಬಹುದು. ಇದನ್ನು ತಡೆಯಲು ಸರ್ಕಾರವು ತಕ್ಷಣದ ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದು ಶ್ಲಾಘನೀಯ. ಇದಕ್ಕಾಗಿ ಅಹ್ಮದಿಯಾ ಮುಸ್ಲಿಂ ಸಂಘಟನೆ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸುತ್ತದೆ.

# LOVE FOR ALL
# HATRED FOR NONE
# LET'S MAKE IT HEAVEN

## ಅಹ್ಮದಿಯಾ ಜಮಾಅತಿನ ಪ್ರಗತಿ

- ಈ ಒಂದು ವರ್ಷದಲ್ಲಿ 185 ಹೊಸ ಮಸೀದಿಗಳು ಸ್ಥಾಪಿಸಲ್ಪಟ್ಟಿವೆ.
- ಇಷ್ಟರ ವರೆಗೆ 76 ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಭಾಷಾಂತರ ಪ್ರಕಟಿಸಲ್ಪಟ್ಟಿದೆ.
- ಈ ವರ್ಷ 329 ಹೊಸ ಜಮಾಅತ್ ಘಟಕಗಳು ಸ್ಥಾಪಿಸಲ್ಪಟ್ಟಿವೆ.
- **Review of Religions** ಮಾಸ ಪತ್ರಿಕೆ ಮೂರು ಭಾಷೆಗಳಲ್ಲಿ 201,000 ಪ್ರತಿಗಳು ಪ್ರಕಟಿಸಲ್ಪಟ್ಟಿವೆ.
- ಇಷ್ಟರ ವರೆಗೆ ವಕ್ಫೆ ನೌ ಯೋಜನೆಯಲ್ಲಿ 80,600 ಸದಸ್ಯರಿದ್ದಾರೆ – ಗಂಡು 47222, ಹೆಣ್ಣು 33778.
- "ಅಲ್‌ಫಝ್ಲ್" ದಿನ ಪತ್ರಿಕೆಯಿಂದ 76,00,000 ಮಂದಿ ಪ್ರಯೋಜನ ಪಡೆದಿದ್ದಾರೆ.
- 11,714,000 ಕಿರು ಹೊತ್ತಗೆಗಳ ಮೂಲಕ 107 ದೇಶಗಳ 18,091,000 ಮಂದಿಗೆ ಅಹ್ಮದಿಯಾ ಸಂದೇಶ ತಲಪಿದೆ.
- 114 ದೇಶಗಳಿಗೆ ಮತ್ತು 430 ಜನಾಂಗಗಳಿಗೆ ಸೇರಿದ 2,17,168 ಮಂದಿ ಈ ವರ್ಷ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ.
- **Alislam.org** ವೆಬ್‌ಸೈಟ್‌ನಲ್ಲಿ 1356 ಪುಸ್ತಕಗಳು ಉರ್ದು ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ದೊರೆಯುತ್ತವೆ.
- **MTA INTERNATIONAL** 23 ಭಾಷೆಗಳಲ್ಲಿ 8 ಚ್ಯಾನೆಲ್ ಮೂಲಕ ಬಿತ್ತರಿಸಲ್ಪಡುತ್ತದೆ.
- ಲೋಕದಾದ್ಯಂತ 26 ಭಾಷೆಗಳಲ್ಲಿ 124 ವಾರ್ತಾ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಪ್ರಕಟಗೊಳ್ಳುತ್ತಿವೆ.
- 9166 ಎಕ್ಸಿಬಿಶನ್‌ಗಳನ್ನು ಏರ್ಪಡಿಸಲಾಗಿದೆ. 420,000 ಮಂದಿಗೆ ಅಹ್ಮದಿಯಾ ಸಂದೇಶ ತಲಪಿದೆ.
- ಲೋಕದಲ್ಲೆಡೆ 1,590,000 ಜನರಿಗೆ 9,956,000 ಪುಸ್ತಕಗಳನ್ನು ಉಚಿತವಾಗಿ ಹಂಚಲಾಗಿದೆ.
- 8,567 ಪುಸ್ತಕ ಮಳಿಗೆಗಳ ಮೂಲಕ 1,767,000 ಜನರಿಗೆ ಸಂದೇಶ ತಲಪಿದೆ.
- **VOICE OF ISLAM** ಮೂಲಕ 5.8 ಮಿಲಿಯನ್ ವಸತಿಗಳಲ್ಲಿರುವ 15 ಮಿಲಿಯನ್ ಜನರಿಗೆ ಸಂದೇಶ ತಲಪಿದೆ.

(ಯು.ಕೆ.ಯಲ್ಲಿ ಜರಗಿದ ವಾರ್ಷಿಕ ಸಮ್ಮೇಳನದಲ್ಲಿ 29–07–2023ರಂದು ಅಹ್ಮದಿಯಾ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಮಾಡಿದ ಭಾಷಣದಿಂದ)


**"ಯುಗರಶ್ಮಿಗೆ" ಚಂದಾದಾರರಾಗಿರಿ**

ವಾರ್ಷಿಕ ಚಂದಾ : ರೂ. 60/–

ಅಂಚೆ ಮೂಲಕ : ರೂ. 70/–

ಸಂಪರ್ಕಿಸಿರಿ : **99 00 410 789**

ಬೆಂಗಳೂರಿನಲ್ಲಿ
ಅಹ್ಮದಿಯಾ
ವಿಚಾರ ಸಂಕಿರಣ






ಮಡಿಕೇರಿಯಲ್ಲಿ
ಮಜ್ಲಿಸ್ ಖುದ್ದಾಮುಲ್
ಅಹ್ಮದಿಯಾ ಇಜ್ತಿಮಾ






ಬೆಂಗಳೂರಿನಲ್ಲಿ
ಮಜ್ಲಿಸ್
ಅನ್ಸಾರುಲ್ಲಾಹ್
ಇಜ್ತಿಮಾ

Registered with the Registrar of Newspapers for India No. R.N. 27354/75
**Yugarashmi** Kannada Quarterly, **August - 2023.** Price : **Rs. 15/-**




## ಮೂರನೇ ಮಹಾಯುದ್ಧದ ಭೀತಿ ದಿನೇ ದಿನೇ ವರ್ಧಿಸುತ್ತಿದೆ.

ಹಜ್ರತ್ ಮಿರ್ಜಾ ಮಸ್ರೂರ್ ಅಹ್ಮದ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರ

**#STOPWW3**

Ahmadiyya Muslim Community, India

## ಜಾಗತಿಕ ಶಾಂತಿಯ ದೂತ ಮುಂದಿರಿಸಿದ ಶಾಂತಿ ಸ್ಥಾಪನೆಯ ಸುವರ್ಣ ತತ್ವಗಳು

1. ಸೃಷ್ಟಿಕರ್ತನನ್ನು ಅರಿಯಿರಿ
2. ಸಂಪೂರ್ಣ ನ್ಯಾಯಪಾಲನೆ ಸ್ಥಾಪಿಸಿರಿ
3. ಜಾಗತಿಕ ಏಕತೆಗೆ ಪ್ರೋತ್ಸಾಹ ಕೊಡಿರಿ
4. ಅಣ್ವಸ್ತ್ರವನ್ನು ಕೊನೆಗೊಳಿಸಿರಿ
5. ಆಯುಧ ವ್ಯಾಪಾರದಿಂದ ಅತಿಲಾಭ ಪಡೆಯುವುದನ್ನು ವರ್ಜಿಸಿರಿ
6. ಆರ್ಥಿಕ ಸಮಾನತೆಯನ್ನು ಸ್ಥಾಪಿಸಿರಿ ಮತ್ತು ಬಡತನವನ್ನು ತೊಡೆದುಹಾಕಿರಿ
7. ದೇಶದ ಏಳಿಗೆಗಾಗಿ ಪ್ರಯತ್ನಿಸಿರಿ
8. ಉಗ್ರವಾದವನ್ನು ತಿರಸ್ಕರಿಸಿರಿ
9. ಮನುಕುಲದ ಸೇವೆ ಮಾಡಿರಿ
10. ಪರಸ್ಪರರ ವಿಶ್ವಾಸಗಳನ್ನು ಆದರಿಸಿರಿ.

1800-103-2131 (Toll Free)

www.lightofislam.in
www.alislam.org

www.mta.tv
www.stopww3.co.uk

islaminind

islaminindia

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore